
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

21 ಅಕ್ಟೋಬರ್ 2015 ಪುಟ 20 ರೂ. 15/-




ಶಾಮಣ್ಣ ಜೊತೆಯಲ್ಲಿ ಒಂದು ದಿನ



ಶಿವಣ್ಣ ಪಾರ್ಟಿ ಸೀಟು ಪಡಿಪಾಟು



ಮುಸ್ಲಿಮ್ ಎಂಬ ಕಾರಣಕ್ಕೆ ಹೊಡೆದು ಕೊಂದರು ದಲಿತ ಎಂಬ ಕಾರಣಕ್ಕೆ ಸುಟ್ಟು ಕೊಂದರು!





ಮೈಸೂರು

ಸುಧಾ ಆಂಟಿಯ ಅಕ್ರಮ ಸಂಬಂಧಕ್ಕೆ ಗಂಡನೇ ಬಲಿ!



ಹಗರಿಬೊಮ್ಮನಹಳ್ಳಿ

ಶಾಸಕನೇ ಕಂಟಕ!




ಕಂದಕದ ಕೊನೆಯಲ್ಲಿ ಭರವಸೆಯ ಬೆಳಕ

ಎರಡು ದಶಕಗಳಲ್ಲೇ ಅತ್ಯಂತ ಭೀಕರವಾದ ಬರ ಈ ವರ್ಷ ದೇಶಾದ್ಯಂತ ಆವರಿಸಿಕೊಂಡಿದೆ. ಸುಮಾರು 50 ಕೋಟಿ ಗ್ರಾಮೀಣ ಜನತೆ ಬರಗಾಲದ ಹೊಡೆತಕ್ಕೆ ತತ್ತರಿಸಿಹೋಗಿದ್ದಾರೆ. ಆದರೆ ನಮ್ಮ ಸುದ್ದಿ ಮಾಧ್ಯಮಗಳು ಶೀನಾ ಬೋರಾ ಮತ್ತು ಇಂದ್ರಾಣಿ ಮುಖರ್ಜಿಯಂಥ ಪ್ರಕರಣವನ್ನು ರಾಷ್ಟ್ರೀಯ ಸುದ್ದಿಯಾಗಿಸುತ್ತಿವೆ. ಕಪಟ ಸನ್ಯಾಸಿಯೊಬ್ಬ ಮಾಂಸಾಹಾರದ ಬಗ್ಗೆಯೋ ಅಥವ ಮತಾಂತರದ ಬಗ್ಗೆಯೋ ಏನಾದರೂ ಒದರಿದರೆ ಅಂಥ ನಾಲಾಯಕ್ ಸುದ್ದಿ ವಾರವಿಡೀ ಮಾಧ್ಯಮಗಳನ್ನು ಆವರಿಸಿಕೊಳ್ಳುತ್ತದೆ. ಆದರೆ ಸುಮಾರು 50 ಕೋಟಿ ಜನರ ಜೀವನವನ್ನು ದುರ್ಬರ ಸ್ಥಿತಿಗೆ ದೂಡಿರುವ ಅನಾವೃಷ್ಟಿಯ ಬಗ್ಗೆ ಸುದ್ದಿಗಳಾಗಲಿ, ಪರಿಹಾರ ಕ್ರಮಗಳನ್ನು ಸೂಚಿಸುವಂಥ ಚರ್ಚೆಗಳಾಗಲಿ ಎಲ್ಲೂ ಕಾಣಸಿಗುತ್ತಿಲ್ಲ.

ಹೀಗಿರುವಾಗ ಕಳೆದ ವಾರ ಗಾಂಧಿ ಜಯಂತಿಯ ದಿನದಂದು ಪ್ರೊ.ಯೋಗೇಂದ್ರ ಯಾದವ್ ಅವರ ನೇತೃತ್ವದಲ್ಲಿ ಒಂದು ಅಧ್ಯಯನ ತಂಡ ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳ ಹಲವು ಬರಪೀಡಿತ ಹಳ್ಳಿಗಳಲ್ಲಿ ಸಂಚಾರ ಕೈಗೊಂಡಿತ್ತು. ಈ ಅಧ್ಯಯನ ತಂಡದಲ್ಲಿ ನಾಡಿನ ಹೆಸರಾಂತ ಸಾಹಿತಿ ಹೋರಾಟಗಾರ ದೇವನೂರು ಮಹಾದೇವ, ಭ್ರಷ್ಟ ರಾಜಕಾರಣಿಗಳಿಗೆ ನಡುಕ ಹುಟ್ಟಿಸಿರುವ ಸಮಾಜ ಪರಿವರ್ತನ ಸಮುದಾಯದ ಎಸ್.ಆರ್.ಹಿರೇಮಠ್ ಮುಂತಾದವರು ಭಾಗವಹಿಸಿದ್ದರು. ಕರ್ನಾಟಕದ ಹಳ್ಳಿಗಳ ಸಂಚಾರ ಮುಗಿಸಿದ ನಂತರ ಯೋಗೇಂದ್ರ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಬರ ಪರಿಹಾರ ಕಾಮಗಾರಿ ಕೈಗೊಳ್ಳುವಂತೆ ಆಗ್ರಹಿಸಿ ಒಂದು ಮನವಿ ಪತ್ರ ಸಲ್ಲಿಸಿದ್ದಾರೆ. ಈ ಸರ್ಕಾರ ಯಾವ ರೀತಿ ಸ್ಪಂದಿಸುತ್ತದೆ ಎಂಬುದನ್ನು ಕಾದು ನೋಡಬೇಕಷ್ಟೆ.

ಸರ್ಕಾರದ ವರದಿಗಳೇ ತಿಳಿಸುವಂತೆ ದೇಶಾದ್ಯಂತ ಸುಮಾರು 243 ಜಿಲ್ಲೆಗಳು ಈ ಬಾರಿ ಅನಾವೃಷ್ಟಿಯನ್ನು ಎದುರಿಸುತ್ತಿವೆ. ಸುಮಾರು ಶೇಕಡ 39ರಷ್ಟು ಕೃಷಿ ಪ್ರದೇಶ ಬರಗಾಲಕ್ಕೆ ತುತ್ತಾಗಿದೆ. ಸರಾಸರಿ ಮಳೆಯ ಪ್ರಮಾಣವೂ ಶೇಕಡ 15ರಷ್ಟು ಕಡಿಮೆ. ಆದರೆ ವಿಪರ್ಯಾಸ ಹೇಗಿದೆ ನೋಡಿ.

ಯಾವುದೇ ನಿರ್ದಿಷ್ಟ ಪ್ರದೇಶದಲ್ಲಿ ಸರಾಸರಿ ಮಳೆಯ ಪ್ರಮಾಣ ಶೇ.10ರಷ್ಟು ಕಡಿಮೆಯಾಗಿದ್ದರೆ ಹಾಗೂ ಶೇಕಡ 20ರಷ್ಟು ಕೃಷಿ ಪ್ರದೇಶ ನಷ್ಟಕ್ಕೆ ಈಡಾಗಿದ್ದರೆ ಆ ಪ್ರದೇಶವನ್ನು ಬರಪೀಡಿತ ಎಂದು ಘೋಷಿಸಬೇಕೆಂದು ಸರ್ಕಾರಿ ಮಾನದಂಡಗಳು ಹೇಳುತ್ತವೆ. ಆದರೆ ಇಂದಿನ ಸ್ಥಿತಿ ಈ ಮಾನದಂಡಕ್ಕಿಂತ ದುಪ್ಪಟ್ಟು ಭೀಕರವಾಗಿದ್ದರೂ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಸಂವೇದನಾರಹಿತವಾಗಿ ವರ್ತಿಸುತ್ತಿವೆ. ಕೇಂದ್ರ ಸರ್ಕಾರ ಈಗಾಗಲೇ ಈ ಬರಗಾಲವನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಿ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕಿತ್ತು, ಆದರೆ ಅದರ ಯಾವ ಸುಳಿವೂ ಇಲ್ಲ. ಕರ್ನಾಟಕ ಸರ್ಕಾರ 130 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದೆ ನಿಜ; ಬರ ಪರಿಹಾರಕ್ಕೆ ಕೈಗೊಂಡ ಕ್ರಮಗಳು. ಲೆಕ್ಕಕ್ಕುಂಟು ಆಟಕ್ಕಿಲ್ಲ ಎಂಬಂತೆ. ಇದು ಬರೀ ಸರ್ಕಾರಗಳನ್ನು ದೂಷಿಸುವ ಸಂಗತಿ ಮಾತ್ರವಲ್ಲ; ಸರ್ವವ್ಯಾಪಿ ಬಿಕ್ಕಟ್ಟಿನಿಂದ ಈಗಾಗಲೇ ಆತ್ಮಹತ್ಯೆಯ ಹಾದಿಯಲ್ಲಿರುವ ರೈತರಿಗೆ ಇದೀಗ ಬರಗಾಲ ಅಪ್ಪಳಿಸಿದೆ. ನಮ್ಮ ಅನ್ನದಾತರ ಇಂಥ ಸಂಕಷ್ಟದ ಸಂದರ್ಭದಲ್ಲಿ ಇಡೀ ನಾಗರಿಕ ಸಮಾಜದ ಸಂವೇದನೆ ಅಷ್ಟಾಗಿ ಕಾಣಿಸುತ್ತಿಲ್ಲ ಎಂಬುದು ವಿಷಾದನೀಯ ಸಂಗತಿ.



ಈ ಹಿನ್ನೆಲೆಯಲ್ಲಿ ಯೋಗೇಂದ್ರ ಯಾದವ್ ನೇತೃತ್ವದ ಜೈ ಕಿಸಾನ್ ಆಂದೋಲನ ಅಕ್ಟೋಬರ್ 2ರ ಗಾಂಧಿ ಜಯಂತಿಯ ದಿನದಿಂದ ಅಕ್ಟೋಬರ್ 15ರವರೆಗೆ ದೇಶಾದ್ಯಂತ ಒಂದು 'ಸಂವೇದನಾ ಯಾತ್ರೆ' ಆರಂಭಿಸಿದೆ. ಈ ಯಾತ್ರೆ ಅತ್ಯಂತ ಹೆಚ್ಚು ಬರಪೀಡಿತ 7 ರಾಜ್ಯಗಳಲ್ಲಿ ಅಂದರೆ ಕರ್ನಾಟಕ, ತೆಲಂಗಾಣ, ಮಹಾರಾಷ್ಟ್ರ, ಮಧ್ಯಪ್ರದೇಶ, ಉತ್ತರಪ್ರದೇಶ, ರಾಜಸ್ತಾನ ಮತ್ತು ಹರ್ಯಾಣ ರಾಜ್ಯಗಳಲ್ಲಿ ಸಂಚರಿಸಲಿದೆ.

ಸ್ವರಾಜ್ ಸಂಘಟನೆ ಯೋಗೇಂದ್ರ ಯಾದವ್ ನೇತೃತ್ವದಲ್ಲಿ 'ಜೈ ಕಿಸಾನ್ ಆಂದೋಲನ' ಚಳವಳಿಯಲ್ಲಿ ದೇಶದಾದ್ಯಂತ ಸುಮಾರು 50-60 ರೈತ ಸಂಘಟನೆಗಳು ಪಾಲ್ಗೊಂಡಿವೆ. ದೇಶದ ಬಹು ನಿರ್ಲಕ್ಷಿತ ಸಮಸ್ಯೆಯಾದ ರೈತರ ಸಮಸ್ಯೆಯನ್ನು ಮುನ್ನೆಲೆಗೆ ತಂದು, ಪರಿಹಾರವೇ ಕಾಣದಂತಿರುವ ಈ ಬಿಕ್ಕಟ್ಟಿಗೆ ಒಂದು ಸಮಗ್ರ ಪರಿಹಾರ ಕಂಡುಕೊಳ್ಳುವ ಭಾಗವಾಗಿ ಒಂದು ರಾಷ್ಟ್ರೀಯ ಚರ್ಚೆಯನ್ನು ಹುಟ್ಟುಹಾಕುವ ಉದ್ದೇಶವನ್ನು ಈ ಆಂದೋಲನ ಹೊಂದಿದೆ. ದನದ ಬಾಡು ತಿನ್ನುವುದರ ಬಗ್ಗೆ ಅಥವ ಮಂದಿರ - ಮಸೀದಿ ಗದ್ದಲದ ಬಗ್ಗೆ ರಾಷ್ಟ್ರೀಯ ಚರ್ಚೆಯಾಗಲಿ ಎಂದು ಹುಯಿಲೆಬ್ಬಿಸುತ್ತಿರುವ ಈ ಸಂದರ್ಭದಲ್ಲಿ ಇಡೀ ದೇಶದ ಅನ್ನದಾತರು ಎದುರಿಸುತ್ತಿರುವ ಬಿಕ್ಕಟ್ಟಿನ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯುವುದು ಅತ್ಯಂತ ಸ್ವಾಗತಾರ್ಹ ಕ್ರಮ.

ಈ ಯಾತ್ರೆಯಲ್ಲಿ ಭಾಗವಹಿಸುತ್ತಿರುವ ಯೋಗೇಂದ್ರ ಯಾದವ್‌ರನ್ನೂ ಒಳಗೊಂಡು ಎಲ್ಲರೂ ಹಳ್ಳಿಗರು ಕೊಡುವ ರೊಟ್ಟಿಯನ್ನೋ ಅನ್ನವನ್ನೋ ಉಂಡು, ಅದೇ ಹಳ್ಳಿಯ ಗುಡಿಯ ಪಡಸಾಲೆಯಲ್ಲೋ ಅಥವ ಯಾವುದಾದರೂ ಜಗುಲಿಯ ಮೇಲೋ ಮಲಗಿ ಮುಂದಿನ ಹಳ್ಳಿಗೆ ಪ್ರಯಾಣ ಬೆಳೆಸುತ್ತದೆ. ಇದು ಈ ಸಂವೇದನಾ ಯಾತ್ರೆಯ ಒಂದು ವಿಶೇಷ. ಮತ್ತೊಂದು ವಿಶೇಷವೆಂದರೆ ಈ ಯಾತ್ರೆಯ ಬಗ್ಗೆ ಪ್ರಚಾರ ಮಾಡಲು ಪ್ರೆಸ್‌ಮೀಟ್ ಮಾಡುವುದಾಗಲಿ, ಕರಪತ್ರ ಹಂಚುವುದಾಗಲಿ ಏನೂ ಮಾಡಿಲ್ಲ. ಯಾಕೆಂದರೆ ರೈತರ ಸಂಕಷ್ಟಗಳನ್ನು ಪ್ರಚಾರಕ್ಕೊಳಪಡಿಸಿ, ರಾಜಕೀಯವಾಗಿ ಎನ್‌ಕ್ಯಾಷ್ ಮಾಡಿಕೊಳ್ಳುತ್ತಿರುವ ರಾಜಕಾರಣಿಗಳು, ಸ್ವಘೋಷಿತ ನಾಯಕರು ಎಲ್ಲಾಕಡೆ ಬಿದ್ದು ಇಟ್ಟಾಡುತ್ತಿರುವ ಸಂದರ್ಭದಲ್ಲಿ ಸದ್ದುಗದ್ದಲವಿಲ್ಲದೆ ಈ ಸಂವೇದನಾ ಯಾತ್ರೆ ಆರಂಭಗೊಂಡಿದೆ. ಆದರೆ ಇದರ ಸುಳಿವು ಹಿಡಿದ ಮಾಧ್ಯಮದವರು ಹೋದ ಹಳ್ಳಿಗಳಲ್ಲೆಲ್ಲಾ ರಾತ್ರಿ ಹಗಲೆನ್ನದೆ ಬೆನ್ನತ್ತಿ ಈ ಸಂವೇದನಾ ಯಾತ್ರೆಯ ಬಗ್ಗೆ ಸಾಕಷ್ಟು ಮಾಡಿದ್ದು ಮತ್ತೊಂದು ವಿಶೇಷ. ಬಿಬಿಸಿ ವರದಿಗಾರನಂತೂ ತನ್ನ ಸಾಮಾನು ಸರಂಜಾಮು ಸಜ್ಜಾಗಿ ಇಡೀ ಯಾತ್ರೆಯ ಉದ್ದಕ್ಕೂ ಸಂಚರಿ



ಭಾರತದ ಇಂದಿನ ಒಟ್ಟಾರೆ ರಾಜಕಾರಣ ಬಿಟ್ಟು ಮೂರಾಬಟ್ಟೆಯಾಗಿರುವಾಗ ಈ ದೇಶದ ಎತ್ತ ಸಾಗಲಿದೆ ಎಂಬ ಆತಂಕ ಎಲ್ಲೆಡೆ ಮನೆ ಇಂಥ ಸಂದರ್ಭದಲ್ಲಿ ಬರಗಾಲದಲ್ಲಿನ ಮಳೆಯಂತೆ ಒಂದಷ್ಟು ಆಶಾದಾಯಕ ವಿದ್ಯ ಸಂಭವಿಸುತ್ತಿವೆ. ಹಾಗೆ ಭರವಸೆ ಮ ವಿದ್ಯಮಾನಗಳಲ್ಲಿ ಒಂದು ಪ್ರಮುಖ ಪ್ರೊ.ಯೋಗೇಂದ್ರ ಯಾದವ್ ನೇತೃತ್ವದಲ್ಲಿ ಅಭಿಯಾನ' ಎಂಬ ಸಂಘಟನೆಯ ಹುಟ್ಟು. ಈ ರೂಪು ತಳೆದ ಕೇವಲ ಆರೇ ತಿಂಗಳಲ್ಲಿ ಹತ್ತಾರು ನೆಲೆ ಕಂಡುಕೊಂಡಿದೆ. ಕರ್ನಾಟಕದಲ್ಲೂ ಒಂದ ಘಟಕ ಸ್ಥಾಪನೆಯಾಗಿದೆ. ಕರ್ನಾಟಕದ ಮಟ್ಟಿಗೆ ಭರವಸೆ ಮೂಡಿಸುವ ಸಂಗತಿಯೆಂದರೆ ದೇ ಹಿರೇಮಠ್ ಮುಂತಾದ ಗಣ್ಯರು ಹಾಗೂ ಹತ ಸಂಸ್ಥೆಗಳ ಕಾರ್ಯಕರ್ತರು ಸ್ವರಾಜ್ ಅಭಿಯಾನ ಸ ಸಕ್ರಿಯ ಬೆಂಬಲಿಗರಾಗಿರುವುದು. ದೇಶಾದ್ಯಂತ ತನ್ನ ಬೇರುಗಳನ್ನು ಗಟ್ಟಿಗೊಳಿಸಿಕೊಳ್ಳುತ್ತಿರುವ ಅಭಿಯಾನ ಸಂಘಟನೆ ಭವಿಷ್ಯದ ಬಗ್ಗೆ ಒಂದು ಬೀಜವನ್ನು ಬಿತ್ತುತ್ತಿದೆ ಎಂದರೆ ತಪ್ಪಾಗಲಾರದ

ಬಹು ನಿರ್ಲಕ್ಷಿತ ರೈತರ ಸಮಸ್ಯೆಯನ್ನು ಅಭಿಯಾನ ಗಂಭೀರವಾಗಿ ಕೈಗೆತ್ತಿಕೊಂಡಿರ ಆರಂಭವಾಗಿರುವ ಜೈ ಕಿಸಾನ್ ಆಂದೋಲನವ ಆದ್ಯತೆಯ ವಿಚಾರವಾಗಿ ಕೈಗೆತ್ತಿಕೊಂಡಿರುವುದ ಸ್ವಾಗತಾರ್ಹ ಬೆಳವಣಿಗೆ. ಕಳೆದ ಆಗಸ್ಟ್ 1 ದೆಹಲಿಯ ಜಂತರ್‌ಮಂತರ್‌ನಲ್ಲಿ ಮೋದಿ ರೈತವಿರೋಧಿ ನೀತಿಗಳನ್ನು ವಿರೋಧಿಸಿ 'ಜೈ ಆಂದೋಲನ' ಭಾರೀ ಪ್ರತಿಭಟನೆ ನಡೆ ಸಂದರ್ಭದಲ್ಲಿ ಯೋಗೇಂದ್ರ ಯಾದವ್ ಮತ್ತಿತರ ಕಾರ್ಯಕರ್ತರನ್ನು ಮೋದಿ ಪೊಲೀಸರು ಅ ಬಂಧಿಸಿ ಕಿರುಕುಳ ಕೊಟ್ಟಿದ್ದರು. ಪೊಲೀಸರ ದೇಶಾದ್ಯಂತ ವ್ಯಾಪಕ ಖಂಡನೆ ವ್ಯಕ್ತವಾಗಿತ್ತು ಮಾತ್ರವಲ್ಲ; ದೆಹಲಿ ಹೈಕೋರ್ಟ್ ಕೂಡ ಪೊ ಛೀಮಾರಿ ಹಾಕಿ ಬಂಧಿತರನ್ನು ಬೇಷರತ್ ಮಾಡುವಂತೆ ಆದೇಶಿಸಿತ್ತು. ಅದರ ವಿವರ ಅನಗತ್ಯ.

ಸಾರಾಂಶದಲ್ಲಿ ಹೇಳೋದಾದರೆ ವಿಶಾಲ ತ ಮೇಲೆ ರೂಪಿತವಾಗುತ್ತಿರುವ, ಭವಿಷ್ಯದ ಬಗ್ಗೆ ಭರವಸೆ ಹುಟ್ಟಿಸುತ್ತಿರುವ ಈ ಆಂದೋಲನಕ್ಕೆ ಜನಪರ ಶಕ್ತಿಗಳು ಹೆಚ್ಚಿನ ಕಸುವು ತುಂ ಅಗತ್ಯವಿದೆ. ಹರಿದು ಹಂಚಿಹೋಗಿ ಚೆಲ್ಲಾ ಚೆದು ಶಕ್ತಿಗಳು ಒಂದಾಗಲು ಇದು ಸೂಕ್ತ ವೇದಿಕೆಯಾ ಭವಿಷ್ಯಕ್ಕೆ ಭರವಸೆ ತುಂಬಬೇಕೆಂದರೆ ವ ತೊಡಕು, ಜಂಜಾಟಗಳನ್ನು ಬದಿಸಿಕೊಳ್ಳಬೇಕು ಈ ನಿಟ್ಟಿನಲ್ಲಿ ಪ್ರಯತ್ನಿಸುತ್ತಾರೆಂದು ಆಶಿಸೋ

• ದೊಡ್ಡಿಪಾಳ್ಯ ನರಸಿಂಹಮ

ಬರ ಕುರಿತು ಸಿಎಂಗೆ ಒಂದು ಪತ್ರ

3ನೇ ಅಕ್ಟೋಬರ್, 2015

ಇವರಿಗೆ,
ಶ್ರೀ ಸಿದ್ದರಾಮಯ್ಯನವರು
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ಬೆಂಗಳೂರು

ಆತ್ಮೀಯ ಸಿದ್ದರಾಮಯ್ಯನವರೆ,

ವಿಷಯ : ಕರ್ನಾಟಕದ ಬರಪೀಡಿತ ತಾಲೂಕುಗಳಲ್ಲಿ ಕೈಗೊಳ್ಳಬೇಕಾದ ತುರ್ತು ಪರಿಹಾರ ಕ್ರಮಗಳ ಬಗ್ಗೆ ಸಲಹೆಗಳು

ದೇಶದ ಬರಪೀಡಿತ ಜಿಲ್ಲೆಗಳಲ್ಲಿ ನಾವು ಕೈಗೊಂಡಿರುವ ಸಂವೇದನಾ ಯಾತ್ರೆಯ ಭಾಗವಾಗಿ ನಾನು ಹಾಗೂ ನಮ್ಮ ಹಲವು ಸಂಗಾತಿಗಳು ಕರ್ನಾಟಕದ ಬರಪೀಡಿತ ತಾಲೂಕುಗಳ ಕೆಲವು ಹಳ್ಳಿಗಳಿಗೆ ಭೇಟಿ ಕೊಟ್ಟೆವು. ಈ ಹಳ್ಳಿಗಳ ಸಂತ್ರಸ್ತ ರೈತರು ಹಾಗೂ ಅವರ ಕುಟುಂಬಗಳನ್ನು ಭೇಟಿ ಮಾಡಿದ್ದಲ್ಲದೆ, ರೈತ ಸಂಘಟನೆಗಳ ಪ್ರತಿನಿಧಿಗಳನ್ನು, ಭೂಹೀನ ಕೂಲಿಕಾರರ ಸಂಘಟನೆಗಳನ್ನು, ಮಾಧ್ಯಮ ಹಾಗೂ ಇತರೆ ನಾಗರಿಕ ಸಮಾಜದ ಸಂಘಟನೆಗಳನ್ನೂ ಭೇಟಿ ಮಾಡಿ ಪರಿಸ್ಥಿತಿಯನ್ನು ಅರಿಯಲು ಪ್ರಯತ್ನಿಸಿದೆವು.

ಈಗಿನ ಭೀಕರ ಬರದಿಂದ ಮಿಲಿಯಗಟ್ಟಲೆ ಜನರು ತತ್ತರಿಸಿಹೋಗಿದ್ದು, ಇದರ ಸರ್ವವ್ಯಾಪಿ ಪರಿಣಾಮದಿಂದಾಗಿ ಪರಿಸ್ಥಿತಿ ಬಹಳ ಗಂಭೀರವಾಗಿದೆ ಎಂಬುದು ನಿಮ್ಮ ಅರಿವಿಗೆ ಬಂದಿದೆ ಎಂದು ಭಾವಿಸಿದ್ದೇನೆ. ಪದೇಪದೇ ಬೆಳೆಗಳು ನಾಶವಾಗಿರುವುದರಿಂದ ಕೃಷಿಯನ್ನೇ ಆಧರಿಸಿರುವವರ ಜೀವನೋಪಾಯ ನಾಶದ ಅಂಚಿನಲ್ಲಿದೆ. ದೊಡ್ಡ ಹಿಡುವಳಿದಾರರಿಂದ ಹಿಡಿದು ಭೂಹೀನ ಕೃಷಿ ಕೂಲಿಗಳವರೆಗೆ ಇಡೀ ರೈತಾಪಿ ತೀವ್ರ ಸಂಕಷ್ಟ ಎದುರಿಸುತ್ತಿದ್ದು, ಭವಿಷ್ಯದ ಬಗ್ಗೆ ಆತಂಕಕ್ಕೆ ಒಳಗಾಗಿದ್ದಾರೆ. ಹಲವು ಬಾರಿ ಬಿತ್ತನೆ ಮಾಡಿ ನಷ್ಟ ಅನುಭವಿಸಿರುವುದರಿಂದ ದೊಡ್ಡ ರೈತರು ದೊಡ್ಡ ಮೊತ್ತದ ಸಾಲಗಳಿಗೆ ಸಿಲುಕಿದ್ದಾರೆ. ಸಣ್ಣಪುಟ್ಟ ರೈತರು ದಿನಗೂಲಿ ಕಾರ್ಮಿಕರ ಸ್ಥಿತಿಗೆ ಇಳಿದಿದ್ದು ಹತಾಶೆಯಿಂದ ಉದ್ಯೋಗಕ್ಕಾಗಿ ಎದುರು ನೋಡುತ್ತಿದ್ದಾರೆ. ಭೂಹೀನ ಕೃಷಿ ಕೂಲಿಕಾರರಿಗೆ ಹಳ್ಳಿಯ ಕೃಷಿಯಲ್ಲಾಗಲಿ, ಉದ್ಯೋಗ ಖಾತ್ರಿ ಯೋಜನೆಯಲ್ಲಾಗಲಿ ಸರಿಯಾಗಿ ಕೆಲಸ ಸಿಗದೆ ಉದ್ಯೋಗ ಅರಸುತ್ತಾ ದೊಡ್ಡ ದೊಡ್ಡ ನಗರಗಳತ್ತ ಗುಳೇ ಹೋಗುತ್ತಿದ್ದಾರೆ. ಮೇವಿನ ಕೊರತೆಯಿಂದಾಗಿ ಜಾನುವಾರುಗಳನ್ನು ಸಾಕುವುದು ದುಸ್ತರವಾಗಿದೆ. ಒಟ್ಟಾರೆ ಹೇಳುವುದಾದರೆ ಕ್ರಮೇಣವಾಗಿ ಬೃಹದಾಕಾರವಾಗಿ ಆವರಿಸಿಕೊಳ್ಳುತ್ತಿರುವ ರಾಷ್ಟ್ರೀಯ ವಿಪತ್ತಿನ ದುಷ್ಪರಿಣಾಮ ನಮ್ಮ ಕಣ್ಣೆದುರಿನಲ್ಲಿದೆ.

ಇಂಥ ಪರಿಸ್ಥಿತಿಗೆ ನಿಮ್ಮ ಸರ್ಕಾರ ಸ್ಪಂದಿಸಿದ್ದು 130 ತಾಲೂಕುಗಳನ್ನು ಬರಪೀಡಿತ ಎಂದು ಈಗಾಗಲೇ ಘೋಷಿಸಿದೆ. ಬರ ಪರಿಸ್ಥಿತಿಯನ್ನು ಎದುರಿಸಲಿಕ್ಕಾಗಿ ನಿಮ್ಮ ಸರ್ಕಾರ ಕೆಲವು ಅತಿ ಅಗತ್ಯವಿದ್ದ ಆರಂಭಿಕ ಕ್ರಮಗಳನ್ನು ಘೋಷಿಸಿದೆ. ಹೀಗಿದ್ದರೂ ಈ ಕ್ರಮಗಳು ಎಷ್ಟು ಮಾತ್ರಕ್ಕೂ ಸಾಕಾಗುವುದಿಲ್ಲ ಎಂಬುದನ್ನು ನಿಮ್ಮದೇ ಮೂಲಗಳಿಂದಾಗಲಿ, ಮಾಧ್ಯಮ ವರದಿಗಳಿಂದಾಗಲಿ ನೀವು ತಿಳಿದುಕೊಳ್ಳಲೇಬೇಕಿತ್ತು.

ಆದ್ದರಿಂದ ನಿಮ್ಮ ರಾಜ್ಯದ ಬರಪೀಡಿತ ತಾಲೂಕುಗಳಲ್ಲಿನ ಜನರ ಸಂಕಷ್ಟಗಳನ್ನು ಪರಿಹರಿಸಲು ತಕ್ಷಣದ ಹಾಗೂ ತುರ್ತು ಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ ಕೆಲವು ಸಲಹೆಗಳನ್ನು ನಿಮ್ಮ ಮುಂದಿಡುತ್ತಿದ್ದೇನೆ.

1. ಬೆಳೆ ನಷ್ಟದ ಪರಿಹಾರ ಪ್ಯಾಕೇಜ್

ಬೆಳೆಗಳ ನಷ್ಟದ ಪರಿಹಾರಕ್ಕಾಗಿ ಒಂದು ನ್ಯಾಯಯುತ, ವಾಸ್ತವಿಕ ಹಾಗೂ ಪಾರದರ್ಶಕವಾದ ಪ್ಯಾಕೇಜನ್ನು ಕೂಡಲೇ ಘೋಷಿಸಬೇಕು. ಪರಿಹಾರದ ಮೊತ್ತವು ಈ ಕೆಳಕಂಡ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡಿರಬೇಕು. (ಎ) ಹಲವು ಬಾರಿ ಬಿತ್ತನೆ ಕಾರ್ಯಗಳಿಗೆ ಬಳಸಿದ ಬೀಜ, ಗೊಬ್ಬರ ಮತ್ತು ಕ್ರಿಮಿನಾಶಕಗಳಿಗೆ ಆದ ವೆಚ್ಚ (ಬಿ) ಬೆಳೆ ನಾಶದ ಪರಿಣಾಮವಾಗಿ ಕನಿಷ್ಠ ಜೀ ಆದಾಯ ನಷ್ಟಕ್ಕೊಳಗಾಗಿರುವುದು. ಈ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡರೆ ಅದು ಭೂಮಿಗಳಲ್ಲಿ ಪ್ರತಿ ಎಕರೆಗೆ ಕನಿಷ್ಠ ರೂ. (ಇಪ್ಪತ್ತು ಸಾವಿರ ರೂಗಳು) ಮತ್ತು ಒಣಭೂಮಿ ಪ್ರತಿ ಎಕರೆಗೆ ಕನಿಷ್ಠ ರೂ. 15,000/- ಸಾವಿರ ರೂಗಳು) ಆಗುತ್ತದೆ. ಹೀಗೆ ಘೋ ಪರಿಹಾರ ಮೊತ್ತವನ್ನು ತಕ್ಷಣದಲ್ಲೇ ಹಾಗೂ ಸಂತ್ರಸ್ತ ರೈತರ ಬ್ಯಾಂಕ್ ಖಾತೆಗೆ ಜಮಾ ವ

2. ಸಾಲಗಳ ಪುನರ್‌ರಚನೆ

ಬೆಳೆಸಾಲ ಮತ್ತು ಇತರೆ ರೈತರ ಸಾಲಗ ರಚನೆಯಾಗಬೇಕು. ಸಹಕಾರಿ ಸಂಸ್ಥೆಗಳ ಮ ವ್ಯಾಪ್ತಿಯಲ್ಲಿರುವ ಬ್ಯಾಂಕುಗಳ ಸಾಲದ ವ ಕ್ರಮಗಳನ್ನು ಸಡಿಲಿಕೆ ಮಾಡಿ ನಿಮ್ಮ ಸಕಾ ಕ್ರಮಗಳನ್ನು ಘೋಷಿಸಿದೆ. ಆದರೆ ತಮಗೆ ತಿ ಬಹುಪಾಲು ರೈತರು ಕೇಂದ್ರ ಸರ್ಕಾರದ ವ್ಯಾ ರಾಷ್ಟ್ರೀಕೃತ ಬ್ಯಾಂಕುಗಳಿಂದ ಅಥವ ಲೇವಾದೇವಿದಾರರಿಂದ ಸಾಲ ಪಡೆದಿರುವುದರ ಕೈಗೊಂಡಿರುವ ಕ್ರಮಗಳ ಪರಿಣಾಮ ಅತ್ಯಲ್ಪ ಅನುಮಾನವಿಲ್ಲ. ಈ ಹಿನ್ನೆಲೆಯಲ್ಲಿ ಒಂದು ಪ ರೈತರ ಸಾಲ ಪುನರ್‌ರಚನೆ ಸಾಧ್ಯವಾಗಬೇಕಾ

...ವೈದ್ಯರಿಲ್ಲದ ಈ ಹುಚ್ಚಾಸ್ಪತ್ರೆಯಿಂದ ಓಡಿಹೋಗಬೇಕೆನಿಸುತ್ತಿದೆ



• ಗೌರಿ ಲಂಕೇಶ್
editorlankesh@gmail.com

...ಲಿ ಚಿಟ್ ಎನ್ನುತ್ತದೆ ನಮ್ಮ ದೇಶದಲ್ಲಿ ಆಗುತ್ತಿರು...ಲ್ಲಿ ನೋಡಿದರೆ. ಈ ಹಿಂದೆ ಈಗ ಹುಚ್ಚರ ...ಲ್ಲಿದ್ದೇವೆ ಎನಿಸುತ್ತಿದೆ ಎಂದು ಈ ಅಂಕಣದಲ್ಲಿ ...ಕ್ಕೆ ಆದರೀಗ ಇದು ಹುಚ್ಚರ ಸಂತೆಯಲ್ಲ, ಬದಲಾಗಿ ...ದೇಶವೇ ವೈದ್ಯರಿಲ್ಲದ ಹುಚ್ಚಾಸ್ಪತ್ರೆ ಆಗಿದೆ ...ಪ್ರಾರಂಭಿಸಿದೆ.

...ಮ್ಮ ದೇಶದಲ್ಲಿ ಸಸ್ಯಾಹಾರಿಗಳು ಅಲ್ಪಸಂಖ್ಯಾತರು. ...ೂ ಬೇರೆ ಯಾರೂ ಮಾಂಸಾಹಾರವನ್ನು ...ಾರದಂತೆ. ಸರ್ಕಾರಿ ಶಾಲೆಗಳಲ್ಲಿ ಓದುವ ಶೂದ್ರರ ... ದಲಿತರ ಬಡಮಕ್ಕಳಿಗೆ ಮೊಟ್ಟೆಯನ್ನೂ ...ಾರದಂತೆ. ಅದ್ಯಾವುದೋ ನರಪೇತಲ ಬ್ರಾಹ್ಮಣ ...ಗೋಡಂಬಿ, ಬಾದಾಮಿ ತಿನ್ನುವುದರಿಂದ ಆತನಿಗೆ ...ಯ ಅಗತ್ಯತೆ ಇಲ್ಲದಿರಬಹುದು. ಆದರೆ ಬಡ ... ಮತ್ತು ದಲಿತರ ಮಕ್ಕಳಿಗೆ ಅದರ ಅವಶ್ಯಕತೆ ...ಇದೆ. ಆದರೂ ಆತನ ಫತ್ವಾವನ್ನೇ ನಮ್ಮ ಸರ್ಕಾರಗಳು ...ದಂತೆ ಸ್ವೀಕರಿಸಿ ಜಾರಿಗೆ ತರುತ್ತವೆ. ಅಲ್ಲಾ, ಆ ...ತಲ ಬ್ರಾಹ್ಮಣ ಸ್ವಾಮಿಗೆ ಮೊಟ್ಟೆ ಬೇಡವಾಗಿದ್ದರೆ, ...ಾಲಿ ಕುದುರೆ ಜುಟ್ಟು ಎಂದು ಹೇಳುವುದಕ್ಕೆ ...ಸಂಖ್ಯಾತ ಶೂದ್ರರ, ದಲಿತರ ಮತ್ತು ಅಲ್ಪಸಂಖ್ಯಾತರ ...ಗಳನ್ನು ಪಡೆದು ಸರ್ಕಾರ ಸ್ಥಾಪಿಸುವವರಿಗೆ ಏನು

...ನ್ನು ಗೋಮಾಂಸದ ಬಗ್ಗೆಯಂತೂ ಕೇಳಲೇಬೇಡಿ. ...ಗಳ ದೇವಾನುದೇವತೆಯಾದ ಪೋಲಿ ಪುಂಡ ...ಗೇ ಗೋಮಾಂಸ ಪ್ರಿಯವಾಗಿದ್ದರೂ, ಸ್ವತಃ ...ಣರೂ ಅದನ್ನು ಒಂದಾನೊಂದು ಕಾಲದಲ್ಲಿ ...ಕೊಂಡು ತಿನ್ನುತ್ತಿದ್ದರೂ, ಈಗ ಅವರು ಅದನ್ನು ...ವುದರಿಂದ ಎಲ್ಲರೂ ಬಿಡಬೇಕಂತೆ. ಇಲ್ಲಾ ಅಂದ್ರೆ? ... ಪ್ರದೇಶದಲ್ಲಿ ಇತ್ತೀಚಿಗೆ 50 ವರ್ಷ ವಯಸ್ಸಿನ ...ಮ್ಮದ್ ಇಖ್ಲಾಗೆ ಆದ ಗತಿಯೇ ಆಗುತ್ತಂತೆ. ಹಾಗಂತ ...ಸಂಸದನಾದ ಸಾಕ್ಷಿ ಮಹಾರಾಜ್ ಮತ್ತು ಇತರೆ ...ಾರಿಗಳು ಧಮಕಿ ಹಾಕಿದ್ದಾರೆ.

...ಂದೂ ನಾವೆಲ್ಲ ಒಂದು' ಎಂದು ಸುಳ್ಳುಸುಳ್ಳೇ ... ಹಾಕುವ ಚೆಡ್ಡಿಗಳು ಎಂದೂ ದಮನಿತ ದಲಿತರನ್ನು ...ಾಗಿ ನೋಡಿದ್ದೇ ಇಲ್ಲ. ಆ ಕಾರಣಕ್ಕೇ ದೇಗುಲವನ್ನು ...ಸಲು ಯತ್ನಿಸಿದ ಚಿಮ್ಮು ಎಂಬ ದಲಿತನನ್ನು ... ಉತ್ತರ ಪ್ರದೇಶದಲ್ಲಿ ಕೊಂದು ಹಾಕಲಾಗಿದೆ. ... ಏಕೆ, ಇತ್ತೀಚಿಗೆ ನಮ್ಮ ಹಾಸನ ಜಿಲ್ಲೆಯಲ್ಲೂ ...ಲವನ್ನು ಪ್ರವೇಶಿಸಲು ಯತ್ನಿಸಿದ ದಲಿತ ಮಹಿಳೆಯರ ...ಕ್ಕೆ ಸವರ್ಣೀಯರು ಬಹಿಷ್ಕಾರ ಹಾಕಿದ್ದರು. ಹಾಗೆ ಬಹಿಷ್ಕಾರ ಹಾಕಿದ್ದ 'ಮೇಲುಜಾತಿ'ಯ ಜಂತುಗಳನ್ನು ಬಂಧಿಸಿ ಕಂಬಿ ಎಣಿಸುವಂತೆ ಮಾಡಬೇಕಿದ್ದ ಹಾಸನ ಪೊಲೀಸರು ದಲಿತ ಮಹಿಳೆಯರಿಗೇ ಧಮಕಿ ಹಾಕಿದ್ದರು.

ಇತ್ತೀಚಿಗೆ ಅದೇ ಹಾಸನ ಜಿಲ್ಲೆಯಲ್ಲಿ ಮುಸಲ್ಮಾನ ಯುವಕ ಮತ್ತು ಜೈನರ ಯುವತಿ ಪರಸ್ಪರ ಪ್ರೇಮಿಸಿ ರಿಜಿಸ್ಟರ್ ಮದುವೆಯಾಗಿದ್ದರು. ಆ ಸುದ್ದಿ ಯುವತಿಯ ಮನೆಯವರಿಗೆ ಗೊತ್ತಾಗುತ್ತಿದ್ದಂತೆ ದೊಡ್ಡ ರಾದ್ಧಾಂತವೇ ನಡೆದುಹೋಯಿತು. ಆರೆಸ್ಸೆಸಿಗರು ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ಮುಸಲ್ಮಾನ ಯುವಕನನ್ನು ಪೊಲೀಸರು ಬಂಧಿಸುವಂತೆ ಒತ್ತಡ ಹೇರಿದ್ದರು. ಆ ಚೆಡ್ಡಿಗಳಿಗೆ ಲಾಠಿ ಏಟಿನ ರುಚಿ ತೋರಿಸುವ ಬದಲು ಪೊಲೀಸರು ಆ ಯುವಕ ಮತ್ತು ಯುವತಿಯನ್ನು ಠಾಣೆಯೊಳಗೆ ಕೂಡಿಟ್ಟು ಅವರಿಬ್ಬರಿಗೂ ಮನಸ್ಸೋಇಚ್ಛೆ ಥಳಿಸಿದ್ದಲ್ಲದೆ "ನಿಮ್ಮಂಥವರಿಂದ ಊರಿಗೆ ಬೆಂಕಿ ಬೀಳುತ್ತೆ, ನೆಟ್ಟಗೆ ನಿಮ್ಮ ನಿಮ್ಮ ಜಾತಿಯವರನ್ನೇ ಮದುವೆಯಾಗಲು ನಿಮಗೇನು ಧಾಡಿ" ಎಂದು ಬೆದರಿಸಿದ್ದರು. ಇಂಥ ಚೆಡ್ಡಿ ಪೊಲೀಸರನ್ನು ನೆಟ್ಟಗೆ ಮಾಡುವವರು ಯಾರು?

ಅಬ್ದುಲ್ ಕಲಾಂ ಎಂಬ ಮುಸಲ್ಮಾನ ಈ ದೇಶದ ರಾಷ್ಟ್ರಪತಿಯಾಗಿದ್ದ ಕಾರಣಕ್ಕೆ ಅವರ ನೆನಪಿನಲ್ಲಿ ದೆಹಲಿಯ ಒಂದು ರಸ್ತೆಗೆ ಅವರ ಹೆಸರನ್ನು ಇಡಲಿಲ್ಲ, ಬದಲಾಗಿ ಕೇಂದ್ರದ ಒಬ್ಬ ತಲೆಕೆಟ್ಟ ಸಚಿವನೇ "ಅಬ್ದುಲ್ ಕಲಾಂ ಓರ್ವ ಮುಸಲ್ಮಾನನಾಗಿದ್ದರೂ ಆತ ರಾಷ್ಟ್ರೀಯವಾದಿ ಯಾಗಿದ್ದರು" ಎಂದಿದ್ದ. ಚೆಡ್ಡಿಗಳಿಗೆ ಪ್ರಿಯವಾದ ಅಣುಬಾಂಬ್ ಅನ್ನು ತಯಾರಿಸಿದ್ದ ಕಲಾಂ ಎಂಬ ವಿಜ್ಞಾನಿಗೇ ಇಂತಹ ಅವಮಾನವಾದ ನಾಡಲ್ಲಿ ಸಾಮಾನ್ಯ ಮುಸಲ್ಮಾನರ ಪಾಡು ಎಂಥದ್ದು ಎಂದು ಸುಲಭವಾಗಿ ಅಂದಾಜಿಸಬಹುದು.

ಇನ್ನು ವಾಸ್ತು, ಜ್ಯೋತಿಷ್ಯ ತರಹದ ಸಂಗತಿಗಳಿಗೆ ಯಾರೂ ಕೈಹಾಕುವಂತಿಲ್ಲ. ಅದ್ಯಾವುದೋ ದಿಕ್ಕಿನತ್ತ ಮುಖವನ್ನೂ ಇನ್ನೊಂದು ದಿಕ್ಕಿನಲ್ಲಿ '...ಕ'ವನ್ನೂ ಇಟ್ಟುಕೊಂಡು ಮಲ ವಿಸರ್ಜಿಸಿದರೆ ಒಳ್ಳೆಯದಾಗುತ್ತೆ ಎಂದೂ, ಇನ್ನಾವುದೋ ದಿಕ್ಕಿನಲ್ಲಿ ಮಿಲನ ಮಾಡಿದರೆ ಗಂಡು ಮಗು ಹುಟ್ಟುತ್ತೆ ಎಂದೂ, ಮನೆಯೊಳಗೆ ಗಾಳಿ-ಬೆಳಕು ಸೋಂಕದಿದ್ದರೂ ಬಾಗಿಲು ಮಾತ್ರ ಸರಿಯಾದ ಕಡೆ ಇದ್ದರೆ ಐಶ್ವರ್ಯ ಬರುತ್ತದೆ ಎಂದೂ ನಂಬುವ ಪೆದ್ದ ಶಿಖಾಮಣಿಗಳಿಗೆ ನಮ್ಮ ಭವ್ಯ ದೇಶದಲ್ಲಿ ಕೊರತೆಯಂತೂ ಇಲ್ಲವೇ ಇಲ್ಲ. ಅಂತಹ ಪೆದ್ದರಿಗೆ "ವಾಸ್ತು ಗೀಸ್ತು ಎಂಬುದೆಲ್ಲ ಸುಳ್ಳು. ಅಂಥದ್ದನ್ನೆಲ್ಲ ನಂಬಿ ಮೋಸ ಹೋಗಬೇಡಿ" ಎಂದು ಜನರನ್ನು ಎಚ್ಚರಿಸಲು ಪ್ರಯತ್ನಿಸಿದ ನರೇಂದ್ರ ಧಾಬೋಲ್ಕರ್ ಅವರಿಗೆ ಸಿಕ್ಕಿದ್ದು ಗುಂಡೇಟು.

'ನಂಬಿಕೆ' ಎಂಬುದೂ ಈ ಹುಚ್ಚರ ಆಸ್ಪತ್ರೆಯಲ್ಲಿ ಮಹತ್ವದ್ದು. ಅದು ಮೂಢನಂಬಿಕೆಯಾಗಿದ್ದರೂ ಪರವಾಗಿಲ್ಲ, ಆ ನಂಬಿಕೆಗೆ ಯಾವ ವೈಜ್ಞಾನಿಕ ಅಥವಾ ಐತಿಹಾಸಿಕ ಆಧಾರವಿಲ್ಲದಿದ್ದರೂ ಓಕೆ, ಆದರೂ ಅದನ್ನು ಯಾರೂ ಪ್ರಶ್ನಿಸುವಂತಿಲ್ಲ. "ಲಿಂಗಾಯತರು ಹಿಂದೂಗಳಲ್ಲ, ಹಾಗೆ ನಂಬಿದ್ದರಿಂದಲೇ ಲಿಂಗಾಯತರು ದಾರಿ ತಪ್ಪಿದ್ದು" ಎಂಬುದನ್ನು ಐತಿಹಾಸಿಕ ಸಂಶೋಧನೆಗಳ ಮೂಲಕ ಎಂ.ಎಂ. ಕಲ್ಬುರ್ಗಿಯವರು ಹೇಳಿದ್ದಕ್ಕೆ ಅವರಿಗೆ ಸಿಕ್ಕಿದ್ದು ಹಣೆಯ ಮೇಲೆ ಕುಂಕುಮವಿಟ್ಟಂತಹ ಬುಲ್ಲೆಟ್ ಏಟು.

ರಾಮಾಯಣ ಮತ್ತು ಭಗವದ್ಗೀತೆಗಳ ತಂಟೆಗೆ ಯಾರಾದರು ಹೋದರೆ ಹುಷಾರ್ ಎಂದು ಹಿಂದೂತ್ವವಾದಿಗಳು ಫರ್ಮಾನು ಹೊರಡಿಸಿದ್ದಾರೆ. ರಾಮ ಯಾರಿಗೆ ಹುಟ್ಟಿದ ಎಂದು ಈ ಹಿಂದೆ ನಮ್ಮ ಸಂವಿಧಾನದ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರೇ 'ಮಿಥ್ಸ್ ಆಫ್ ರಾಮ' ಎಂಬ ಲೇಖನದಲ್ಲಿ ವಿಶ್ಲೇಷಿಸಿದ್ದಾರೆ. ಮಾತ್ರವಲ್ಲ ಅವರಂತೆ ಇನ್ನೂ ಸಹಸ್ರಾರು ಜನರೂ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಜೊತೆಗೆ ಎ.ಕೆ.ರಾಮಾನುಜನ್ ತರಹದ ಕವಿ ಮತ್ತು ಸಾಹಿತ್ಯ ಪಂಡಿತ 'ಮೂನ್ನೂರು ರಾಮಾಯಣಗಳು' ಎಂಬ ಪ್ರಖ್ಯಾತ ಲೇಖನವನ್ನೂ ಮಂಡಿಸಿದ್ದರು. ಆದರೇನಂತೆ, ಚೆಡ್ಡಿಗಳ ಪ್ರಕಾರ ಅವರು ನಂಬಿರುವ ರಾಮ ಕಥೆಯನ್ನೇ ಎಲ್ಲರೂ ನಂಬಬೇಕು. ಅಲ್ಲಿ, ವಾಲ್ಮೀಕಿಯೇ ತನ್ನ ರಾಮಾಯಣದಲ್ಲಿ ಹೀಗ್ಹೀಗೆ ಬರೆದಿದ್ದಾನೆ ಎಂದರೆ, ಅದೇ ನರಪೇತಲ ಬ್ರಾಹ್ಮಣ ಸ್ವಾಮಿ "ನಮ್ಮ ಮಧ್ವರು ಹೀಗೆ ಅಂದಿದ್ದಾರೆ ಗೊತ್ತುಂಟಾ?" ಎನ್ನುತ್ತಾರೆ; ಇನ್ನು ಹಲವರು "ಅದೆಲ್ಲ ನಮಗೆ ಬೇಕಿಲ್ಲ, ವಾಲ್ಮೀಕಿ ಹಾಗೆ ಹೇಳಿದ್ದರೆ ಅದೂ ತಪ್ಪೇ" ಎಂಬ ಮೊಂಡುವಾದವನ್ನು ಮುಂದಿಡುತ್ತಾರೆ. ಅಂಥವರನ್ನು ತಿದ್ದಲು ಕೆ.ಎಸ್.ಭಗವಾನ್ ತರಹದವರು ಯತ್ನಿಸಿದರೆ ಕೊಲೆ ಬೆದರಿಕೆಗಳು ಬರುತ್ತವೆ.

ಒಟ್ಟಾರೆ ಇಲ್ಲಿ, ದನದ ಮಾಂಸ ತಿಂದರೆ ಕೊಲೆಯನ್ನು ಆಹ್ವಾನಿಸಿದಂತೆ. ಭಿನ್ನಾಭಿಪ್ರಾಯ ವ್ಯಕ್ತಪಡಿಸಿದರೆ ಕೊಲೆ ಬೆದರಿಕೆ ಎದುರಾಗುತ್ತೆ. ಮೌಢ್ಯವನ್ನು ವಿರೋಧಿಸಿದರೆ ಅಕಾಲಿಕ ಸಾವು ಗ್ಯಾರಂಟಿ. ನಿಮ್ಮ ಹಿಂದೂ ಧರ್ಮದಲ್ಲಿ ಇಂಥದ್ದೆಲ್ಲ ಇದೆ ಎಂದು ಪುಸ್ತಕ ಬರೆದರೆ ಅದು ಬ್ಯಾನ್ ಆಗುತ್ತೆ, ಸಾವಿರಾರು ವರ್ಷಗಳ ಹಿಂದೆ ಇಲ್ಲಿನವರಿಗೆ ಸ್ಟೆಮ್ ಸೆಲ್ ವಿಜ್ಞಾನ ಗೊತ್ತಿತ್ತು, ಹಾರುವ ವಿಮಾನಗಳಿದ್ದವು, ಪ್ಲಾಸ್ಟಿಕ್ ಸರ್ಜನ್‌ಗಳಿದ್ದರು ಎಂಬುದೆಲ್ಲ ಭ್ರಮೆ ಎಂದರೆ "ನಮ್ಮ ಇತಿಹಾಸವನ್ನೇ ಅವಮಾನಿಸಬೇಡಿ. ಜೋಕೆ" ಎಂದು ಧಮಕಿ ಹಾಕುತ್ತಾರೆ. ಹುಚ್ಚುಹಿಡಿಸಿಕೊಂಡಿರುವ ಹಿಂದೂತ್ವವಾದಿಗಳು ಭಾರತದ ಜಾತ್ಯತೀತ ಪರಂಪರೆಯನ್ನು ನಾಶಮಾಡುತ್ತಿದ್ದಾರೆ; ಇಲ್ಲೀಗ ಭಿನ್ನ ಅಭಿಪ್ರಾಯಗಳಿಗೆ ಜಾಗವೇ ಇಲ್ಲದಂತಾಗಿದೆ; ವೈಚಾರಿಕತೆಯನ್ನು ದಮನ ಮಾಡಲಾಗುತ್ತಿದೆ ಎಂದು ನಯಂತಾರ ಸೆಹಗಲ್ ತರಹದ ಹಿರಿಯ ಲೇಖಕಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಹಿಂದಿರುಗಿಸಿದರೆ ಚೆಡ್ಡಿಗಳು "ಆಕೆ ಹೇಗಿದ್ದರೂ ನೆಹರು ಸಂಬಂಧಿ. ಈಗ ರಾಜಕೀಯದಲ್ಲಿ ನೆಹರು ಕುಟುಂಬದವರು ನೆಲ ಕಚ್ಚಿರುವುದರಿಂದ ಪ್ರಶಸ್ತಿಯನ್ನು ಹಿಂದಿರುಗಿಸಿದ್ದಾಳಷ್ಟೇ" ಎಂದು ಕೊಂಕು ನುಡಿಯುತ್ತಾರೆ.

ನನಗಂತೂ ರೋಸಿಹೋಗುತ್ತಿದೆ ಕಣ್ರೀ. ಈ ಹುಚ್ಚಾಸ್ಪತ್ರೆಯಿಂದ ಬಿಡುಗಡೆ ಪಡೆದು ಎಲ್ಲಿಗಾದರೂ ಓಡಿಹೋಗಿ ಬಿಡಬೇಕು ಅನ್ನಿಸುತ್ತಿದೆ. ■

...ಭಾರತ ಕುರಿತು ಪಾಕಿಸ್ತಾನದ ಕವಿಯತ್ರಿಯ ಪದ್ಯ

...ಭಾರತ ಮತ್ತು ಪಾಕಿಸ್ತಾನ ವಿಭಿನ್ನ ದೇಶಗಳಾಗಿ ಉಗಮಿಸಿ 68 ವರ್ಷಗಳಾಗಿವೆ. ಈ ಅವಧಿಯಲ್ಲಿ ಭಾರತ ...ತ್ಯತೀತ ಪ್ರಜಾಪ್ರಭುತ್ವವಾಗಿ ಮುಂದುವರೆದಿದ್ದರೆ, ಪಾಕಿಸ್ತಾನ ಇಸ್ಲಾಮ್ ಧರ್ಮಾಧಾರಿತ ದೇಶವಾಗಿದ್ದರ ಪರಿಣಾಮ ...ಗ ಮುಲ್ಲಾಗಳದ್ದೇ ಕಾರುಬಾರು ನಡೆಯುತ್ತಿದೆ. ದುರದೃಷ್ಟಕ್ಕೆ ಭಾರತದಲ್ಲಿ ನರಹಂತಕ ನರೇಂದ್ರ ಮೋದಿ ಮತ್ತಾತನ ...ಜೆಪಿ ಅಧಿಕಾರಕ್ಕೆ ಏರಿದನಂತರ ಇಲ್ಲೂ ಹಿಂದೂತ್ವವಾದಿಗಳ ಅಟ್ಟಹಾಸ ಲಂಗುಲಗಾಮಿಲ್ಲದೆ ಮೆರೆದಾಡುತ್ತಿದೆ. ಯಾವ ...ರ್ಮಾಧಾರಿತ ರಾಷ್ಟ್ರೀಯ ಸಿದ್ಧಾಂತ ಪಾಕಿಸ್ತಾನವನ್ನು ನರಕದಂತಾಗಿಸಿತೋ ಅದೇ ಸಿದ್ಧಾಂತ ಇವತ್ತು ಭಾರತವನ್ನೂ ನಾಶ ...ಡುವ ಹಂತಕ್ಕೆ ಬೆಳೆದಿದೆ. ಈ ಹಿನ್ನೆಲೆಯಲ್ಲಿ ಪಾಕಿಸ್ತಾನದ ಖ್ಯಾತ ಕವಿಯತ್ರಿ ಫೆಮಿದಾ ರಿಯಾಜ್ ಎಂಬುವವರು ...ವೂ ನಮ್ಮ ಹಾಗೆ' ಎಂಬ ಕವನವನ್ನು ಬರೆದಿದ್ದಾರೆ. ಅದರ ಅನುವಾದ ನಮ್ಮ ಓದುಗರಿಗಾಗಿ ಇಲ್ಲಿದೆ.

...ನೀವೂ ನಮ್ಮ ಹಾಗೆ!

... ನೀವೂ ನಮ್ಮ ಹಾಗೆಯೇ ಇದ್ದೀರಿ ಎಂದಾಯಿತು!
... ದಿನ ಅದೆಲ್ಲಿ ಬಚ್ಚಿಟ್ಟುಕೊಂಡಿದ್ದಿರಿ ಮಿತ್ರರೆ?



ಆ ಮೂರ್ಖತನ, ಆ ಅಜ್ಞಾನ
ನಾವು ಅದೆಷ್ಟು ಕಾಲ ಅದರಲ್ಲೆಲ್ಲ ಹೊರಳಾಡಿದೆವು-
ನೋಡಿ, ಅವೀಗ ನಿಮ್ಮ ದಡಕ್ಕೂ ಆಗಮಿಸಿವೆ!
ನಿಮಗೆ ಅನೇಕಾನೇಕ ಅಭಿನಂದನೆಗಳು!

ಧರ್ಮದ ಧ್ವಜವನ್ನೇರಿಸಿ,
ನೀವು ಹಿಂದೂ ರಾಷ್ಟ್ರವನ್ನು ಸದ್ಯದಲ್ಲೇ ಸ್ಥಾಪಿಸುತ್ತೀರಿ ಎಂದು ಭಾವಿಸಲೆ?
ನೀವೂ ನಮ್ಮಂತೆ ಎಲ್ಲವನ್ನು ಕುಲಗೆಡಿಸಲಿದ್ದೀರಿ
ನೀವೂ ಕೂಡ ನಿಮ್ಮ ಸುಂದರ ತೋಟವನ್ನು ಧ್ವಂಸ ಮಾಡಲಿದ್ದೀರಿ.
ಹಲವೊಮ್ಮೆ ನೀವು ನಮ್ಮಂತೆ ಕೂತು ಯೋಚಿಸುವಿರಿ-
ನನಗೆ ಗೊತ್ತು ಈಗಾಗಲೇ ಸಿದ್ಧತೆಗಳು ಶುರುವಾಗಿವೆ
ಯಾರು ನಿಜವಾಗಲೂ ಹಿಂದೂ, ಯಾರು ಅಲ್ಲ ಎಂದು.
ಶೀಘ್ರದಲ್ಲೇ ನೀವೂ ಫತ್ವಾಗಳನ್ನು ಹೊರಡಿಸಲು ಶುರುಹಚ್ಚಿಕೊಳ್ಳುತ್ತಿರಿ!

ಇಲ್ಲಿನಂತೆ ಅಲ್ಲೂ ಬದುಕುಳಿಯುವುದು ಕಷ್ಟವಾಗಲಿದೆ.
ಇಲ್ಲಿನಂತೆ ಅಲ್ಲೂ ಬೆವರು ಮತ್ತು ರಕ್ತ ಹರಿಯುವುದು ಅನಿವಾರ್ಯವಾಗಲಿದೆ.
ನಲಿವಿಲ್ಲದ ಬದುಕು ನಿಮ್ಮದೂ ಆಗುತ್ತದೆ.
ನಮ್ಮಂತೆಯೆ ನೀವೂ ಉಸಿರಾಡಲೂ ಕಷ್ಟಪಡಲಿದ್ದೀರಿ.

ನಿಮ್ಮನ್ನು ನೋಡಿ ನಾನು ದುಃಖಿಸುತ್ತಿದ್ದೆ,
ಆದರೀಗ ಆ ಯೋಚನೆಯೇ ನಗುವನ್ನುಕ್ಕಿಸುತ್ತಿದೆ:
ಯಾಕೆಂದರೆ ನೀವೂ ನಮ್ಮಂತಾದಿರಿ!
ನಾವು ಬೇರೆ ಬೇರೆ ರಾಷ್ಟ್ರಗಳೇ ಆಗಿರಲಿಲ್ಲ!

ನೂಕಿರಿ ನರಕಕ್ಕೆ ಶಿಕ್ಷಣ ಮತ್ತು ಕಲಿಕೆಯನ್ನು,
ಹಾಕಿರಿ ಅಜ್ಞಾನಕ್ಕೆ ಜೈಕಾರವನ್ನು.
ನಿಮ್ಮ ಪಥದಲ್ಲಿರುವ ಗುಂಡಿಗಳನ್ನು ಗಣನೆಗೆ ತೆಗೆದುಕೊಳ್ಳಬೇಡಿ:
ಹಿಂದಿನ ಕಾಲ ಕುರಿತು ಜಪ ಮಾಡಿ!

ಕಷ್ಟಪಟ್ಟು ಮತ್ತೆ ಮತ್ತೆ ಅಭ್ಯಾಸ ಮಾಡಿ
ಸದಾ ಹಿಂದಕ್ಕೆ ಚಲಿಸುವುದು ಸುಲಲಿತವಾಗುವವರೆಗೂ!
ಪ್ರಸ್ತುತದ ಬಗ್ಗೆ ಕಿಂಚಿತ್ತು ಯೋಚನೆಯೂ
ಗತಕಾಲವ ಕುರಿತ ನಿಮ್ಮ ಆಲೋಚನೆಗೆ ಅಡ್ಡಿಯಾಗದಿರಲಿ!


ಮತ್ತೆ ಮತ್ತೆ ಅದನ್ನೇ ಹೇಳಿ-
ಮತ್ತೆ ಮತ್ತೆ ಇದೊಂದನ್ನೇ ಹೇಳಿ:
ಹಿಂದಿನ ಕಾಲದಲ್ಲಿ ಭಾರತ ಅದೆಷ್ಟು ಅದ್ಭುತವಾಗಿತ್ತು ಎಂದು!
ಆ ದಿನಗಳಲ್ಲಿ ಭಾರತ ಎಷ್ಟು ಭವ್ಯವಾಗಿತ್ತು ಎಂದು!

ಆಗ, ಮಿತ್ರರೇ, ನೀವು ನಿಮ್ಮ ಗುರಿಯನ್ನು ತಲುಪಿ
ನಮ್ಮ ಸ್ವರ್ಗವನ್ನು ಸೇರುತ್ತೀರಿ.
ಹೌದೌದು, ನಾವು ಆ ಸ್ವರ್ಗದಲ್ಲೇ ಕೆಲಕಾಲದಿಂದ ಇದ್ದೇವೆ.

ಹಾ, ನೀವೂ ಅಲ್ಲಿಗೆ ತಲುಪಿದ ನಂತರ,
ನೀವೂ ನಮ್ಮಂತೆಯೇ ಆ ನರಕಕೂಪವನ್ನು ಸೇರಿದ ನಂತರ,
ನಮ್ಮೊಂದಿಗೆ ಸಂಪರ್ಕದಲ್ಲಿದ್ದು
ನೀವು ಹೇಗಿದ್ದೀರಿ ಎಂದು ನಮಗೆ ತಿಳಿಸಿ!



ಉರ್ದು ಮೂಲ: ಫೆಮಿದಾ ರಿಯಾಜ್
ಇಂಗ್ಲೀಷಿಗೆ: ಶಬಾನಾ ಮೀರ್
ಕನ್ನಡಕ್ಕೆ: ಗೌರಿ ಲಂಕೇಶ್



ಕೊಲೆಯಾದ ಮುಸಲ್ಮಾನ ಇಖ್ಲಾಕ್



ಕೊಲೆಯಾದ ದಲಿತ ಚಿಮ್ಮ

ಮುಸ್ಲಿಮ್ ಎಂಬ ಕಾರಣಕ್ಕೆ ಹೊಡೆದು ಕೊಂದರು ದಲಿತ ಎಂಬ ಕಾರಣಕ್ಕೆ ಸುಟ್ಟು ಕೊಂದರು

ಇವು ಕಥೆ ಕಾದಂಬರಿಗಳ ಕಾಲ್ಪನಿಕ ಘಟನೆಗಳಲ್ಲ. ಸಿನಿಮಾ ಟಿ.ವಿಗಳ ದೃಶ್ಯವೂ ಅಲ್ಲ. ಕಳೆದ ವಾರ ಭಾರತದ ಉತ್ತರ ಪ್ರದೇಶ ರಾಜ್ಯದಲ್ಲಿ ಧರ್ಮಕಾರಣಕ್ಕೆ ನಡೆದ ಎರಡು ಕಗ್ಗೊಲೆಗಳನ್ನು ಇವು ಹೇಳುತ್ತವೆ.

ಮೊಹಮ್ಮದ್ ಇಖ್ಲಾಕ್ ಸೈಫಿಯವರ ಮನೆಯಲ್ಲಿ ಮಾಂಸ ಕಂಡುಬಂದಿತು.

ಉತ್ತರ ಪ್ರದೇಶದ ಗೌತಮ್‌ಬುದ್ಧ ನಗರ್ ಜಿಲ್ಲೆ ದದ್ರಿ ತಹಸೀಲಿನ ಬಿಶಾಡ ಗ್ರಾಮದಲ್ಲಿ ಮಧ್ಯ ವಯಸ್ಸಿನ ಗೃಹಸ್ಥ ಮೊಹಮ್ಮದ್ ಇಖ್ಲಾಕ್ ಸೈಫಿ, ಅವರ ತಾಯಿ ಅಸ್ಗರಿ (70), ಪತ್ನಿ ಇಕ್ರಮಾನ್ (52), ಕಿರಿ ಮಗ ದಾನಿಶ್ (21) ಮತ್ತು ಮಗಳು ಸಹಿಸ್ತಾ(17)ರೊಂದಿಗೆ ನೆಲೆಸಿದ್ದರು. ಅವರ ಕುಟುಂಬ ಕಳೆದ 70 ವರ್ಷಗಳಿಂದ ಆ ಹಳ್ಳಿಯಲ್ಲೇ ವಾಸವಾಗಿದೆ. ಮೊದಲು ಕಡುಬಡತನದಲ್ಲಿದ್ದ ಇಖ್ಲಾಕ್ ಅವರ ಹಿರಿಮಗ ಸರ್ತಾಜ್ ವಾಯುಸೇನೆಯಲ್ಲಿ ಉದ್ಯೋಗಿಯಾದ ನಂತರ ಆರ್ಥಿಕವಾಗಿ ಸ್ವಲ್ಪ ಚೇತರಿಸಿಕೊಂಡಿದ್ದರು. ಇಖ್ಲಾಕ್ ಮನೆಯವರು ಕಳೆದ ಶುಕ್ರವಾರ, ತಾ। 25-09-2015 ರಂದು ಬಕ್ರೀದ್ ಹಬ್ಬ ಆಚರಿಸಿದ್ದರು; ಆದರೆ ಯಾವ ಪ್ರಾಣಿಯನ್ನೂ ಕುರ್ಬಾನಿ ಮಾಡಿರಲಿಲ್ಲ; ಕುಟುಂಬದ ಆಪ್ತರೊಬ್ಬರು ಕೊಟ್ಟಿದ್ದ ಮಟನ್‌ನಲ್ಲಿ ಅವರು ಹಬ್ಬದ ಊಟ ಮುಗಿಸಿ, ಉಳಿದಿದ್ದ ಸ್ವಲ್ಪ ಮಾಂಸವನ್ನು ಫ್ರಿಜ್‌ನಲ್ಲಿ ಇಟ್ಟಿದ್ದರು. ತಾ। 28-09-2015 ಸೋಮವಾರ ದೇವಾಲಯದ ಮೈಕ್‌ನಲ್ಲಿ ರಾತ್ರಿ 10 ಗಂಟೆಯ ಸುಮಾರಿಗೆ ಇಖ್ಲಾಕ್ ಮನೆಯಲ್ಲಿ ದನದ ಮಾಂಸವಿದೆ ಎಂದು ಪ್ರಸಾರ ಮಾಡಲಾಯಿತು. ಕೆಲವೇ ನಿಮಿಷಗಳಲ್ಲಿ ಸುಮಾರು 200 ಜನರ ಗುಂಪು ಅವರ ಮನೆಯನ್ನು ಸುತ್ತುವರಿಯಿತು; ಹತ್ತಿಪ್ಪತ್ತು ಜನ ಮನೆಯ ಬಾಗಿಲು ಒಡೆದು ಒಳನುಗ್ಗಿ ಮನೆಯಲ್ಲಿದ್ದ ಹೊಲಿಗೆ ಮೆಷೀನು, ಫ್ರಿಜ್, ಪಾತ್ರೆ, ಫರ್ನೀಚರ್ ಎಲ್ಲವನ್ನೂ ಧ್ವಂಸಮಾಡಿ, ಇಖ್ಲಾಕ್‌ರನ್ನು ಅವರ ಹೊಲಿಗೆ ಮೆಷೀನಿನಿಂದಲೇ ಜಜ್ಜ ತೊಡಗಿದರು. ಫ್ರಿಜ್‌ನಲ್ಲಿ ಇಟ್ಟಿರುವುದು ಬೀಫ್ ಅಲ್ಲ; ಮಟನ್ ಎಂದು ಇಖ್ಲಾಕ್ ಎಷ್ಟು ಗೋಗರೆದರೂ ಅದಕ್ಕೆ ಕ್ಯಾರೇ ಅನ್ನದೆ ಗುಂಪಿನಲ್ಲಿದ್ದವರು ಅವರನ್ನು ಹೊಡೆದು ಹೊಡೆದು ಕೊಂದು ಹಾಕಿದರು; ಮನೆಯಲ್ಲಿದ್ದ ಅವರ ಕಿರಿಯ ಮಗ ದಾನಿಶ್‌ಗೂ ಹೊಡೆದರು. ದಾನಿಶ್‌ಗೆ ಮಾರಣಾಂತಿಕವಾದ ಪೆಟ್ಟುಬಿದ್ದಿದ್ದು ಆಸ್ಪತ್ರೆಯಲ್ಲಿ ಒಂದು ವಾರದ ನಂತರವೂ ಅವರು ಕೋಮಾದಲ್ಲಿದ್ದಾರೆ. ಗುಂಪು ಇಖ್ಲಾಕ್ ಅವರ ತಾಯಿ ಅಸ್ಗರಿಯವರಿಗೆ ಸಹ ಥಳಿಸಿದ್ದು ಅವರ ಕಣ್ಣಿಗೆ ಏಟುಬಿದ್ದಿದೆ. ಉತ್ತರ ಪ್ರದೇಶ ರಾಜ್ಯದಲ್ಲಿ ದನದ ಮಾಂಸವನ್ನು ಮನೆಯಲ್ಲಿ ಇರಿಸುವುದು ಕಾನೂನುರೀತ್ಯಾ ಅಪರಾಧವಲ್ಲ. ಆದಾಗ್ಯೂ ಇಖ್ಲಾಕ್ ಅಪರಾಧಿ ಎಂದು ಚಿತ್ರಿಸಲು ಅನುಕೂಲವಾಗುವಂತೆ ಸ್ಥಳದಲ್ಲಿದ್ದ ಪೊಲೀಸರು ಅವರ ಫ್ರಿಜ್‌ನಲ್ಲಿದ್ದ ಮಾಂಸವನ್ನು ವಶಕ್ಕೆ ತೆಗೆದುಕೊಂಡು ಫಾರೆನ್ಸಿಕ್ ಪರೀಕ್ಷೆಗೆ ಕಳುಹಿಸಿದ್ದಾರೆ! 'ನಮ್ಮ ಮನೆಯಲ್ಲಿದ್ದುದು ಮಟನ್, ಬೀಫ್ ಅಲ್ಲ ಎಂದು ಖಾತ್ರಿಯಾದರೆ ನನ್ನ ತಂದೆ ಮರಳಿ ಬರುತ್ತಾರೆಯೇ?' ಎಂಬ ಇಖ್ಲಾಕ್ ಅವರ ಮಗಳು ಸಹಿಸ್ತಾಳ ಪ್ರಶ್ನೆಗೆ ಉತ್ತರ ಪ್ರದೇಶ ರಾಜ್ಯ ಸರಕಾರ ಏನೆಂದು ಉತ್ತರಿಸುತ್ತದೆ? ಆಹಾರಕ್ಕಾಗಿ ಕೂಡ ಗೋಹತ್ಯೆ ಸಲ್ಲದು ಎಂದು ಪ್ರತಿಪಾದಿಸುವ ಬಿ.ಜೆ.ಪಿ ಏನು ಹೇಳುತ್ತದೆ? ಆ ಪಕ್ಷದ ವಕ್ತಾರ ಹಾಗೂ ರಾಜ್ಯ ಸಭಾ ಸದಸ್ಯ ತರುಣ್ ವಿಜಯ್, "ಕೇವಲ ಸಂದೇಹದ ಮೇಲೆ ಯಾರನ್ನೇ ಆಗಲಿ ಕೊಲ್ಲುವುದು ತಪ್ಪು" ಎಂದು ದದ್ರಿಯ ಘಟನೆಗೆ ಪ್ರತಿಕ್ರಿಯಿಸಿದ್ದಾರೆ. ಅಕಸ್ಮಾತ್ ಇಖ್ಲಾಕ್ ಮನೆಯಲ್ಲಿದ್ದ ಮಾಂಸ ಬೀಫ್ ಆಗಿದ್ದರೆ ಅವರ ಹತ್ಯೆ ಅಪರಾಧವಲ್ಲ ಎಂಬುದು ತರುಣ್ ವಿಜಯ್ ಮಾತಿನ ಅರ್ಥವಲ್ಲವೆ? ಬಿ.ಜೆ.ಪಿಯ ನಾಯಕರೂ, ಲೋಕಸಭಾ ಸದಸ್ಯರೂ ಆಗಿರುವ ಯೋಗಿ ಆದಿತ್ಯನಾಥ್ ಹಾಗೂ ಸಾಧ್ವಿ ಪ್ರಾಚಿ ಗೋಹತ್ಯೆ ನಿಲ್ಲದಿದ್ದರೆ ಬರುವ ದಿನಗಳಲ್ಲಿ ಇಂತಹ ಘಟನೆಗಳು ಇನ್ನಷ್ಟು ನಡೆಯಲಿವೆ ಎಂದು ಎಚ್ಚರಿಸುವ ಮೂಲಕ ಬಿ.ಜೆ.ಪಿಯ ನಿಜವಾದ ಅಜೆಂಡಾ ಕೋಮುದ್ವೇಷವನ್ನು ಹೆಚ್ಚಿಸುವುದೇ ಹೊರತು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೋದಹೋದ ಕಡೆಗಳಲ್ಲಿ ಬೊಬ್ಬೆ ಹೊಡೆಯುವ ಅಭಿವೃದ್ಧಿಯಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಸಂಘಪರಿವಾರದ ಕಣ್ಮಣಿಯಾಗಿರುವ ಪ್ರಧಾನಮಂತ್ರಿ, ಗೋಹತ್ಯೆಯನ್ನು 'ಗುಲಾಬಿ ಕ್ರಾಂತಿ' ಎಂದು ಹೆಸರಿಸಿ ಬಿಜೆಪಿಯೇತರ ಪಕ್ಷಗಳು ಮುಸ್ಲಿಮರನ್ನು ಓಲೈಸುವ ತಮ್ಮ ವೋಟ್‌ಬ್ಯಾಂಕ್ ರಾಜಕೀಯಕ್ಕಾಗಿ ಅದನ್ನು ಪ್ರೋತ್ಸಾಹಿಸುತ್ತಿವೆ ಎಂದು ಈಗಾಗಲೇ ಆಪಾದಿಸಿದ್ದಾರೆ. ಮುಸ್ಲಿಮರನ್ನು ಸಾರಾಸಗಟಾಗಿ ಗೋಹಂತಕರು ಎಂದು ಚಿತ್ರಿಸುವ ಮುಖಾಂತರ ಅವರನ್ನು ದೇಶದ 'ಪ್ರಧಾನಧಾರೆಯ' ಅಂಚಿನಿಂದ ಇನ್ನಷ್ಟು ಆಚೆಗೆ ತಳ್ಳುವ ರಾಜಕೀಯ ಅಭಿಯಾನದಲ್ಲಿ ಪ್ರಧಾನ ಮಂತ್ರಿಯಿಂದ ಹಿಡಿದು ಬಿ.ಜೆ.ಪಿ ಬೆಂಬಲಿಗರೆಲ್ಲರೂ ಈಗ ಕೈಜೋಡಿಸಿದ್ದಾರೆ. ಈ ಅಭಿಯಾನದ ಅಂಗವಾಗಿಯೇ ಇಖ್ಲಾಕ್ ಅವರನ್ನು ಹತ್ಯೆ ಮಾಡಲಾಗಿದೆ. ಅವರ ಮನೆಯಿಂದ ಪೊಲೀಸರು ವಶಕ್ಕೆ ತೆಗೆದುಕೊಂಡದ್ದು ದನದ ಮಾಂಸವ್ರೋ ಕುರಿಯದ್ದೋ ಎಂಬ ಪ್ರಶ್ನೆಯೇ ಅಸಂಗತ. ಇಖ್ಲಾಕ್‌ರ ಮನೆಯಲ್ಲಿ ಮಾಂಸದ ಬದಲು ತರಕಾರಿ ಇದ್ದಿದ್ದರೂ ಅವರನ್ನು ಕೊಲ್ಲಲಾಗುತ್ತಿತ್ತು; ಯಾಕೆಂದರೆ ಅವರು ಮುಸ್ಲಿಮ್. ಅದಕ್ಕೆ ಸರಿಯಾಗಿ ಈ ಪ್ರಕರಣದಲ್ಲಿ ಹೆಸರಿಸಲಾಗಿರುವ ಹನ್ನೊಂದು ಆರೋಪಿಗಳಲ್ಲಿ ಹೆಚ್ಚಿನವರು ಬಿ.ಜೆ.ಪಿ.ಯ ಸಂಪರ್ಕದಲ್ಲಿದ್ದವರು. ಸ್ಥಳೀಯ ಬಿ.ಜೆ.ಪಿ. ನಾಯಕ ಸಂಜಯ ರಾಣಾನ ಮಗ ವಿಶಾಲ್ ಜೊತೆಗೆ ಇತರ ಏಳು ಆರೋಪಿಗಳು ಸಂಜಯ್ ರಾಣಾನ ಹತ್ತಿರದ ಸಂಬಂಧಿಕರು. ಇಖ್ಲಾಕ್ ಮನೆಯಲ್ಲಿ ದನದ ಮಾಂಸವಿದೆ ಎಂದು ದೇವಾಲಯದ ಮೈಕ್‌ನಲ್ಲಿ ಸಾರಿದ ಹೋಮ್‌ಗಾರ್ಡ್ ವಿನಯ್ ಕೂಡಾ ಸಂಜಯ್ ರಾಣಾನ ಸಂಬಂಧಿ. ಬಿಶಾಡಾ-ದದ್ರಿಗಳನ್ನು ಒಳಗೊಂಡಿರುವ ನೋಯ್ಡಾ ಕ್ಷೇತ್ರದ ಸಂಸದ್ ಸದಸ್ಯನೂ ಕೇಂದ್ರದ ಸಂಸ್ಕೃತಿ ಸಚಿವನೂ ಆಗಿರುವ ಮಹೇಶ್ ಶರ್ಮ ಇಖ್ಲಾಕ್ ಹತ್ಯೆ ಕೋಮುದ್ವೇಷದಿಂದ ಆದದ್ದಲ್ಲವೆಂದೂ ಅದು ತಪ್ಪು ತಿಳಿವಳಿಕೆಯಿಂದ ನಡೆದ ಆಕಸ್ಮಿಕ ಘಟನೆ ಎಂದೂ ಚೂರೂ ನಾಚಿಕೆ ಇಲ್ಲದೆ ಹೇಳುತ್ತಿದ್ದಾನೆ. ತನ್ನ ಸುಳ್ಳನ್ನು ಅವನು ಸಮರ್ಥಿ...ವುದಂತೂ ಅವನ ಸಂಸ್ಕೃತಿಗೆ ತಕ್ಕ ಹಾಗಿದೆ. "... 17 ವರ್ಷದ ಮಗಳಿದ್ದು ಅವರ ಮನೆ ನುಗ್ಗಿ... ಯಾರೂ ಅವಳ ಮೈ ಮುಟ್ಟಿಲ್ಲ" - ಇದು ... ಶರ್ಮನ ಹೇಳಿಕೆ! ಕಳೆದ ಹಲವಾರು ವರ್ಷಗಳ... ಹಳ್ಳಿಯಲ್ಲಿ ಹಿಂದೂಗಳೂ ಮುಸ್ಲಿಮರೂ ಒಟ್ಟ... ವಾಸಿಸುತ್ತಿದ್ದರೂ ಒಂದೇ ಒಂದು ಗಲಭೆ ಸಂ... ಎಂಬುದು ಅವನ ಇನ್ನೊಂದು ಮಾತು. ಮ... ತಮ್ಮ ಹೆಣ್ಣುಮಕ್ಕಳ ತಂಟೆಗೆ ಯಾರೂ ಬರದಿದ್ದ... ಪಾಡಿಗೆ ತಾವಿರಲು ಊರವರು ಬಿಟ್ಟರೆ ಮು... ಅದನ್ನೇ ಒಂದು ಸೌಭಾಗ್ಯವೆಂದು ತಿಳಿಯಬೇಕಾ? ... ಕನಿಷ್ಟ ರಕ್ಷಣೆ ಒದಗಿಸುವುದು ಸರಕಾರದ ಕರ್ತವ್ಯ... ಈ ಪ್ರಶ್ನೆಯನ್ನು ಮಹೇಶ್ ಶರ್ಮನಿಗೆ ... ಉಪಯೋಗವಿಲ್ಲ, ಯಾಕೆಂದರೆ ಮೊನ್ನೆಯಷ್ಟೆ ... ದೆಹಲಿಯ ಪ್ರಮುಖ ರಸ್ತೆಯೊಂದರ ಔರಂಗಜೇ... ಎಂಬ ಹೆಸರನ್ನು ಅಬ್ದುಲ್ ಕಲಾಂ ರಸ್ತೆ ... ಬದಲಾಯಿಸಿದ್ದನ್ನು ಸಮರ್ಥಿಸುತ್ತ "ಅಬ್ದುಲ್ ... ಮುಸ್ಲಿಮನಾದರೂ ಓರ್ವ ರಾಷ್ಟ್ರೀಯವಾದಿ" ... ತಾರೀಫು ಮಾಡಿದ್ದಾನೆ. ಕೇಂದ್ರದ ಸಂಸ್ಕೃತಿ ... ಈ ದೇಶದ ಮುಸ್ಲಿಮ್ ಸಮುದಾಯದ ಬಗ್ಗೆ ... ಅಭಿಪ್ರಾಯವಿದೆ ಎಂಬುದು ಅವನ ಬಾಯಿಂದ ಹ... ಈ ಅಣಿಮುತ್ತಿನಿಂದಲೇ ಗೊತ್ತಾಗುತ್ತದೆ.





ದದ್ರಿ ಗಲಭೆ ವಿರುದ್ಧ ಪ್ರತಿಭಟನೆ

ದಲಿತನಾದರೂ ದೇವಾಲಯ ಪ್ರವೇಶಿಸುವ ಧೈರ್ಯ ತೋರಿದ

ಉತ್ತರ ಪ್ರದೇಶ ರಾಜ್ಯದ ಬಿಶಾಡಾ-ದರ್ದಿಯ ... ಅವರನ್ನು ಮುಸ್ಲಿಮ್ ಎಂಬ ಕಾರಣಕ್ಕೆ ಊರವರೇ ... ಕೊಂದರೆ ಅದೇ ರಾಜ್ಯದ ಹಮೀರ್‌ಪುರ ... ಬಿಲ್‌ಗಾಂವ್ ಗ್ರಾಮದ ಚಿಮ್ಮ ಎಂಬವರನ್ನು ... ಎಂಬ ಕಾರಣಕ್ಕೆ ಸುಟ್ಟುಕೊಲ್ಲಲಾಗಿದೆ. ... 31-09-2015 ಬುಧವಾರ, 90ರ ಹ... ವಯೋವೃದ್ಧ ಚಿಮ್ಮ, ಅವರ ಇಳಿವಯಸ್ಸಿನ ಪ... ಮತ್ತು ಸೋದರನ ಜೊತೆ, ತಮ್ಮ ಹಳ್ಳಿಯ ... ಬಾಬಾ ದೇವಾಲಯದ ಒಳ ಹೋಗುತ್ತಿದ್ದಾಗ ...

▶▶ 6





ಇಖ್ಲಾಕ್ ಅವರ ಹಿರಿಯ ಮಗ ಸರ್ತಾಜ್

ಶಾಮಣ್ಣನ ಜೊತೆಯಲ್ಲೊಂದು ದಿನ

ಪ್ರಿಯ ಸಂಪಾದಕರೆ,

ನೀವು 'ಕಂಡಹಾಗೆ' ಸಂಪಾದಕೀಯ ವಿಭಾಗದಲ್ಲಿ ...ದ ಕಡಿದಾಳು ಶಾಮಣ್ಣನವರ ಲೇಖನವು ನಾವು ...ಣ್ಣನವರ ಬಗ್ಗೆ ತರುತ್ತಿರುವ ಅಭಿನಂದನಾ ...ಕ್ಕೆ ಸೂಕ್ತವಾಗಿರುವುದರಿಂದ ಬಳಸಿಕೊಳ್ಳುತ್ತೇವೆ.


ಶಾಮಣ್ಣನವರು ಎಂತಹ ವ್ಯಕ್ತಿ ಎಂದರೆ ನೀವು ...ರನ್ನು ಭೇಟಿ ಮಾಡಿದಾಗಲೆಲ್ಲಾ ಒಂದೊಂದು ...ನ ಬರೆಯಬಹುದು. ನನಗೂ ಹಾಗೇ ಆಗಿದೆ. ... ವಾರ ಅವರನ್ನು ನಾಟಕೋತ್ಸವದ ...ಘಾಟನೆಗೆಂದು ಕರೆಯಲು ಹೋದಾಗ ರೈತಸಂಘದ ...ತ್ರಯೇ ಬಿಚ್ಚಿಕೊಂಡಿತು.

ಶಿವಮೊಗ್ಗದಲ್ಲಿ ಅಡಿಕೆ ಕಬ್ಬು ಬೆಳೆಗಾರರ ...ಘವೊಂದು ಮುಂದೆ ರೈತ ಸಂಘವಾಗಿ ಬೆಳೆಯಿತು. ...ರ ದೇಣಿಗೆಯಿಂದ ಒಂದು ಬೃಹತ್ ಕಟ್ಟಡವನ್ನು ...ದ್ದಾರೆ. ಆದರೆ ರೈತರು ಸಭೆ ಮಾಡಬೇಕಾದರೆ ...ರನೇ ಮಹಡಿಯಲ್ಲಿರುವ ಜಂಕ್‌ಶೀಟಿನ ಶೆಡ್ಡಿಗೆ ... ಹೋಗಬೇಕು. ಶಿವಮೊಗ್ಗ ಜಿಲ್ಲೆಯ ರೈತರು ...ದರೆ ಸ್ನಾನ, ಶೌಚ, ಮಲಗಲು ಯಾವ ...ಕೂಲವೂ ಇಲ್ಲ. ಕೇವಲ ಐದು ವರ್ಷ ಆಡಳಿತ ...ಡಿದ ಪಿಂಜರಾಪೋಲು ಪಾರ್ಟಿಗಳೆಲ್ಲಾ ಭವ್ಯವಾದ ...ರ್ಟಿ ಆಫೀಸು ಕಟ್ಟಿಕೊಂಡಿವೆ. 30 ವರ್ಷ ...ಘಟನೆಗೆ ಒಳ್ಳೆ ಆಫೀಸಿಲ್ಲ.

ನನಗನ್ನಿಸಿದಂತೆ ಈಗ ಹಾಲಿ ಇರುವ ರೈತ ...ಖಂಡರ ಲ್ಲನೇಕರು ಮನೆ ಸೇರಿಕೊಂಡು ಹೊಸ ...ಂಗವೊಂದು ಬಯಲಲ್ಲಿ ಸೇರಿಕೊಂಡು ರೈತಸಂಘ ...ಬೇಕಿದೆ. ಈಗಿರುವ ಮಾತುಗಾರ ನಾಯಕರು ...ಕಿರುವವರೆಗೂ ರೈತ ಸಂಘದ ಕತೆ ಇಷ್ಟೇ. ...ದರೆ ಇವರಲ್ಲಿ ಹಳೆ ದ್ವೇಷದ ಶೇಷಗಳು ...ದುಬಿಟ್ಟಿವೆ. ಇದಾವುದೂ ಇಲ್ಲದ ಅಪ್ಪಟ ...ಜೀವಿ ಎಂದರೆ ಶಾಮಣ್ಣ ಮಾತ್ರ.

ಹೀಗೆ ಯೋಚಿಸುತ್ತ ಅವರ ಮನೆ ಮುಂದಕ್ಕೆ ...ಗಿ ನಿಂತಾಗ ಶಾಮಣ್ಣನವರ ಪತ್ನಿ ...ದೇವಕ್ಕನವರು ಎಂದಿನಂತೆ ಅಡಿಕೆ ಕುಯ್ಲಿನ ...ಗಾರರೊಂದಿಗೆ ತಾವೂ ಕೆಲಸ ಮಾಡುತ್ತಿದ್ದರು. ...ಮಣ್ಣನವರನ್ನು ಪೂರ್ಣ ಪ್ರಮಾಣದ ...ವಳಿಗಾರರನ್ನಾಗಿಸಿ ತಾವು ತೋಟ ...ಡಿಕೊಳ್ಳದಿದ್ದರೆ ಇಷ್ಟರಲ್ಲೇ ತೋಟ ಹಾಳಾಗುತ್ತಿತ್ತು. ... ನೋಡಿದರೆ ಶ್ರೀದೇವಕ್ಕನವರು ತೋಟದ ...ಸ್ತುವಾರಿಯ ಜೊತೆಗೆ ಚಳವಳಿ ...ಸಮಾರಂಭಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತ ...ಬಿದ್ದಾರೆ. ಈಗ ಆಳುಗಳೊಂದಿಗೆ ಅವರೂ ಕೆಲಸ ...ಡುತ್ತಿರಬೇಕಾದರೆ ಶಾಮಣ್ಣನನ್ನು ಹುಡುಕಿಕೊಂಡು ...ವ ರೈತರೊಂದಿಗೆ ಮಾತನಾಡುತ್ತ ಕುಳಿತಿದ್ದರು.

ಅವರ ಮನೆಯಂಗಳಕ್ಕೆ ಮೊದಲಿಗಿಂತಲೂ ಹೆಚ್ಚು ...ು ಬಿದ್ದಿತ್ತು. ಕೇಳಲಾಗಿ, ಕತ್ತಲೆ ಮಾಡಿದ್ದ ಮೂರು ...ಗಳ ಕೊಂಬೆ ತೆಗೆಸಿದ್ದರು. ಅದರಲ್ಲಿ ದಿನಕ್ಕೆ ...ಂಚು ಬೆಳೆಯುವ ಬಿದಿರನ್ನು ಕಡಿಸಿದ್ದರು. ಕೆಲ ...ಗಳ ಹಿಂದೆ ಬಿದಿರಿಗೆ ದಾರ ಕಟ್ಟಿ 24 ...ಯಲ್ಲಿ ಅದು ಒಂದಿಂಚು ಬೆಳೆದ ಕೌತುಕವನ್ನು ...ರಿಸಿದ್ದರು. ಅಲ್ಲದೆ ಮನೆಯ ಮುಂದಿದ್ದ ಸಪೋಟ ...ಕ್ಕೆ ಬಂದು ಕುಳಿತ ಮರಕುಟಿಗ ಹಕ್ಕಿ ...ಚನೆಯಿಲ್ಲದೆ ಏಕದಂ ಸಪೋಟಕ್ಕೆ ಕುಕ್ಕಿದ ...ಡಲಿ ಇಡೀ ಕೊಕ್ಕು ಅದರೊಳಕ್ಕೆ ಹೋಗಿ



ಬಿಡಿಸಿಕೊಳ್ಳಲಾಗದೆ ಒದ್ದಾಡಿದ ಪ್ರಸಂಗ ಹೇಳಿದ್ದರು.

ಆ ನಂತರ ಇನ್ನೊಮ್ಮೆ ಆಲಿಕಲ್ಲು ಮಳೆ ಹೊಡೆತಕ್ಕೆ ಸಿಕ್ಕಿದ ನಾಗರಹಾವು ಯಾರೋ ಕಲ್ಲಿನಿಂದ ಹೊಡೆಯುತ್ತಾರೆಂದು ಸುತ್ತಲೂ ಹೆಡೆಯೆತ್ತಿ ಬುಸುಗುಡುತ್ತ ಕಡೆಗೆ ಆಲಿಕಲ್ಲು ಹೊಡೆತಕ್ಕೆ ಸತ್ತು ಹೋದ ಫೋಟೋ ತೆಗೆದಿದ್ದರು. ಹಾವಿನ ಫೋಟೋ ತೆಗೆಯುವ ಉಮೇದಿನಲ್ಲಿ ತಮಗೆ ಬಿದ್ದ ಆಲಿಕಲ್ಲುಗಳ ಹೊಡೆತ ಅವರ ಗಮನಕ್ಕೇ ಬಂದಿರಲಿಲ್ಲ.

ಆಗ ಅವರ ಪ್ರಾಂತ್ಯದಲ್ಲಿ ಆಲಿಕಲ್ಲು ಮಳೆ ಸುರಿದಿದ್ದರಿಂದ ಬತ್ತದ ಗದ್ದೆ ಗೋನೆ ಸಮೇತ ಮಲಗಿ ರೈತರ ಬಾಳಿಗೆ ಕೈಗೆ ಬಂದು ತುತ್ತು ಬಾಯಿಗಿಲ್ಲ ಎಂಬಂತಾಗಿತ್ತು. ಆಗ ದೇವೇಗೌಡರು ಮುಖ್ಯಮಂತ್ರಿಗಳಾ ಗಿದ್ದರು. ಶಾಮಣ್ಣನಿಗೆ ರಾಜ್ಯೋತ್ಸವ ಪ್ರಶಸ್ತಿ ಘೋಷಣೆಯಾಗಿತ್ತು. ಕೆರಳಿದ ಶಾಮಣ್ಣ ಮೊದಲು ಆಲಿಕಲ್ಲಿನ ಹೊಡೆತಕ್ಕೆ ನೆಲಹಿಡಿದ ರೈತರಿಗೆ ಪರಿಹಾರ ಕೊಡಿ, ಅದುಬಿಟ್ಟು ರಾಜ್ಯೋತ್ಸವ ಪ್ರಶಸ್ತಿ ಕೊಟ್ಟು ಸುಮ್ಮನಿರಿಸಲು ಬರಬೇಡಿ ಎಂದು ಪ್ರಶಸ್ತಿಯನ್ನು ತಿರಸ್ಕರಿಸಿದ್ದಷ್ಟೇ ಅಲ್ಲ, ದೇವೇಗೌಡರು ಜನತಾದರ್ಶನಕ್ಕೆಂದು ಶಿವಮೊಗ್ಗಕ್ಕೆ ಬಂದಾಗ ರೈತರನ್ನು ಕಟ್ಟಿಕೊಂಡು ಪ್ರತಿಭಟನೆ ಮಾಡಿದ್ದರು.

ಅತ್ತ ದೇವೇಗೌಡರಿಗೆ ಅರ್ಜಿ ಕೊಡಲೆಂದು ಶಾಮಣ್ಣನವರ ತಂದೆ ರಾಮಪ್ಪಗೌಡರು ಕ್ಯೂನಲ್ಲಿ ನಿಂತಿದ್ದರು. ಮಗ ಪ್ರತಿಭಟನೆ ಮಾಡುತ್ತಿದ್ದರೆ ಅಪ್ಪ ಅರ್ಜಿ ಹಿಡಿದು ನಿಂತ ಈ ವಿಪರ್ಯಾಸಕ್ಕೆ ಏನು ಹೇಳುವುದೆಂದು ನಮಗೆ ಗೊತ್ತಾಗಲಿಲ್ಲ. ರಾಮಪ್ಪಗೌಡರ ಅರ್ಜಿ ಸಾರಾಂಶ ಕೇಳಲಾಗಿ ಶೂದ್ರ ಜನಾಂಗದ ದೇವೇಗೌಡರು ಮುಖ್ಯಮಂತ್ರಿಗಳಾಗಿರುವ ಈ ಸಮಯದಲ್ಲಿ, ಶೂದ್ರ ದೇವರುಗಳಾದ ಚೌಡಮ್ಮ, ಮಾರಮ್ಮ, ದುಗ್ಗಮ್ಮ, ಕೆಂಚಮ್ಮ ಇಂತಹ ದೇವರುಗಳ ಗುಡಿ ಹಾಳುಬಿದ್ದಿವೆ; ಅವುಗಳನ್ನು ಹೊಸದಾಗಿ ನಿರ್ಮಿಸಿ ಎಂಬ ಅರ್ಜಿ ಹಿಡಿದು ರಾಮಪ್ಪಗೌಡರು ನಿಂತಿದ್ದರು. ಈ ಅಪ್ಪ-ಮಗನ ವೈರುಧ್ಯ ದಿಕ್ಕುಗಳನ್ನು ನಾವು ಆಡಿಕೊಳ್ಳುತ್ತ ಬರುವಾಗ ಅಲ್ಲೇ ಇದ್ದ ಪಿಜಿಆರ್ ಸಿಂಧ್ಯ ಏನನ್ನೋ ಬಾಯಿಗಾಕಿಕೊಂಡು ಅದರೊಳಗಿದ್ದ ಚೀಟಿ ಉಂಡೆ ಮಾಡಿ ಎಸೆದರು. ಕುತೂಹಲಕ್ಕೆ ತೆಗೆದುಕೊಂಡು ಬಿಡಿಸಿ ನೋಡಿದಾಗ 'ಈ ಗುಳಿಗೆ ಸೇವನೆಯಿಂದ ರಕ್ತ ಶುದ್ಧಿಯಾಗಿ ವೀರ್ಯ ವೃದ್ಧಿಯಾಗುತ್ತದೆ' ಎಂದು ಬರೆದಿತ್ತು. ಇದನ್ನು ಶಾಮಣ್ಣನವರಿಗೆ ಹೇಳಿದಾಗ, "ಪಾಪ, ದಕ್ಷ ಮಂತ್ರಿ, ಆರೋಗ್ಯವಾಗಿರಲಿ ಬಿಡಿ" ಎಂದು ನಕ್ಕಿದ್ದರು.

ಮೊನ್ನೆ ನಾನು ಹೋದಕೂಡಲೆ ಅಗರದ ಹಳ್ಳಿಗೆ ಹೋಗಿ ಬರೋಣವೆಂದು ಹೊರಟರು. ಆ ಏರಿಯಾದಲ್ಲಿ ಅವರ ಕಾರಿನ ವೇಗ ಸ್ಪೀಡ್ ವಾಕಿಗೆ ಸಮನಾಗಿರುತ್ತದೆ. ಮೈದೊಳಲಲ್ಲಿ ಅಡ್ಡಗಟ್ಟಿದ ರೈತನೊಬ್ಬ ಕಾರಿನೊಳಕ್ಕೆ ಮೂತಿ ತೂರಿಸಿ, "ಸರಿಯಾದುತ್ತ ಕೊಟ್ಟಿದ್ದಿರಿ ಸ್ವಾಮಿ" ಎಂದ. ನಂತರ ಆತನೂ ಮಾತನಾಡಲಿಲ್ಲ, ಶಾಮಣ್ಣನೂ ಮಾತಾಡಲಿಲ್ಲ. ಪರಸ್ಪರ ನೋಟದಲ್ಲೇ ಯಾರಿಗೂ ತಕ್ಕ ಶಾಸ್ತಿ ಮಾಡಿದ ಕಿಡಿಗೇಡಿತನವಿತ್ತು.

ಅಲ್ಲಿಂದ ಮುಂದೆ ಹೋದಾಗ ರಸ್ತೆಗೆ ಹಾರ್ಮೋನಿಯಂ ನುಡಿಸುವ ಶಬ್ದ ಕೇಳಿಸಿತು. ಈ ಹಾರ್ಮೋನಿಯಂ ನಾದಕ್ಕೆ ಮನುಷ್ಯನನ್ನು ವಶೀಕರಣಗೊಳಿಸುವ ಶಕ್ತಿಯಿದೆ. ಬ್ರೇಕ್ ಹಾಕಿ ಕಾರು ನಿಲ್ಲಿಸಿದ ಶಾಮಣ್ಣ ಆ ಮನೆ ಹೊಕ್ಕು, ನಂತರ ಈಚೆಗೆ ಬಂದು ನನ್ನನ್ನೂ ಕರೆದರು. ನಾನು ಇಳಿದುಹೋಗಿ ನೋಡಿದಾಗ ವಯೋವೃದ್ಧರೊಬ್ಬರು ಲೆಗ್ ಹಾರ್ಮೋನಿಯಂ ಮೇಲೆ ಕುಳಿತು ಈ ಲೋಕವನ್ನೇ ತ್ಯಜಿಸಲಿರುವವರಂತೆ ಜಂತಿ ನೋಡುತ್ತ ಹಾರ್ಮೋನಿಯಂ ನುಡಿಸುವುದರಲ್ಲಿ ತಲ್ಲೀನರಾಗಿದ್ದರು.

ಶಾಮಣ್ಣನವರು ನನ್ನ ಪರಿಚಯವನ್ನು ವಿಸ್ತಾರವಾಗಿಯೇ ಮಾಡಿದರು. ಆದರೂ ಅವರಿಂದ ಯಾವುದೇ ಪ್ರತಿಕ್ರಿಯೆ ಬರದೆ ಬರೀ ಹಾರ್ಮೋನಿಯಂ ಶಬ್ದ ಬಂದಿತು. ಶಾಮಣ್ಣನವರು ತಮ್ಮ ಬ್ಯಾಗಿನಿಂದ ಪಾಕೆಟ್ ಡೈರಿಗಿಂತಲೂ ಉದ್ದ ಅಗಲವಿದ್ದ ಒಂದು ಪುಸ್ತಕ ತೆಗೆದು, 'ಇದೊಂದು ಹಾಡು ಬಾರಿಸಿ' ಎಂದರು. ಆಗ ಭೂಮಿಗಿಳಿದ ಹಾರ್ಮೋನಿಯಂ ಕಲಾವಿದರು "ಏನು ಶಾಮಣ್ಣಾರೆ?" ಎಂದರು. ಶಾಮಣ್ಣ ಮತ್ತೆ ನನ್ನ ಪರಿಚಯ ಮಾಡಿದರು. ಆಗ ಗೊತ್ತಾದದ್ದು ಅವರಿಗೆ ಸುತರಾಂ ಕಿವಿ ಕೇಳಿಸುತ್ತಿಲ್ಲವೆಂಬುದು. ಆದರೆ ಇಂತಹ ನ್ಯೂನತೆಗಳು ಶಾಮಣ್ಣನವರಿಗೆ ಸಮಸ್ಯೆಯೇ ಅಲ್ಲದಂತೆ. ಅದ್ದರಿಂತ ತಮ್ಮ ಡೈರಿ ತೆಗೆದು "ಒಂದು ದರ್ಬಾರಿ ಕಾನಡ ನುಡಿಸಿ" ಎಂದರು. ಕಲಾವಿದರು "ಆ ಏನೂ" ಎಂದರು. ಶಾಮಣ್ಣ ತಮ್ಮ ಕೋರಿಕೆಯನ್ನು ನಾಲ್ಕೈದು ಭಾರಿ ಗಟ್ಟಿಯಾಗಿ ಹೇಳಿದನಂತರ ಹಾರ್ಮೋನಿಯಂ ಶುರುವಾಯ್ತು, ಶಾಮಣ್ಣನವರು ದನಿ ಎತ್ತರಿಸಿ,

"ಅಮ್ಮ ಹಚ್ಚಿದೊಂದು ಹಣತೆ ಇನ್ನೂ ಬೆಳಗಿದೆ.
ಮನಕೆ ಮಬ್ಬು ಕವಿಯದಂತೆ ಸದಾ ಕಾದಿದೆ"

ಎಂದು ಎಂಟು ಸಾಲಿನ ಹಾಡನ್ನು ಪೂರ್ತಿ ಹೇಳಿ ಮುಗಿಸಿದರು.

ಅತ್ತ ಹಾರ್ಮೋನಿಯಂ ಕಲಾವಿದರು ಅದ್ಯಾವುದೊ ರಾಗವನ್ನು ಹಿಡಿದು ಹಳ್ಳ ಕೊಳ್ಳ ಬಿದ್ದು ವಾಪಸು ಬರಲಾಗದೆ ಅದೆಲ್ಲೊ ಹೋಗಿನಿಂತರು. ಅಂತೂ ಇಬ್ಬರೂ ವಿರುದ್ಧ ದಿಕ್ಕಿನಲ್ಲೇ ಸಾಗಿ ತಮ್ಮ ಕಚೇರಿ ಮುಗಿಸಿದರು. ಶಾಮಣ್ಣನವರಿಗೆ ತಮ್ಮ ದನಿಯ ಬಗ್ಗೆ ಎಷ್ಟು ಆತ್ಮವಿಶ್ವಾಸವಿದೆಯೋ ಅಷ್ಟೇ ಹಾರ್ಮೋನಿಯಂ ಕಲಾವಿದರಿಗೆ ಇದ್ದಂತೆ ಕಂಡಿತು. ಅದೆಲ್ಲಕ್ಕಿಂತ ಮುಖ್ಯವಾಗಿ ಸುಮ್ಮನೆ ಕಾಲ ಕಳೆಯುವುದಕ್ಕಿಂತ ಅವರು ನಡು ಮಧ್ಯಾಹ್ನ ಹಾರ್ಮೋನಿಯಂ ಮುಂದೆ ಕುಳಿತು ಕಿವಿ ಕೇಳದಿದ್ದರೂ ತಮ್ಮ ಇತರ ಇಂದ್ರಿಯಗಳ ಮುಖಾಂತರವೇ ಸಂಗೀತ ಸ್ವಾದಿಸುತ್ತಿದ್ದುದು ಮೆಚ್ಚುವಂತದ್ದಾಗಿತ್ತು.

ಶಾಮಣ್ಣನವರು ಬಹುದೊಡ್ಡ ಕಾರ್ಯಕ್ರಮದಲ್ಲಿ ಹಾಡೇಳಿದ ಖುಷಿಯಿಂದ ಇನ್ನು ಆ ಸಾಲುಗಳನ್ನು ಗುನುಗುತ್ತ ಕಾರು ಸ್ಟಾರ್ಟ್ ಮಾಡಿದರು. ಅಷ್ಟರಲ್ಲಿ ಅಲ್ಲಿಗೆ ವಿಧವಾ ಪಿಂಚಣಿ ಮತ್ತು ಅಂಗವಿಕಲರ ಪಿಂಚಣಿಗಾಗಿ ಹೋರಾಡಿ ಸುಸ್ತಾದ ಇಬ್ಬರು ಹೆಂಗಸರು ಬಂದರು. ಕಾರನ್ನು ಅಲ್ಲೇ ಬಿಟ್ಟ ಶಾಮಣ್ಣ ಆ ಊರಿನ ವಿಲೇಜ್ ಅಕೌಂಟೆಂಟ್ ಬಳಿಗೆ ಹೋದರು. ಅಲ್ಲಿಗೋಗಿ ಕೇಳಿದಾಗ, ಆ ಮಹಿಳೆಯರು ಒಪ್ಪಿಸಿದ್ದ ರೆಕಾರ್ಡುಗಳು ಸರಿಯಿರಲಿಲ್ಲ ಎಂದು ಗೊತ್ತಾಯಿತು. ಕೂಡಲೇ ಶಾಮಣ್ಣ ಅವುಗಳನ್ನು ಕೊಡಿಸಿ, ಪಿಂಚಣಿ ಬರುವಂತೆ ಮಾಡಬೇಕೆಂದು ತಮ್ಮ ಹಿಂಬಾಲಕ ವಿಶ್ವನಾಥನಿಗೆ ಆಜ್ಞಾಪಿಸಿ ಹೊರಟರು. ಅಲ್ಲಿಂದ ಮನೆಗೆ ಬಂದಕೂಡಲೇ ಮಾಮಾರಿ ಮಳೆಬಂತು. ಹೊರಾಂಡದಲ್ಲಿ ಕುಳಿತ ಶಾಮಣ್ಣ ತಮ್ಮ ಜಗದ್ವಿಖ್ಯಾತ ಸರೋದ್ ವಾದಕ ಆಲಿ ಅಕ್ಬರ್ ಖಾನರ ವಿಷಯ ತೆಗೆದುಕೊಂಡು ರವಿಶಂಕರ್ ಮತ್ತು ಖಾನರ ಜುಗಲ್ ಬಂದಿಯ ಕಚೇರಿ ವಿಷಯ ಹೇಳುತ್ತ ಅವರಿಬ್ಬರೂ ಎತ್ತರೆ ತ್ತರದ ಬಾನಾಡಿಗಳಂತೆ ವಿಹರಿಸಿ ಕೆಳಗಿಳಿದಾಗ, ರವಿಶಂಕರರೇ ಹೆಚ್ಚು ಎತ್ತರಕ್ಕೋಗಿ ಇಳಿದುದನ್ನು ವಿವರಿಸಿದರು. ಇದ್ದಕ್ಕಿದ್ದಂತೆ ಸ್ಫೂರ್ತಿಗೊಂಡು ಒಳಕ್ಕೆ ಹೋಗಿ ಅರ್ಧ ಶತಮಾನ ಪ್ರಾಯದ ಕೊಳಲೊಂದನ್ನು ತಂದು ನುಡಿಸತೊಡಗಿದರು. ಆದರೆ ಮಳೆಯ ಶಬ್ದದೊಳಗೆ ಅವರ ಕೊಳಲುವಾದನ ಕರಗಿ ಹೋಗಿತ್ತು. ನಾನು ಕೇಳಲಿ ಬಿಡಲಿ ಅವರಂತೂ ತನ್ಮಯ ವಾಗಿ ಕಣ್ಮುಚ್ಚಿ ತೂಗುತ್ತಿದ್ದರು. ನನಗೆ ಈ ಕತ್ತಲೆಯ ಮಳೆಯಲ್ಲಿ ಸ್ಕೂಟರ್ ಹತ್ತಿ ಶಿವಮೊಗ್ಗಕ್ಕೆ ಹೊರಡುವ ಆತಂಕ ಅಮರಿಕೊಂಡಿತ್ತು. ಆದರೆ ಶಾಮಣ್ಣ ತಮ್ಮ ಗುರುಗಳಾದ ಜಿಎಸ್‌ಎಸ್‌ರ "ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ" ಎಂಬ ಸಾಲನ್ನು ರಕ್ತಗತ ಮಾಡಿಕೊಂಡ ವರಂತೆ ತನ್ಮಯರಾಗಿದ್ದರು.

■ ಬಿ. ಚಂದ್ರೇಗೌಡ


...ಿ ಎಂಬವನ ದಲಿತರು ದೇವಸ್ಥಾನದ ಒಳಗೆ ...ಹೋಗಕೂಡದು ಎಂದು ಎಚ್ಚರಿಸಿದ; ಆದರೂ ಚಿಮ್ಮ ...ವೇಶಿಸಲು ಯತ್ನಿಸಿದಾಗ ತಿವಾರಿ ಅವರ ತಲೆಗೆ ...ಲಿನಿಂದ ಹೊಡೆದು, ನಂತರ ಮೈಮೇಲೆ ಸೀಮೆ ... ಸುರಿದು ಬೆಂಕಿಕೊಟ್ಟ. ದೇವಾಲಯಕ್ಕೆ ಬಂದ ...ಕ್ತರುಗಳು ಚಿಮ್ಮ ಸುಟ್ಟು ಕರಕಲಾಗುವುದನ್ನು ಸುಮ್ಮನೆ ... ನೋಡಿದರು. ಯಾರೂ ಸಂಜಯ ತಿವಾರಿಯನ್ನು ...ಡೆಯಲಾಗಲೀ, ಚಿಮ್ಮ ಅವರನ್ನು ರಕ್ಷಿಸುವುದಕ್ಕಾಗಲೀ ...ಂದಾಗಲಿಲ್ಲ, ಸಂಜಯ ತಿವಾರಿ ಮಹಾಕುಡುಕನಂತೆ! ... ಆದರೆ ಈ ದುರ್ಘಟನೆಯನ್ನು ಚಿಮ್ಮ ಅವರ ಕೊಲೆಯ ... ಘಟನೆ ಹಾಕುವಂತಿಲ್ಲ, ತಣ್ಣೀರು ಮತ್ತು ದನದ ... ಬಟ್ಟು ಬೇರೆ ಏನನ್ನೂ ಕುಡಿಯದ ಸಾತ್ವಿಕ ...ರ್ಮಿಕರುಗಳೂ ಸಹ ಇಂತಹ ಜಾತಿದ್ವೇಷದ ...ತ್ಯೆಗಳನ್ನು ಹೇರಳವಾಗಿ ನಡೆಸುತ್ತಾರೆ; ಮತ್ತು ...ಯಾರೂ ದಲಿತರನ್ನು ಮುಟ್ಟಿಕೊಳ್ಳುವುದಿಲ್ಲ, ತಿನ್ನುವ





ಅನ್ನ, ಕುಡಿಯುವ ನೀರು, ಆಡುವ ಮಾತು, ವಾಸಿಸುವ ಊರು, ಮನೆ, ದೇವಾಲಯ, ಅಷ್ಟೇ ಯಾಕೆ ನಮ್ಮ ದೇಹದ ತಲೆ, ಮುಖ, ಎದೆ, ಕಾಲು ಹಾಗೂ ಮಲಮೂತ್ರ ವಿಸರ್ಜನೆಯ ಅಂಗಾಂಗಗಳ ನಡುವೆ ಕೂಡ ಮೇಲುಕೀಳು, ಮಡಿ ಮೈಲಿಗೆ ಎಂದು ಭೇದ ಕಲ್ಪಿಸುವ ಹಿಂದೂ ಧರ್ಮ ದಲ್ಲಿ ಮಾತ್ರ ಇಂತಹ ಜಾತಿ ಕ್ರೌರ್ಯವನ್ನು ಕಾಣಲು ಸಾಧ್ಯ. ಜಾತಿ ಭೇದ ಮತ್ತು ಲಿಂಗ ತಾರತಮ್ಯಗಳನ್ನು ಧಾರ್ಮಿಕ ಆಚರಣೆಯನ್ನಾಗಿಸಿದ ಮನುಸ್ಮೃತಿಯನ್ನು, ಡಾ|| ಬಿ.ಆರ್. ಅಂಬೇಡ್ಕರ್ ಈ ಕಾರಣಕ್ಕೇನೆ ಸಾರ್ವಜನಿಕವಾಗಿ ಸುಟ್ಟರು. "ಹಿಂದೂವಾಗಿ ಹುಟ್ಟಿದೆ; ಆದರೆ ಹಿಂದೂವಾಗಿ ಸಾಯಲಾರೆ" ಎಂದು ಘೋಷಿಸಿ ಅವರು ಬೌದ್ಧ ಧರ್ಮಕ್ಕೆ ಮತಾಂತರಗೊಂಡದ್ದು ಕೂಡ ಹಿಂದೂ ಧರ್ಮದಲ್ಲೇ ಸೇರಿಹೋಗಿರುವ ಕ್ರೌರ್ಯದ ಕಾರಣದಿಂದಲೇ. ಸವರ್ಣೀಯ ಹಿಂದೂಗಳ ರಕ್ತ ಉಸಿರುಗಳಲ್ಲೇ ಬೆರೆತು ಹೋಗಿರುವ ಜೀವ ಹಿಂಸೆಯ ಪರಂಪರೆ ಈಗಲೂ ಮುಂದುವರಿದಿದೆ. ಉತ್ತರ ಪ್ರದೇಶದ ಗಣೇಶಪುರ ಎಂಬ ಹಳ್ಳಿಯಲ್ಲಿ ಇದೇ ಜೂನ್ ತಿಂಗಳ ಒಂದು ದಿನ, ದಲಿತ ಹುಡುಗಿಯೊಬ್ಬಳ ನೆರಳು ಮೇಲುಜಾತಿಯವನ ಮೇಲೆ ಬಿದ್ದುದಕ್ಕೆ, ಆಕೆಗೆ ಅವನ ಜಾತಿಯ ಹೆಂಗಸರೇ ಹೊಡೆದಿದ್ದರು! ಅದೇ ರಾಜ್ಯದ ಪತ್ತೇರ್‌ವಾಡಾ ಎಂಬಲ್ಲಿ 17ರ ಹರೆಯದ ದಲಿತ ಹುಡುಗಿ ಹೈಸ್ಕೂಲು ಶಿಕ್ಷಣ ಮುಗಿಸಿ ಕಾಲೇಜು ಸೇರಲು ನಿರ್ಧರಿಸಿದಾಗ ಸವರ್ಣೀಯರು ಅವಳಿಗೆ ಬೆಂಕಿಹಚ್ಚಿದ್ದರು. 2002ರಲ್ಲಿ ಹರ್ಯಾಣಾದ ಜಜ್ಜರ್‌ನಲ್ಲಿ ಸತ್ತ ದನದ ಕಳೇಬರ ಸಾಗಿಸುತ್ತಿದ್ದ 5 ಜನ ದಲಿತರನ್ನು ಪೊಲೀಸರ ಸಮ್ಮುಖದಲ್ಲೇ ಕೊಲ್ಲಲಾಗಿತ್ತು. ಮಹಾರಾಷ್ಟ್ರದ ಖೈರ್ಲಾಂಜಿಯಲ್ಲಿ 2006ರಲ್ಲಿ ದಲಿತ ಭೋತ್‌ಮಾಂಗೆ ಕುಟುಂಬದ ಇಬ್ಬರು ಮಹಿಳೆಯರ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಮತ್ತು ಇಡೀ ಕುಟುಂಬದ ಕಗ್ಗೊಲೆ ಹಾಗೂ ಬಿಹಾರದ ದಲಿತರ ಸರಣಿ ಸಾಮೂಹಿಕ ಹತ್ಯೆಯನ್ನು ಸಹ ನಾವು ನೆನಪಿಸಿಕೊಳ್ಳಬೇಕು. ಜಾತಿ ಮತ ಭೇದವಿಲ್ಲದೆ ದೇಶದ ಪ್ರಜೆಗಳಿಗೆ ಸಂವಿಧಾನ ನೀಡಿರುವ ಸಮಾನತೆ ಸ್ವಾತಂತ್ರ್ಯ ಮತ್ತು ಕಾನೂನಿನ ರಕ್ಷಣೆಯ ಭರವಸೆಗಳು ಮುಸ್ಲಿಮರು ಮತ್ತು ದಲಿತರ ಪಾಲಿಗೆ ಈಗ ಒಂದು ಕ್ರೂರ ಅಣಕವಾಗಿದೆ.


■ ಜಿ. ರಾಜಶೇಖರ್

ಕರಾವಳಿ: ಎಮ್ಮೆಲ್ಸಿಗಿರಿಗಾಗಿ ಲಾಟ್‌ಪುಟ್ ಪುಢಾರಿಗಳ ಲಗಾಟಿ!


ಜಯಪ್ರಕಾಶ್ ಹೆಗ್ಡೆ


ಪ್ರತಾಪ್‌ಚಂದ್ರ ಶೆಟ್ಟಿ


ಕೋಟ ಶ್ರೀನಿವಾಸ್ ಪೂಜಾರಿ


ಗೋಪಾಲ ಭಂಡಾರಿ


ತಿಂಗಳೆ ವಿಕ್ರಮಾರ್ಜುನ ಹೆಗ್ಡೆ

ಕರಾವಳಿಯ ಕೋಮು ರಾಜಕಾರಣದ ಅಖಾಡವೀಗ ಎಮ್ಮೆಲ್ಸಿಗಿರಿ ಗುದ್ದಾಟಕ್ಕೆ ಅಣಿಯಾಗುತ್ತಿದೆ. ಮಜಾ ಅಂದರೆ, ಕತ್ತಿ ಹಿರಿದು ಕಾದಾಡಬೇಕಿದ್ದ ಪ್ರಮುಖ ಎದುರಾಳಿ ಪಕ್ಷಗಳಾದ ಕಾಂಗ್ರೆಸ್ ಹಾಗು ಬಿಜೆಪಿ ಭೂಪರು ಫ್ರೆಂಡ್ಲಿ ಫೈಟಿಂಗ್ ಫಜೀತಿಗೆ ಬಿದ್ದು ಒದ್ದಾಡುತ್ತಿದ್ದಾರೆ! ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಲ್ಲಿರುವ ಎರಡು ವಿಧಾನ ಪರಿಷತ್ ಕ್ಷೇತ್ರಗಳಲ್ಲಿ ಒಂದೊಂದು ಹಂಚಿಕೊಳ್ಳಬೇಕಾದ ಅನಿವಾರ್ಯತೆ ಕಾಂಗ್ರೆಸ್-ಬಿಜೆಪಿಗೆ ಎದುರಾಗಿದೆ. ಓಟುದಾರರಾದ ಸ್ಥಳೀಯ ಸಂಸ್ಥೆಗಳ ಸದಸ್ಯರಲ್ಲಿ ಹೆಚ್ಚೂಕಮ್ಮಿ ಅರ್ಧರ್ಧದಷ್ಟು ಎರಡೂ ಪಾರ್ಟಿಗೆ ಹಂಚಿಹೋಗಿರುವುದೇ ಈ ಅನೈತಿಕ ರಾಜಿ ರಾಜಕೀಯಕ್ಕೆ ಕಾರಣ! ಬದ್ಧತೆ ಇಲ್ಲದ ಈ ಎರಡೂ ಪಕ್ಷಗಳು ಸಮಯ ಸಾಧಕತನವೇ ತಮ್ಮ ಸಿದ್ಧಾಂತವೆಂಬುದನ್ನು ಸಾಬೀತುಪಡಿಸಿಕೊಳ್ಳುತ್ತಿವೆ....

ಬರೋಬ್ಬರಿ ಹನ್ನೆರಡು ವರ್ಷಗಳ ಹಿಂದೆ ಈ ಕ್ಷೇತ್ರದಲ್ಲಿ ಪರಿಷತ್ ಎಲೆಕ್ಷನ್ ಎದುರಾದಾಗ ಕಾಂಗ್ರೆಸ್‌ನ ಕರಾವಳಿ ಕಿಂಗ್‌ಗಳಾದ ಆಸ್ಕರ್, ಪೂಜಾರಿ, ಮೊಯ್ಲಿ, ಬೆಳ್ತಂಗಡಿಯ ಗಂಗಾಧರ ಗೌಡ ಮತ್ತು ಪಡುಬಿದ್ರಿಯ ಎಂ.ಎ. ಗಫೂರ್‌ಗೆ ಟಿಕೆಟ್ ಕೊಡುವ ನಿರ್ಧಾರಕ್ಕೆ ಬಂದಿದ್ದರು. ಆದರೆ ಕೊನೇಕ್ಷಣದಲ್ಲಿ ಆಸ್ಕರ್ ಮಾಡಿದ ಜಾದೂನಿಂದಾಗಿ ಆತನ ಧರ್ಮಬಂಧು ಬ್ಲೇಸಿಯಸ್ ಡಿಸೋಜಾ ಮತ್ತು ಮಣೂರು ವಾಸುದೇವ ಕಾಮತ್ ಎಂಬ ಹಣ್ಣು-ಹಣ್ಣು ಮುದುಕರಿಗೆ ಎಮ್ಮೆಲ್ಸಿ ಭಾಗ್ಯ ಒದ್ದುಕೊಂಡು ಬಂದಿತ್ತು, ಬ್ಲೇಸಿ ಅಧಿಕಾರದ ಕೊನೇ ಹಂತದಲ್ಲಿ ಇಹಲೋಕವೇ ತ್ಯಜಿಸಿಬಿಟ್ಟರು. ಆಗ ಬಂದಿದ್ದ ಉಪಚುನಾವಣೆಗೆ ಬಿಜೆಪಿಯ ಕಲ್ಲಡ್ಕ ಕಮಾಂಡ್ ತನ್ನ ಆಸ್ಥಾನ ಸೇವಕನಾದ ಮೋನಪ್ಪ ಭಂಡಾರಿಯನ್ನು ಕುಸ್ತಿಗೆ ಕಳಿಸುವ ಪ್ಲಾನ್ ಮಾಡಿತ್ತು. ಆದರೆ ಕುಂದಾಪುರದ ಬಿಜೆಪಿ ಶಾಸಕನಾಗಿದ್ದ ಹಾಲಾಡಿ ಶ್ರೀನಿವಾಸ್ ಶೆಟ್ಟಿ ಪವಾಡದಿಂದ ಆತನ ಕ್ಷೇತ್ರದ ಕೋಟ ಶ್ರೀನಿವಾಸ್ ಪೂಜಾರಿ ಎಂಬ ಫೋಟೋಗ್ರಾಫರ್‌ಗೆ ಲಕ್ಕು ಕುದುರಿತ್ತು!


ಈಗ ಇದೇ ಗಫೂರ್ ಮತ್ತು ಮೋನಪ್ಪ ಭಂಡಾರಿ ಅವರವರ ಪಕ್ಷದ ಟಿಕೆಟ್‌ಗೆ ಬಡಿದಾಡುತ್ತಿದ್ದಾರೆ. ಆದರೆ ಪಾರ್ಟಿಯ ಟಿಕೆಟ್‌ದಾತರು ಬಿಲ್ಲವ-ಬಂಟ ಜಾತಿ ಸಮೀಕರಣ, ದಕ್ಷಿಣ ಕನ್ನಡ-ಉಡುಪಿ ಪ್ರಾದೇಶಿಕತೆ ಲೆಕ್ಕಾಚಾರ ಹಾಕುತ್ತಿದ್ದಾರೆ. ಇವರಿಗೆ ಟಿಕೆಟ್ ಕೊಟ್ಟರೆ ಕಷ್ಟ ಎಂಬ ನಿರ್ಧಾರಕ್ಕೆ ಹೈಕಮಾಂಡ್ ದಾದಾಗಳು ಬಂದಿದ್ದಾರೆ. ಗೆಲ್ಲುವ ತಾಕತ್ತಿರುವುದು ಒಂದೇ ಒಂದು ಸೀಟಾದರೂ ಎರಡೂ ಪಕ್ಷದಲ್ಲಿ ಟಿಕೆಟ್‌ಗಾಗಿ ದೊಡ್ಡ ನೂಕುನುಗ್ಗಲೇ ಎದ್ದಿದೆ. ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಈ ಹಿಂಬಾಗಿಲ ಸ್ಥಾನಮಾನಕ್ಕೆ ಘಟಾನುಘಟಿಗಳು ಕಟಿಪಿಟಿ ಶುರು ಹಚ್ಚಿಕೊಂಡಿದ್ದಾರೆ. ಅತ್ತ ಬಿಜೆಪಿಯಲ್ಲೂ ಎಮ್ಮೆಲ್ಸಿಗಿರಿ ತೆವಲಿಗರ ಉದ್ದುದ್ದದ ಸಾಲು ಬೆಳೆಯುತ್ತಲೇ ಇದೆ.


ಕಾಂಗ್ರೆಸ್‌ಲ್ಲಿ ಕಚ್ಚಾಟ!


ಕಾಂಗ್ರೆಸ್ ಕ್ಯಾಂಡಿಡೇಟಾಗಲು ಹಾಲಿ ಎಮ್ಮೆಲ್ಸಿ ಪ್ರತಾಪಚಂದ್ರ ಶೆಟ್ಟಿ, ಮಾಜಿ ಸಂಸದ ಜಯಪ್ರಕಾಶ್ ಹೆಗ್ಡೆ, ಮಾಜಿ ಶಾಸಕ ಗೋಪಾಲ ಭಂಡಾರಿ, ಮತ್ತೊಬ್ಬ ಮಾಜಿ ಎಮ್ಮೆಲ್ಸೆ ವಿಜಯಕುಮಾರ್ ಶೆಟ್ಟಿ, ಜನಾರ್ದನ ಪೂಜಾರಿಯ ಶಿಷ್ಯರಾದ ಹರಿಕೃಷ್ಣ ಬಂಟ್ವಾಳ್ ಮತ್ತು ಬೆಳ್ತಂಗಡಿಯ ಹರೀಶ್ ಪೂಜಾರಿ, ಆಸ್ಕರ್‌ರ ನಿಷ್ಠಾವಂತ ಹಿಂಬಾಲಕ ಎಂ.ಎ. ಗಫೂರ್, ಬೆಂಗಳೂರಿನ ಉದ್ಯಮಿ ರವಿಶಂಕರ್ ಶೆಟ್ಟಿ, ಸುಳ್ಯದ ಮುಂಡೋಡಿ ಸಹೋದರರು ಮತ್ತು ಪಿ.ವಿ. ಮೋಹನ್ ತಮ್ಮ ಗಾಡ್‌ಫಾದರ್‌ಗಳಿಗೆ ದುಂಬಾಲು ಬಿದ್ದಿದ್ದಾರೆ. ಪ್ರತಾಪಚಂದ್ರ ಶೆಟ್ಟಿ ತನಗೆ ಎಮ್ಮೆಲ್ಸಿ ಸ್ಥಾನ ಸಾಕು; ಮತ್ತೆ ಆಸೆಯಿಲ್ಲ ಎಂದು ಹೇಳುತ್ತಲೇ ಕುಂದಾಪುರದ ಬ್ಲಾಕ್ ಕಾಂಗ್ರೆಸ್‌ನ ಚೇಲಾಗಳನ್ನು ಛೂಬಿಟ್ಟು ಮತ್ತೊಂದು ಅವಕಾಶಕ್ಕಾಗಿ ಜೊಲ್ಲು ಸುರಿಸುತ್ತಿದ್ದಾರೆ. ಕಳೆದ ಹನ್ನೆರಡು ವರ್ಷ ಕೌನ್ಸಿಲ್‌ನಲ್ಲಿ ಕಾಲಹರಣ ಮಾಡಿರುವ ಈ ಪ್ರತಾಪ್ ಅವಳಿ ಜಿಲ್ಲೆಯಲ್ಲೂ ಎಡಬಿಡಂಗಿಯಂತೆ ಕಂಗೊಳಿಸಿದ್ದಾರೆ. ಕ್ಷೇತ್ರಕ್ಕೆ ಮೂರು ದಮ್ಮಡಿ ಪ್ರಯೋಜನಕ್ಕೂ ಬಾರದ ಈ ಪ್ರತಾಪ್‌ಗೆ ಸಾಯುವಾಗ ಅಧಿಕಾರ ಸ್ಥಾನದಲ್ಲಿದ್ದೇ ಸಾಯುವ ಹಂಬಲ.


ಜಯಪ್ರಕಾಶ್ ಹೆಗ್ಡೆ ಎಮ್ಮೆಲ್ಸಿ ಸ್ಥಾನಕ್ಕೆ ಅಷ್ಟೂ ಅರ್ಹತೆ ಇರುವವರೇನೋ ನಿಜ. ಆದರೆ ಅವರ ಯೋಗ್ಯತೆಗೆ ಈ ಹಿಂಬಾಗಿಲ ಕಿರೀಟ ತೀರಾ ಸಣ್ಣದು. ಕರಾವಳಿ ಕಾಂಗ್ರೆಸ್‌ನ ಒಳರಾಜಕೀಯದಿಂದ ಎಮ್ಮೆಲ್ಸಿ ಟಿಕೆಟ್ ಹಠಕ್ಕೆ ಜೆಪಿ ಬಿದ್ದಿದ್ದಾರೆ. ಪಕ್ಷದೊಳಗಿನ ಹಿತಶತ್ರುಗಳು ತಾನು ಬಿಜೆಪಿ ಪಾಲಾಗುತ್ತೇನೆಂದು ಸುಳ್ಳು ಸುದ್ದಿ ಹಬ್ಬಿಸಿದ್ದು ಜೆಪಿಯನ್ನು ಕೆರಳಿಸಿದೆ. ಸಿಎಂ ಸಿದ್ದು ಸಹ ಜೆಪಿಗೆ ಟಿಕೆಟ್ ಭರವಸೆ ಕೊಟ್ಟಿದ್ದಾರೆಂಬ ಗುಲ್ಲು ಜೋರಾಗಿ ಕಾಂಗ್ರೆಸ್ ಬಿಡಾರದಲ್ಲಿ ಮೊಳಗುತ್ತಿದೆ. ಆದರೆ ಆಸ್ಕರ್ ಫರ್ನಾಂಡಿಸ್‌ಗೆ ಜೆಪಿಗೆ ಅವಕಾಶ ಕೊಡುವ ಮನಸ್ಸು ಒಂಚೂರೂ ಇಲ್ಲ, ಕಾರ್ಕಳದ ಮಾಜಿ ಶಾಸಕ ಗೋಪಾಲ ಭಂಡಾರಿಗೆ ಆಸೆ ಮೂಡಿಸಿರುವುದು ಮೊಯ್ಲಿ ಮಹಾತ್ಮ. ಸಜ್ಜನ-ಜನಾನುರಾಗಿ ಭಂಡಾರಿ ಪರಿಷತ್‌ಗೆ ಹೋದರೆ ಕಾರ್ಕಳ ಕ್ಷೇತ್ರದಲ್ಲಿ ತನ್ನ ಪುತ್ರರತ್ನನನ್ನು ಪ್ರತಿಷ್ಠಾಪಿಸಬಹುದೆಂಬ ಒಳ ಹಿಕಮತ್ತು ಮೊಯ್ಲಿಜೀದು.

ಕಳೆದ ಅಸೆಂಬ್ಲಿ ಎಲೆಕ್ಷನ್ ಹೊತ್ತಲ್ಲಿ ಸುರತ್ಕಲ್ (ಮಂಗಳೂರು ಉತ್ತರ) ಕ್ಷೇತ್ರದ ಟಿಕೆಟ್‌ಗೆ ಮಾಜಿ ಶಾಸಕ ವಿಜಯಕುಮಾರ್ ಶೆಟ್ಟಿ ಹಠ ಹಿಡಿದಿದ್ದರು. ಆದರೆ ಮುಸ್ಲಿಮರಿಗೆ ಚಾನ್ಸ್ ಕೊಡುವ ಸೂತ್ರ ಹಿಡಿದುಕೊಂಡಿದ್ದ ಆಸ್ಕರಣ್ಣ ಏನೇನೋ ಭರವಸೆ ಕೊಟ್ಟು ವಿಜಯಕುಮಾರ್‌ಗೆ ಪೂಸಿ ಹೊಡೆದಿದ್ದರು. ಆದರೆ ಯಾವ ನಿಗಮ ಮಂಡಳಿಯಲ್ಲೂ ವಿಜಯ್‌ಗೆ ಪುನರ್ವಸತಿ ಕಲ್ಪಿಸಲು ಆಸ್ಕರ್‌ರಿಂದ ಆಗಲಿಲ್ಲ, ಈಗ ಎಮ್ಮೆಲ್ಸಿಯಾದರೂ ಮಾಡಿರೆಂದು ವಿಜಯ್ ವರಾತ ಹಚ್ಚಿದ್ದಾರೆ. ಆತನ ಆರೋಗ್ಯವೂ ಸರಿಯಿಲ್ಲದಿರುವುದರಿಂದ ಆಸ್ಕರ್‌ರಲ್ಲಿ ಕರುಣೆ ಮೂಡಿದರೂ ಮೂಡಿಸಬಹುದು! ಕರಾವಳಿ ಕಾಂಗ್ರೆಸ್‌ನ ಹೈಕಮಾಂಡ್ ತ್ರಿವಳಿಗಳಲ್ಲಿ ಒಬ್ಬರಾದ ಜನಾರ್ದನ ಪೂಜಾರಿ ಕೃಪಾಶೀರ್ವಾದವೂ ವಿಜಯ್‌ಗೆ ಇದೆ. ಆದರೆ ಪೂಜಾರಿಗೆ ಸ್ವಜಾತಿ ಶಿಷ್ಯರಾದ ಹರಿ ಬಂಟ್ವಾಳ್ ಮತ್ತು ಹರೀಶ್‌ಕುಮಾರ್‌ರ ಕಿರಿಕಿರಿ ತಡೆಯಲಿಕ್ಕೇ ಆಗುತ್ತಿಲ್ಲ. ಹರಿಕೃಷ್ಣನಂತೂ ಜನ್ಮಜನ್ಮಾಂತರದ ನಿಷ್ಠಾವಂತ ಅನುಯಾಯಿ. ಹಾಗಂತ ಈ ಇಬ್ಬರು ಬಿಲ್ಲವ ಭೂಪರಿಗೆ ಉಳಿದ್ದಾರ ಬೆಂಬಲವೂ ಇಲ್ಲ, ಪೂಜಾರಿಯಲ್ಲೂ ಇವರ ಪರ ವಾದಿಸಲು ಪ್ರಬಲ ಸಾಮಗ್ರಿಯಿಲ್ಲ.









ಆಸ್ಕರ್ ಫರ್ನಾಂಡಿಸ್



ಜನಾರ್ದನ ಪೂಜಾರಿ


ರಾಜಕಾರಣದ ಪಡಸಾಲೆಯಲ್ಲಿ ದೊಡ್ಡವರ ಬ್ರೋಕರಿಕೆ ಮಾಡಿಯೇ ಪ್ರವರ್ಧಮಾನಕ್ಕೆ ಬಂದಾತ ಬಂಟ್ವಾಳ ಮೂಲದ ಉದ್ಯಮಿ ರವಿಶಂಕರ್ ಶೆಟ್ಟಿ. ಈತ ಬೆಂಗಳೂರಲ್ಲಿ 'ಭರ್ಜರಿ' ಕೈಗಾರಿಕೋದ್ಯಮಿ ಎಂದೇ ಸುಪರಿಚಿತ. ಆದರೆ ಕರಾವಳಿಯಲ್ಲಿ ಅಪರಿಚಿತ. ಮಾಜಿ ಮಂತ್ರಿ ಜಯಪ್ರಕಾಶ್ ಹೆಗ್ಡೆಯ ಹೆಂಡತಿಯ ಸಹೋದರನಾದ ರವಿಶಂಕರ್ ಭಾವನ ದಳದ ದಿನಮಾನದಿಂದಲೂ ದೋಖಾ ಮಾಡುತ್ತ ಬಂದಾತ. ದೇವೇಗೌಡರಂಥವರ ಸಖ್ಯ ಹೊಂದಿದ್ದ ರವಿಶಂಕರ್ ತಾನು ಸಿಎಂ ಸಿದ್ದು ಆತ್ಮಾಪ್ತನೆಂದು ಪೋಸು ಕೊಡುತ್ತಾನೆ. ಸಿಎಂ ತನಗೇ ಟಿಕೆಟ್ ಕೊಡುತ್ತಾರೆಂದು ಗೌಜಿಯೂ ಎಬ್ಬಿಸಿದ್ದಾನೆ. ಜೆಪಿಯ ಕ್ರಿಯಾಶೀಲ ವ್ಯಕ್ತಿತ್ವದ ಎದುರು ಕುಬ್ಜರಾಗಿ ಕಾಣಿಸುವ ಕಾಂಗ್ರೆಸ್‌ನ ಕೆಲವು ದಂಡಪಿಂಡಗಳು ರವಿಶಂಕರ್ ಬೆನ್ನಿಗೆ ನಿಂತು ಮಜಾ ನೋಡುತ್ತಿದ್ದಾರೆ. ಕಳೆದ ಅಸೆಂಬ್ಲಿ ಎಲೆಕ್ಷನ್ ಸಂದರ್ಭದಲ್ಲಿ ಈ ರವಿಶಂಕರ್


ವಿಜಯಕುಮಾರ್ ಶೆಟ್ಟಿ


ರುಕ್ಕಯ ಪೂಜಾರಿ


ಮೋನಪ್ಪ ಭಂಡಾರಿ


ಹರಿಕೃಷ್ಣ ಬಂಟ್ವಾಳ್


ಎಂ.ಎ. ಗಫೂರ್

ಳ್ಯದ ಟಿಕೆಟ್ ಕಾಂಗ್ರೆಸ್‌ನಿಂದ ಘೋಷಣೆಯಾಗಿತ್ತು. ಕೊನೆಗಳಿಗೆಯಲ್ಲಿ ಕೈತಪ್ಪಿತ್ತು. ಅದಕ್ಕೆ ಪರಿಹಾರವಾಗಿ ಎಮ್ಮೆಲ್ಸಿ ಮಾಡುವಂತೆ ಕೇಳುತ್ತಿದ್ದಾನೆ.

ಕಳೆದ ಎರಡು ದಶಕದಿಂದ ಸುಳ್ಯದಲ್ಲಿ ಕಾಂಗ್ರೆಸ್ ಗೆದ್ದಿಲ್ಲ. ಹೀಗಾಗಿ ಪರಿಷತ್ ಭಾಗ್ಯವಾದರೂ ಗೆ ಕೊಡಿಯೆಂದು ಸುಳ್ಯದ ಬಹುಸಂಖ್ಯಾತ ಗೌಡರ ಗ್ಯಾಂಗ್ ಒತ್ತಡ ಹಾಕುತ್ತಿದೆ. ಪೂಜಾರಿ, ಮೊಬ್ಲಿ ಮೇಲೆ ಈ ಕಾಂಗ್ರೆಸ್ ನ ಗೌಡರು ಮುಂದೆ ಮಾಡಿರುವುದು ಭರತ್ ಡೋಡಿ ಮತ್ತು ನಿತ್ಯಾನಂದ ಮುಂಡೋಡಿ ಸಹೋದರರನ್ನು. ನಿತ್ಯಾನಂದ ಮುಂಡೋಡಿ ಗ್ರೆಸ್‌ಗೆ ಸ್ಥಳೀಯ ಸಂಸ್ಥೆಗಳಲ್ಲಿ ಮತದಾರರು ಹೆಚ್ಚು ಗಲೂ ಗೆಲ್ಲಲಾಗದವ. ಮತ್ತೆ ಟಿಕೆಟ್ ಈತ ತ್ತಿರುವುದು ವಿಚಿತ್ರವಾದರೂ ಸತ್ಯ. ಹಾಗೊಮ್ಮೆ ನಂದನಿಗೆ ಹುರಿಯಾಳು ಮಾಡಲಾಗದಿದ್ದರೆ ಗೆ ಅಖಾಡಕ್ಕೆ ಇಳಿಸುವಂತೆ ಗೌಡರು ವೆಬ್ಬಿಸಿದ್ದಾರೆ. ಆದರೆ ಈ ಅಣ್ಣ-ತಮ್ಮನಿಗೆ ಗೆಲ್ಲುವ ಗ್ಯತೆಯಿಲ್ಲ. ಬ್ರಹ್ಮಾವರದ ಭುಜಂಗ ಶೆಟ್ಟಿ ಈ ತನಗೇ ಟಿಕೆಟ್ ಗ್ಯಾರಂಟಿ ಅಂತಿದ್ದಾರೆ. ಈತನಿಗೆ ಆಸ್ಕರ್ ಭರವಸೆ ಕೊಟ್ಟಿದ್ದರಂತೆ.

ಆಸ್ಕರಣ್ಣನ ನಿಷ್ಠಾವಂತ ಹಿಂಬಾಲಕ ಎಂ.ಎ. ರ್‌ಗೆ ದುರಾದೃಷ್ಟ ಎಂಬುದು ಬಹುಶಃ ಆತ ಕಾರಣಕ್ಕೆ ಕಾಲಿಟ್ಟ ಗಳಿಗೆಯಲ್ಲೇ ಶುರುವಾಗಿದೆ. ಉಡುಪಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಆಗಿದ್ದ ಈ ರ್ 12 ವರ್ಷದ ಹಿಂದೆಯೇ ಶಾಸಕ ಬೇಕಿತ್ತು. ಆ ನಂತರ ಜಿಪಂ ಸದಸ್ಯನಾದರೂ ಸ್ತೆ ಆತನಿಗೆ ದಕ್ಕಲಿಲ್ಲ. ಕಳೆದ ಬಾರಿ ಕಾಪು ದ ಟಿಕೆಟ್ ಕೈತಪ್ಪಿತು. ಅದಕ್ಕೂ ಹಿಂದಿನ ಬ್ಲಿ ಚುನಾವಣೆಯಲ್ಲೂ ಆತನಿಗೆ ಸಿಗಬೇಕಿದ್ದ ಸಿಗಲಿಲ್ಲ. ನಿಗಮ-ಮಂಡಳಿಯಲ್ಲಿ ಅವಕಾಶ ರುವುದಾಗಿ ಹೇಳಿದ್ದ ಆಸ್ಕರಣ್ಣ ಕೊಡಿಸಿದ್ದು ಮುಗಾರರಿಗೆ ಸೇರಿದ ಮೀನುಗಾರಿಕಾ ಅಭಿವೃದ್ಧಿ ದ ಪೀಠ. ಅದು ನ್ಯಾಯವಾಗಿ ಸೇರಬೇಕಾದುದು ಮುಗಾರರಿಗೆ ಎಂದು ಹೇಳಿ 'ತ್ಯಾಗ' ಮಾಡಿದ ವಂತಿಕೆ-ಬದ್ಧತೆ ಗಫೂರ್‌ದು.

ಆದರೆ ಈ ಬಾರಿಯೂ ಆತ ರೈಲು ಕೊಳ್ಳುವ ಸಾಧ್ಯತೆಯೇ ಹೆಚ್ಚು. ಅಲ್ಪಸಂಖ್ಯಾತ ದಾಯದ ಐವಾನ್ ಡಿಸೋಜಾರ ಬಿಷಪ್- ರ್‌ಗಳ ಲಾಬಿಗೆ ಬೆದರಿದ ಆಸ್ಕರ್ ಎಮ್ಮೆಲ್ಸಿ ದ್ದಾರೆ. ಸುರತ್ಕಲ್ ಮತ್ತು ಉಳ್ಳಾಲದಲ್ಲಿ ಮುಸ್ಲಿಂ ಲ್ಲೆಗಳಿದ್ದಾರೆ. ಕೋಡಿಜಾಲ್ ಇಬ್ರಾಹಿಮ್‌ರನ್ನೂ ಡಾದಲ್ಲಿ ಕೂಡ್ರಿಸಲಾಗಿದೆ. ಈ ಸೂತ್ರ-ಸಮೀಕರಣ ರ್‌ಗೆ ಮಾರಕವಾಗಿದೆ. ಸಂಸದೆ ಶೋಭಾ ದ್ಲಾಜೆ ಕೋಮು ರಾಜಕಾರಣದ ಸ್ಕೆಚ್ ಹಾಕಿಯೇ ದ್ದಾರೆ. ಅಕಸ್ಮಾತ್ ಗಫೂರ್‌ಗೆ ಕಾಂಗ್ರೆಸ್ ಟಿಕೆಟ್ ಟ್ಟರೆ 'ರಾಜಿ' ಇಲ್ಲ ಎಂದಾಕೆ ಸಂದೇಶ ಸಿಸಿದ್ದಾರೆ. ಬಿಜೆಪಿಯ ಎರಡು ಅಭ್ಯರ್ಥಿ ನಿಲ್ಲಿಸಿ ಮು ಕಿತಾಪತಿ ಮೂಲಕ ಕಾಂಗ್ರೆಸ್ ಓಟ್ ಡೆಯುವ ಪ್ಲಾನ್ ಆಕೆಯದು. ಇದೆಲ್ಲಾ ಗಫೂರ್‌ರ ದೃಷ್ಟದ ಸಾಧ್ಯತೆಯನ್ನು ಹೆಚ್ಚು ಮಾಡುತ್ತಿದೆ! ದಂತೂ ಖರೆ. ಕಾಂಗ್ರೆಸ್ ಟಿಕೆಟ್ ಹಂಚಿಕೆಯಲ್ಲಿ ಅಭಿಪ್ರಾಯವೇ ಅಂತಿಮ.

ಜೆಪಿಯಲ್ಲಿ ಬಡಿದಾಟ!

ಕರಾವಳಿ ಬಿಜೆಪಿಯ ವಾಡಿಕೆಯಂತೆ ಎಮ್ಮೆಲ್ಸಿ ಚಡ್ಡಿ ಡಾನ್ ಕಲ್ಲಡ್ಕ ಪ್ರಭಾಕರ್ ಭಟ್ಟನ ಇಷ್ಟದಂತೆ ಹಂಚಿಕೆ ಆಗಲಿದೆ. ಹಾಲಿ ಎಮ್ಮೆಲ್ಸಿ ಕೋಟ ಶ್ರೀನಿವಾಸ್ ಪೂಜಾರಿ ಬಗ್ಗೆ ಈ ಬಾರಿ ಗೆ ಒಲವಿಲ್ಲ. ಹಿಂದಿನ ಬಾರಿ ಮುತುವರ್ಜಿ ವಿಧಾನ ಪರಿಷತ್‌ಗೆ ಪೂಜಾರಿಯನ್ನು ಕಳಿಸಿದ್ದ ಕುಂದಾಪುರದ ಹಾಲಾಡಿ ಶ್ರೀನಿವಾಸ್ ನನ್ನು ಹಣಿಯಲೆಂದೇ ಪೂಜಾರಿಯನ್ನು ಯೂ ಮಾಡಿದ್ದ. ತನಗೆ ಸಿಗಬೇಕಾಗಿದ್ದ ಗಿರಿಯನ್ನು ಸದ್ದಿಲ್ಲದೇ ಲಪಟಾಯಿಸಿದ್ದ ಪೂಜಾರಿ ಶೆಟ್ಟಿಗೆ ಇರುವ ಸಿಟ್ಟು ಇನ್ನೂ ಕಡಿಮೆ ಆಗಿಲ್ಲ. ಎಮ್ಮೆಲ್ಸಿ ಮಾಡಿಸಿದ ಪೂಜಾರಿ ತನ್ನ ಎದುರೇ ಗೂಟದ ಕಾರಲ್ಲಿ ಅಂಡಲೆದ ಆ ಭೀಕರ ದಿನಗಳನ್ನು ಹಾಲಾಡಿ ಶೆಟ್ಟಿ ಇನ್ನೂ ಮರೆತಿಲ್ಲ. ಕೋಟ ಪೂಜಾರಿಯ ರಾಜಕಾರಣಕ್ಕೆ ಸೀದು ಬಿಡುವ ತನಕ ಆತನಿಗೆ ನೆಮ್ಮದಿ ಇಲ್ಲವಾಗಿದೆ.

ಇದು ಕಲ್ಲಡ್ಕ ಭಟ್ಟನಿಗೂ ಖಾತ್ರಿಯಾಗಿದೆ. ತನಗೇ ಮಾಡದ ಉದ್ಧಟ ಹಾಲಾಡಿ ಸೆಡ್ಡು ಹೊಡೆಯುವುದು ಕೂಡ ನಿಜವಾಗಿರುವುದು ಗೊತ್ತಾಗಿರುವ ಕಲ್ಲಡ್ಕ, ಬೆಂಬಲ ಸಿಗುವ ಅಭ್ಯರ್ಥಿಯನ್ನೇ ಕಣಕ್ಕಿಳಿಸುವ ಸಂದಿಗ್ಧಕ್ಕೆ ಸಿಲುಕಿದ್ದಾನೆ. ಕಾಂಗ್ರೆಸ್‌ಗಿಂತ ಕೇವಲ 400 ಮತವಷ್ಟೇ ಬಿಜೆಪಿಗೆ ಹೆಚ್ಚಿದೆ. ಇದರಲ್ಲಿ ಹಾಲಾಡಿ ಬೆಂಬಲಿಗರಾದ ಕುಂದಾಪುರ ಸ್ಥಳೀಯ ಸಂಸ್ಥೆಯ ಸದಸ್ಯರ ಲೆಕ್ಕವೂ ಸೇರಿದೆ. ಹಾಲಾಡಿ ತಿರುಗಿಬಿದ್ದರೆ ಒಂದೂ ಸೀಟು ಗೆಲ್ಲುವುದಕ್ಕೆ ಕಲ್ಲಡ್ಕ ಕಮಾಂಡ್‌ನಿಂದ ಆಗಲಾರದು. ಇದರ ಜತೆಗೆ ಪಕ್ಕಾ ಶೂದ್ರ ಬಿಲ್ಲವರ ಶ್ರೀನಿವಾಸ್ ಪೂಜಾರಿ ಮತ್ತೆ ಬೆಳೆಯುವುದು ಕಲ್ಲಡ್ಕನಿಗೂ ಬೇಡವಾಗಿದೆ. ಕೋಟ ಪೂಜಾರಿಗೆ ಕಡ್ಡಾಯ ನಿವೃತ್ತಿಗೆ ಕಳಿಸಿ ಬಂಟ ಜಾತಿಯವರಿಗೆ ಟಿಕೆಟ್ ಕೊಡಲು ಕಲ್ಲಡ್ಕ ತೀರ್ಮಾನಿಸಿದ್ದಾನೆಂದು ಬಿಜೆಪಿ ಬಿಡಾರದಲ್ಲಿ ಗುಸುಗುಸು ನಡೆದಿದೆ.

ಬಂಟರ ಸಮುದಾಯದಲ್ಲಿ ಎಮ್ಮೆಲ್ಸಿ ಆಗಲು ಐದಾರು ಹಿರಿ-ಮರಿ ಮುಖಂಡರು ಲಾಬಿ ನಡೆಸಿದ್ದಾರೆ. ಇವರಲ್ಲಿ ಉಡುಪಿ ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಉದಯಕುಮಾರ್ ಶೆಟ್ಟಿ, ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಮೋನಪ್ಪ ಭಂಡಾರಿ, ಉಡುಪಿ ಜಿಲ್ಲಾ ಬಿಜೆಪಿ ಅಧ್ಯಕ್ಷ ತಿಂಗಳೆ ವಿಕ್ರಮಾರ್ಜುನ ಹೆಗ್ಡೆ, ಚಡ್ಡಿ ಪರಿವಾರದ ಸುಪ್ರಸಾದ್ ಶೆಟ್ಟಿ, ಗುರ್ಮೆ ಸುರೇಶ್ ಶೆಟ್ಟಿ, ಶೀಲಾ ಶೆಟ್ಟಿ ಜೋರಾಗಿಯೇ ಸದ್ದು ಮಾಡುತ್ತಿದ್ದಾರೆ. ತಿಂಗಳೆ ವಿಕ್ರಮಾರ್ಜುನ ಹೆಗ್ಡೆ ಬಿಜೆಪಿ ಯುವಮೋರ್ಚಾದಲ್ಲಿ ಇದ್ದಾಗಿಂದಲೂ ಕಲ್ಲಡ್ಕನಿಗೆ ಅಚ್ಚುಮೆಚ್ಚು. ಹಣವಂತನಾದ ಈತ ದಿವಂಗತ ಡಾನ್ ಶರದ್ ಶೆಟ್ಟಿಯ ಅಕ್ಕನ ಮಗ. ಈತನಿಗೆ ಟಿಕೆಟ್ ಕೊಟ್ಟರೆ ರೆಬೆಲ್ ಹಾಲಾಡಿ ಜಾತಿ ಪ್ರೀತಿ ಮತ್ತಿತರ ರಹಸ್ಯ ಕಾರಣಗಳಿಗಾಗಿ ಬೆಂಬಲಿಸಲೇ ಬೇಕಾಗುತ್ತದೆಂಬುದು ಕಲ್ಲಡ್ಕ ಗೊತ್ತು ಮಾಡಿಕೊಂಡಿದ್ದಾನೆ. ಹೀಗಾಗಿ ಅಂತಿಮವಾಗಿ ತಿಂಗಳೆ ವಿಕ್ರಮಾರ್ಜುನನಿಗೆ ವಿಧಾನ ಪರಿಷತ್ ಯೋಗ ಖುಲಾಯಿಸುವ ಸಾಧ್ಯತೆ ಗೋಚರಿಸುತ್ತಿದೆ. ಬಿಜೆಪಿಯೊಳಗಿನ ಸಂಘರ್ಷವೇ ಹಾಗಿದೆ!

ಆದರೆ ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಉದಯಕುಮಾರ್ ಶೆಟ್ಟಿ ಹಿಂದೆರಡು ಬಾರಿ ತನಗೆ ಎಂಪಿಗಿರಿ ಟಿಕೆಟ್ ತಪ್ಪಿಸಿದ್ದಕ್ಕೆ ಪರಿಹಾರವಾಗಿ ಈಗ ಎಮ್ಮೆಲ್ಸಿ ಟಿಕೆಟ್ ಕೊಡುವುದು ನ್ಯಾಯವೆಂದು ಗೋಗರೆಯುತ್ತಿದ್ದಾರೆ. ರಾಜ್ಯ ಬಿಜೆಪಿಯ ಮುಂಚೂಣಿ ಮುಂದಾಳು ಸಂತೋಷ್ ಸಹಾಯ ಈತನಿಗಿದೆ. ಉಳಿದ ಬಂಟರ ತುಂಟ-ತುಂಟಿಯರು ತೂಕದವರಲ್ಲ ಎಂಬುದು ಕಲ್ಲಡ್ಕ ಕಮಾಂಡಿಗಷ್ಟೇ ಅಲ್ಲ, ಇಡೀ ಕರಾವಳಿಗೂ ಗೊತ್ತು. ಅತ್ತ ಬಿಲ್ಲವ ಪಾಳಿಯದಲ್ಲಿ ಮಾಜಿ ಶಾಸಕ ರುಕ್ಮಯ ಪೂಜಾರಿ ಮತ್ತು ಪಡುಬಿದ್ರಿಯ ಪ್ರಭಾವಿ 'ಸುವರ್ಣ' ಖಾನ್‌ದಾನ್ ಸೊಸೆ ಗೀತಾಂಜಲಿ ಸುವರ್ಣರ ಹೆಸರು ಚಾಲ್ತಿಗೆ ಬಂದಿವೆ.

ರುಕ್ಮಯ ಪೂಜಾರಿ ಬಿಜೆಪಿಯ ದುರ್ದಿನಗಳಲ್ಲೇ ವಿಟ್ಲ ಕ್ಷೇತ್ರದಿಂದ ಎರಡೆರಡು ಬಾರಿ ಶಾಸಕನಾಗಿದ್ದಾತ. ಸರಳ-ಸಜ್ಜನನಾದ ಈ ಮೊದ್ಮಣಿ ಕಲ್ಲಡ್ಕ ಭಟ್ಟನ ಕಮ್ಯುನಲ್ ಪಾತಕಕ್ಕೆಲ್ಲ ನೆರವಾಗುತ್ತಿರಲಿಲ್ಲ. ಆತ ಹೇಳಿದಂತೆ ಡೊಗ್ಗು ಸಬೂಬು ಹಾಕುತ್ತ ಕಪ್ಪ ಒಪ್ಪಿಸುತ್ತಿರಲಿಲ್ಲ. ಈ ಕಾರಣಕ್ಕೆ ರುಕ್ಮಯರನ್ನು 'ಕಾಫಿರ್' ಎಂದು ಬಿಜೆಪಿಯಲ್ಲಿ ತೊತ್ತಿಳಿದು ಹಾಕಿದ್ದ ಕಲ್ಲಡ್ಕ ಮತ್ತೆ ಆತನಿಗೆ ಎಮ್ಮೆಲ್ಸಿ ಮಾಡುವುದು ಎಲ್ಲಾದರೂ ಉಂಟಾ? ಇಂಥ ಸ್ವತಂತ್ರ ವ್ಯಕ್ತಿತ್ವದರನ್ನೆಂದೂ ಕಲ್ಲಡ್ಕ ಮೇಲೇಳಲು ಬಿಡಲಾರ. ಆತನಿಗೆ ಗುಲಾಮರು ಬೇಕಷ್ಟೇ. ಹುಸಿ ಲವ್ ಜೆಹಾದ್‌ದ ಹುಯಿಲೆಬ್ಬಿಸಿ ಕೋಮು ಕಿತಾಪತಿ ಮಾಡುವ ಶ್ರೀಕರಪ್ರಭುಗೂ ಎಮ್ಮೆಲ್ಸಿ ಆಗುವ ಹುಕ್ಕಿ ಬಂದಿದೆ. ಕೋಬ್ರಾ ಪೋಸ್ಟ್‌ನ ಸ್ಟಿಂಗ್ ಆಪರೇಷನ್‌ನಲ್ಲಿ ಸಿಕ್ಕಿಬಿದ್ದಿರುವ ಈ ಪಾಪಿ ಪ್ರಭುಗೆ ಈ ಬಾರಿ ಚಾನ್ಸ್ ಇಲ್ಲವೆಂದು ಕಲ್ಲಡ್ಕ ಕೈ ತಿರುವಿದ್ದಾನೆ. ಬಿಲ್ಲವರಿಗೆ ಟಿಕೆಟ್ ಕೊಡಲೇಬೇಕಾದ ಸಂದರ್ಭ ಬಂದರೆ ಕಲ್ಲಡ್ಕನ ಆಯ್ಕೆ ಆ ಸಮುದಾಯದಲ್ಲಿ ಪ್ರಭಾವಿಯಾಗಿದ್ದ ದಿವಂಗತ ದಾಮೋದರ ಸುವರ್ಣರ ಸೊಸೆ ಗೀತಾಂಜಲಿ. ಈಕೆ ಹಿಂದೆ ಕಾಪು ಕ್ಷೇತ್ರದಿಂದ ಟಿಕೆಟ್‌ಗೆ ಪ್ರಯತ್ನ ನಡೆಸಿದ 'ಸೀನಿಯರ್'!

ಬೆಳ್ತಂಗಡಿಯ ಕೊಂಕಣಿ ಕುಳ ಪ್ರತಾಪಸಿಂಹ ನಾಯಕ್ ಎಮ್ಮೆಲ್ಸಿಗಿರಿಗೆ ಸ್ಥಳೀಯಸಂಸ್ಥೆಗಳಿಂದ ಸ್ಪರ್ಧಿಸಲು ಬಿಜೆಯಲ್ಲಿ ತನ್ನಷ್ಟು ಯೋಗ್ಯತೆಯಿರುವಾತ ಇನ್ನಾರೂ ಇಲ್ಲವೆಂಬ ವಾದ ಕಲ್ಲಡ್ಕ ಕಮಾಂಡ್ ಮುಂದೆ ಮಂಡಿಯೂರಿ ಮಂಡಿಸುತ್ತ ಒಂದು ವರ್ಷವೇ ಕಳೆದಿದ್ದಾನೆಂದು ಹೇಳಿ ಚಡ್ಡಿಗಳೇ ನಗುತ್ತಿದ್ದಾರೆ. ಸದ್ಯದ ಸ್ಥಿತಿ-ಗತಿ ನೋಡಿದರೆ ಕಾಂಗ್ರೆಸ್‌ನಿಂದ ಮತ್ತದೇ ಹಳಸಲು ಮುಖ ಪ್ರತಾಪಚಂದ್ರ ಶೆಟ್ಟಿ ಹಾಗು ಬಿಜೆಪಿಯಿಂದ ಪಳಗಿದ ಭಜರಂಗಿ ವಿಕ್ರಮಾರ್ಜುನ ಹೆಗ್ಡೆ ವಿಧಾನ ಪರಿಷತ್‌ಗೆ ಹೋಗುವ ದೌರ್ಭಾಗ್ಯದ ಸೂಚನೆ ಗೋಚರಿಸುತ್ತದೆ.


■ ನಹುಷ

ಶಿಕಾರಿಪುರದ ರಕ್ಕಸ ಪೊಲೀಸ್

ಕಳೆದ ತಿಂಗಳು ಶಿಕಾರಿಪುರದ ಕಡೆಯ ಮಹಿಳೆಯೊಬ್ಬರು ಗೂಂಡಾಗಳ ಕಿರುಕುಳ ತಾಳಲಾರದೆ ಸರ್ಕಾರಕ್ಕೆ ದಯಾಮರಣ ಕೇಳಿದ್ದರು. ಸಾಲುಗಟ್ಟಿದ ರೈತರ ಆತ್ಮಹತ್ಯೆ ಸುದ್ದಿಯ ನಡುವೆ ಆ ರೈತ ಮಹಿಳೆಯ ರೋದನ ಯಾರಿಗೂ ಕೇಳಲಿಲ್ಲ.

ಆಕೆಯ ದಯಾಮರಣ ಭಿಕ್ಷೆಗೆ ಕಾರಣ ಕೂಡ ಭೂಮಿ ಸಂಬಂಧವಾದದ್ದು. ಶಿಕಾರಿಪುರದ ಗಾಮ ಗ್ರಾಮದ ಸರ್ವೆ ನಂ. 153 ರಲ್ಲಿ 2 ಎಕರೆ ಜಮೀನು ಶಿರಾಳಕೊಪ್ಪ ಗುರುಶಾಂತಪ್ಪ ಇವರ ಒಪ್ಪಿಗೆಯಿಂದ ಗೇಣಿ ರಸೀದಿ ಪರಿಶೀಲನೆ ನಂತರ, ಭೂನ್ಯಾಯಮಂಡಳಿ ಸಾಗುವಳಿಗಾಗಿ ಪರವಾನಗಿ ಕೊಟ್ಟಿತ್ತು. 35 ವರ್ಷದಿಂದ ಸಾಗುವಳಿ ಮಾಡಿಕೊಂಡು ಬಂದ ಗಿರಿಯಪ್ಪ, ಕಳೆದ ವರ್ಷ ಕಾಲವಾದರು. ಅವರ ಪತ್ನಿಯಾದ ಗೌರಮ್ಮ ಸಾಗುವಳಿ ಮುಂದುವರಿಸಿದರು.

ಸಮಯ ಕಾಯುತ್ತಿದ್ದ ಕೆಲವರು "ನಾವು ಗುರುಶಾಂತಪ್ಪನ ಮೊಮ್ಮಕ್ಕಳು. ಭೂಮಿ ನಮಗೆ ಸೇರಿದ್ದು" ಎಂದು ಕಿರುಕುಳ ಕೊಡಲು ಆರಂಭಿಸಿದರು. ಕಡೆಗೆ ಗೌರಮ್ಮನನ್ನು ಜಮೀನಿನಿಂದಲೇ ಓಡಿಸುವ ಪಣ ತೊಟ್ಟರು. ಅವರ ಪೈಕಿ ಸಂಗಮೇಶ, ಸಿದ್ದು ಮೂಲೆಮನೆ, ರಂಗಪ್ಪ ಗಿರೀಶ್ ಕುರುಬರ್ ಇತ್ಯಾದಿ ಎಂಟು ಜನರ ಗುಂಪು ದೊಣ್ಣೆ ಮಚ್ಚಿನೊಡನೆ ದಾಳಿ ಮಾಡಿ ಗೌರಮ್ಮನ ಜಮೀನಿನಲ್ಲಿ ಕೂಲಿ ಮಾಡುತ್ತಿದ್ದವರನ್ನು ಓಡಿಸಿದರು. ನಂತರ ಗೌರಮ್ಮನ ಮೇಲೂ ಹಲ್ಲೆ ಮಾಡಿದರು. ಕಂಗಾಲಾದ ಗೌರಮ್ಮ ಪೊಲೀಸರಿಗೆ ದೂರು ನೀಡಿದರು. ಪೊಲೀಸರು ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಬದಲಿಗೆ ಒಕ್ಕಲೆಬ್ಬಿಸುವ ಗೂಂಡಾಪಡೆ ಕಿರುಕುಳ ಆರಂಭಿಸಿತು. ತನಗೆ ಯಾರೂ ದಿಕ್ಕಿಲ್ಲವೆಂದು ತೀರ್ಮಾನಿಸಿದ ಗೌರಮ್ಮ ಸರ್ಕಾರಕ್ಕೆ ದಯಾಮರಣ ಭಿಕ್ಷೆ ಕೇಳಿದರು.



ಈ ಸುದ್ದಿ ತಿಳಿದ ಗೌರಮ್ಮನ ಸಂಬಂಧಿ ಮೈದೊಳಲ ವಿಶ್ವನಾಥ್ ಎಂಬ ಯುವಕ ಠಾಣೆಗೆ ವಿಚಾರಿಸಲೆಂದು ಹೋದರು. ಪೇದೆಯೊಬ್ಬ ಅವರನ್ನು ಬಾಗಿಲಲ್ಲೇ ತಡೆದು "ಡಿವೈಎಸ್‌ಪಿ ಇಲ್ಲ, ಪಿಎಸ್‌ಐ ನೋಡಿ" ಎಂದು ಆಜ್ಞಾಪಿಸಿದ. ಅದಕ್ಕೆ ವಿಶ್ವನಾಥ್ "ಸಬ್‌ಇನ್ಸ್‌ಪೆಕ್ಟರಿಗೆ ಗೌರಮ್ಮ ಕೊಟ್ಟ ದೂರಿಗೆ ಪ್ರತಿಯಾಗಿ ಯಾವ ಉತ್ತರವೂ ಸಿಕ್ಕಿಲ್ಲ; ಆದ್ದರಿಂದ ಡಿವೈಎಸ್‌ಪಿ ನೋಡುತ್ತೇನೆ" ಎಂದು ಇನ್ಸ್‌ಪೆಕ್ಟರ್ ಕಡೆ ಕೈ ತೋರಿದ. ಕೂಡಲೆ ಎದ್ದು ಬಂದ ಇನ್ಸ್‌ಪೆಕ್ಟರ್ ಚಂದ್ರಶೇಖರ್ ವಿಶ್ವನಾಥ್ ಕೆನ್ನೆಗೆ ಎರಡು ಹೊಡೆದ. ಆಘಾತಗೊಂಡ ವಿಶ್ವನಾಥ್ "ಸಾರ್ ನೀವು ತಪ್ಪು ಮಾಡ್ತಾಯಿದ್ದಿರಿ. ನಾನೇನು ತಪ್ಪು ಮಾಡಿದೆ ಅಂತ ಹೊಡಿದಿರಿ" ಎಂದ. ಈ ಪ್ರಶ್ನೆಗೆ ಕೆರಳಿದ ಇನ್ಸ್‌ಪೆಕ್ಟರ್ ಮತ್ತು ಹೊಡೆದ. ಇದನ್ನು ನೋಡಿದ ಪಿಸಿಗಳು ಎಲ್ಲರೂ ಸೇರಿ ಹಲ್ಲೆ ನಡೆಸಿದರು.

ಹಠಾತ್ತನೆ ಕಾರಣವಿಲ್ಲದೆ ನಡೆದ ಈ ಹಲ್ಲೆ ಖಂಡಿಸಿ ವಿಶ್ವನಾಥ್ ಠಾಣೆ ಎದುರೇ ಧರಣಿ ಕೂರುತ್ತೇನೆಂದು ಹೇಳಿ ಹಾಗೇ ಮಾಡಿದರು. ಆಗ ಪೊಲೀಸರು ವಿಶ್ವನಾಥ್ ಜೊತೆ ಹೋಗಿದ್ದವರ ಮೇಲೂ ಹಲ್ಲೆ ಮಾಡಿದರು. ಜೊತೆಗೆ ಧರಣಿ ಕುಳಿತವನನ್ನು ಎತ್ತಿ ಎಳೆದಾಡಿ ಮತ್ತೆ ಠಾಣೆಯೊಳಕ್ಕೆ ತೆಗೆದುಕೊಂಡು ಹೋಗಿ ರುಬ್ಬಿದರು. ಬಿಡಿಸಿಕೊಂಡ ವಿಶ್ವನಾಥ್ "ನಾನು ಎಸ್ಪಿಗೇ ದೂರು ಕೊಡುತ್ತೇನೆ" ಎಂದು ತನ್ನ ವ್ಯಾನಿನ ಕಡೆ ಹೊರಟಾಗ ಮತ್ತೆ ಆತನನ್ನು ಎಳೆದುಕೊಂಡು ಹೋದ ಪೊಲೀಸರು ಅಂಗಿ ಹರಿದು, ಜೇಬಿನಲ್ಲಿದ್ದ 5 ಸಾವಿರ ತೆಗೆದುಕೊಂಡು, ಕತ್ತಿನಲ್ಲಿದ್ದ ಚಿನ್ನದ ಸರ ಕಿತ್ತುಕೊಂಡು ಮೊಬೈಲ್‌ನ್ನು ಕಸಿದುಕೊಂಡರು. ಮತ್ತೆ ರಾತ್ರಿ ಎಂಟು ಗಂಟೆಯವರೆಗೆ ನೆಲದ ಮೇಲೆ ಕೂರಿಸಿ ಮನಸೋ ಇಚ್ಛೆ ಬೈದರು.

ವಿಶ್ವನಾಥ್ ಮೈದೊಳಲು ಪ್ರಾಂತ್ಯದ ಸಾಮಾಜಿಕ ಕಾರ್ಯಕರ್ತ. ಕಡಿದಾಳು ಶಾಮಣ್ಣನವರ ಜೊತೆ ಸಕ್ರಿಯವಾಗಿ ತೊಡಗಿಕೊಂಡವರು. ಸಭೆ ಸಮಾರಂಭ ಏರ್ಪಡಿಸುವುದು, ದುರ್ಬಲರಿಗೆ ವಿಧವಾವೇತನ, ವೃದ್ಧಾಪ್ಯ ವೇತನ ಕೊಡಿಸುವುದು, ಇತ್ಯಾದಿ ಕೆಲಸಗಳಲ್ಲಿ ತೊಡಗಿದ್ದ ಉತ್ಸಾಹಿ ಯುವಕ. ಆದರೀಗ ಪೊಲೀಸರ ರಾಕ್ಷಸೀ ವರ್ತನೆಗೆ ದಂಗುಬಡಿದು ಹೋಗಿದ್ದ, ಫೋನ್ ಮಾಡಿ ಕಡಿದಾಳು ಶಾಮಣ್ಣನವರಿಗೆ ತಿಳಿಸಿ, ಅವರಾದರೂ ಎಸ್ಪಿ ಚೆನ್ನಣ್ಣನವರನ್ನು ಸಂಪರ್ಕಿಸಿ ತಮ್ಮನ್ನು ಬಿಡುಗಡೆಗೊಳಿಸುತ್ತಾರೆಂದು ಯೋಚಿಸಿದರೆ ಪಿಎಸ್‌ಐ ಮೊಬೈಲ್ ಕಿತ್ತುಕೊಂಡಿದ್ದ. ನಗರದ ಮಹದೇವಪ್ಪ, ರಾಘವೇಂದ್ರ ಇವರೆಲ್ಲರ ಪರಿಚಯವಿದ್ದರೂ ದಿಕ್ಕಿಲ್ಲದ ಕೈದಿಯಂತೆ ನೆಲದ ಮೇಲೆ ಕುಳಿತು ಪೊಲೀಸರ ಮೂದಲಿಕೆ ಮಾತು ಕೇಳುವ ಸ್ಥಿತಿ ಬಂದೊದಗಿತ್ತು.

ಎಲ್ಲ ಕತೆ ಮುಗಿದಮೇಲೆ ಸರ್ಕಲ್ ಇನ್ಸ್‌ಪೆಕ್ಟರ್ ಬಂದು "ಏನೊ ಅಚಾತುರ್ಯ ನಡೆದುಹೋಯ್ತು, ಬೇರೆ ಅಂಗಿ ತರಿಸುತ್ತೇನೆ. ಹಾಕಿಕೊಂಡು ಹೋಗು. ಇದನ್ನು ಇಲ್ಲಿಗೆ ಮರೆತುಬಿಡು" ಎಂದು ರಾಜೀ ಮಾತನಾಡತೊಡಗಿದರು. ಇದಕ್ಕೆ ಜಗ್ಗದ ವಿಶ್ವನಾಥ್ "ಇಲ್ಲ ಸಾರ್, ನ್ಯಾಯವಾಗಿ ಸಾಗುವಳಿ ಮಾಡುತ್ತಿರುವ ರೈತ ಮಹಿಳೆಗೆ ರಕ್ಷಣೆ ಕೊಟ್ಟಿಲ್ಲ, ನ್ಯಾಯ ಕೇಳಲು ಬಂದ ನನ್ನ ಮೇಲೆ ಹಲ್ಲೆ ಮಾಡಿ ಹಣ, ಮೊಬೈಲ್, ಚಿನ್ನದ ಸರ ಕಿತ್ತುಕೊಂಡು ನೆಲದ ಮೇಲೆ ಕೂರಿಸಿದ್ದಾರೆ. ನಾನು ಮಾಧ್ಯಮದ ಎದುರು ಮತ್ತು ಜಿಲ್ಲಾ ಎಸ್ಪಿ ಸಾಹೇಬರ ಬಳಿಗೆ ಹೋಗುತ್ತೇನೆ" ಎಂದು ಹಠ ಹಿಡಿದಿದ್ದಾನೆ.

ಘಟನೆ ಯಾವ್ಯಾವುದೋ ರೂಪ ಪಡೆದುಕೊಳ್ಳುವುದನ್ನು ಅರಿತ ಸರ್ಕಲ್ ಇನ್ಸ್‌ಪೆಕ್ಟರ್ ಬಳಿ ಹಾಳೆ ಕೊಟ್ಟು, ಹೇಳಿಕೆ ಬರೆಸಿಕೊಂಡು, "ಘಟನೆಯ ವಿವರವನ್ನು ಎಲ್ಲೂ ಬಾಯಿಬಿಡಬೇಡಿ. ಹೊಸ ಶರ್ಟ್ ತೆಗೆದುಕೊಡುತ್ತೇನೆ" ಎಂದು ತಿಪ್ಪೆ ಸಾರಿಸಿ ರಾತ್ರಿ ಬಿಡುಗಡೆ ಮಾಡಿದ್ದಾರೆ. ವಿಶ್ವನಾಥ್ ರಾತ್ರಿ 11 ಗಂಟೆಗೆ ಬಂದು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಅಡ್ಮಿಟ್ ಆಗಿದ್ದಾರೆ. ಹಿಂದೊಮ್ಮೆ ಸುಬ್ಬಯ್ಯ ಆಸ್ಪತ್ರೆಯಲ್ಲಿ ಸುಳ್ಳುಸುಳ್ಳೆ ಹೊಟ್ಟೆಯಲ್ಲಿ ಹುಣ್ಣಿದೆಯೆಂದು ಆಪರೇಷನ್ ಮಾಡಿ ಕಳಿಸಿದ್ದರು. ಮರು ಪರೀಕ್ಷೆಗೆ ಒಳಪಟ್ಟಾಗ ಆತನಿಗೆ ಆಪರೇಷನ್ ಮಾಡುವಂತಹ ಯಾವ ಕಾಯಿಲೆಯೂ ಇರಲಿಲ್ಲ; ಹಣ ವಸೂಲಿಗೆ ಆಪರೇಷನ್ ಮಾಡಿದ್ದರು ಎಂದು ಗೊತ್ತಾಗಿತ್ತು. ಈಗಲೂ ಕೂಡ ಯಾವ ತಪ್ಪನ್ನೂ ಮಾಡದ ವಿಶ್ವನಾಥ್ ಪೊಲೀಸರ ಹಲ್ಲೆಯಿಂದ ಜರ್ಜರಿತನಾಗಿದ್ದಾನೆ.


ಅತ್ತ ಗೌರಮ್ಮನಿಗೂ ರಕ್ಷಣೆ ಕೊಡದೆ, ಇತ್ತ ನ್ಯಾಯ ಕೇಳಲು ಹೋದ ವಿಶ್ವನಾಥನಿಗೂ ಬಾರಿಸಿ ಕಳುಹಿಸಿರುವ ಪಿಎಸ್‌ಐ ಚಂದ್ರಶೇಖರ್ ಒಕ್ಕಲೆಬ್ಬಿಸುವ ಗೂಂಡಾಗಳ ಬಳಿ ಸಕತ್ತು ಅಮೇಧ್ಯ ತಿಂದಿರುವುದಕ್ಕೆ ಬೇರೆ ಸಾಕ್ಷಿಯೇ ಬೇಡ. ಏಕೆಂದರೆ ವಿಶ್ವನಾಥ್‌ಗೆ ಹೊಡೆತ ಬಿದ್ದ ಮೇಲೆ, ಗೌರಮ್ಮನಿಗೆ ಕಿರುಕುಳ ಕೊಡುವವರು "ಹೆಂಗೆ ಗೂಸಾ ಕೊಡಿಸಿದ್ದೀವಿ" ಎಂದು ಶಿಕಾರಿಪುರದಲ್ಲಿ ಹೇಳಿಕೊಂಡು ತಿರುಗುತ್ತಿದ್ದಾರೆ. ಶಿಕಾರಿಪುರದ ಗ್ರಾಮಾಂತರ ಠಾಣೆಯಲ್ಲಿ ಕೆಲಸ ಮಾಡುತ್ತಿರುವ ಚಂದ್ರಶೇಖರ್ ಹೋದಲ್ಲೆಲ್ಲಾ ಇಂತಹ ಕೃತ್ಯವೆಸಗಿ ಶುದ್ಧ ಗೂಂಡಾ ಪೊಲೀಸನಾಗಿದ್ದಾನೆ. ಪ್ರಕರಣದ ನಂತರ ಆತನ ಕಾರ್ಯಾಚರಣೆ ಯಾವ ರೂಪ ಪಡೆದಿದೆ ಯೆಂದರೆ ವಿಶ್ವನಾಥನ ಮೇಲೆ ಸುಳ್ಳು ಕೇಸು ದಾಖಲಿಸ ತೊಡಗಿದ್ದಾನೆ. ಇದೇ ಹೊತ್ತಿಗೆ ಗೌರಮ್ಮನಿಗೆ ಪುನಃ ಬೆದರಿಕೆ ಆರಂಭವಾಗಿದೆ. ಇದೊಂದು ದೊಡ್ಡ ಪ್ರಕರಣವಾಗಿ ರಾಜ್ಯ ರೈತಸಂಘವೆಲ್ಲಾ ಸಮಸ್ಯೆ ಕೈಗೆತ್ತಿಕೊಳ್ಳುವ ಮುನ್ನ ದಕ್ಷ ಪೊಲೀಸ್ ಅಧಿಕಾರಿಯಾದ ರವಿ ಚೆನ್ನಣ್ಣನವರ್ ಚಂದ್ರಶೇಖರ್ ನಂಟ ತಿಕ್ಕಲನಿಗೆ ಬುದ್ಧಿ ಕಲಿಸಬೇಕಿದೆ.


■ ವರದಿಗಾರ


ಮೈಸೂರು: ಸುಧಾ ಆಂಟಿಯ ಅಕ್ರಮ ಸಂಬಂಧಕ್ಕೆ ಗಂಡನೇ ಬಲಿ


ಅನೈತಿಕ ಸಂಬಂಧದಿಂದ ಶುರುವಾಗುವ ಪ್ರತಿಯೊಂದು ಸ್ಟೋರಿಯೂ ದುರಂತದಲ್ಲೇ ಅಂತ್ಯಕಾಣುತ್ತದೆ. ಕೆಲ ದಿನಗಳ ಹಿಂದಷ್ಟೇ ಬೆಳಗಾವಿಯ ಯುವಕನೊಬ್ಬ ಇಂತಹ ಅಕ್ರಮ ಸಂಬಂಧವಿರಿಸಿಕೊಂಡಿದ್ದ ಮಧ್ಯವಯಸ್ಕ ಹೆಂಗಸನ್ನು ಕೊಲೆ ಮಾಡಿದ್ದಲ್ಲದೇ ಆಕೆಯ ಇಬ್ಬರು ಮುಗ್ಧ ಮಕ್ಕಳನ್ನು ನೀರಿನ ತೊಟ್ಟಿಯಲ್ಲಿ ಮುಳುಗಿಸಿ ಸಾಯಿಸಿದ ಆಘಾತವನ್ನು ಅರಗಿಸಿಕೊಳ್ಳುವ ಮೊದಲೇ ಮತ್ತೊಂದು ಅಂತದೇ ಪ್ರಕರಣ ಮೈಸೂರಿನಲ್ಲಿ ಬೆಳಕಿಗೆ ಬಂದಿದೆ. ಆದರೆ ಇಲ್ಲಿ, ಅಕ್ರಮ ಸಂಬಂಧಕ್ಕೆ ಅಡ್ಡಿಯಾಗುತ್ತಾನೆ ಅಂತ ಹೆಂಡತಿ, ಪ್ರಿಯಕರನೊಟ್ಟಿಗೆ ಸೇರಿ ಗಂಡನನ್ನೇ ಕೊಲೆ ಮಾಡಿದ್ದಾಳೆ. ದುರಂತವೆಂದರೆ ಅಪ್ಪನನ್ನು ಕೊಲ್ಲಲು ಇಲ್ಲಿ ಮಗಳೇ ಅಮ್ಮನಿಗೆ ಸಾಥ್ ನೀಡಿದ್ದಾಳೆ!

ಜುಲೈ 27ರಂದು ಮೈಸೂರು-ತಿ.ನರಸೀಪುರ ರಸ್ತೆಯ


ಅಶೋಕ್


ಮಗಳು ಪೂಜಾಳೊಂದಿಗೆ ಸುಧಾ


ಮೋಹನ್


ನಾಗೇಂದ್ರಸ್ವಾಮಿ

ಚಿಕ್ಕಳ್ಳಿ ಬಳಿ ಆಕ್ಸಿಡೆಂಟ್ ಒಂದು ನಡೆದಿತ್ತು, ಲಾರಿಯೊಂದು ಬೈಕ್‌ಗೆ ಗುದ್ದಿದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿದ್ದ. ಸಿದ್ಧಾರ್ಥ ನಗರ ಸಂಚಾರಿ ಪೊಲೀಸರು ಕೂಡಾ ಅದನ್ನೊಂದು ಆಕ್ಸಿಡೆಂಟ್ ಪ್ರಕರಣವೆಂದೇ ದಾಖಲಿಸಿಕೊಂಡು ಕೇಸಿಗೆ ಷರಾ ಬರೆದಿದ್ದರು. ಆದರೆ ಆಕ್ಸಿಡೆಂಟ್ ಆಗಿ ಸತ್ತ ವ್ಯಕ್ತಿಯ ತಮ್ಮನಿಗೆ ಎಂತದ್ದೋ ಅನುಮಾನವಿತ್ತು, ಅದು ಅಕಸ್ಮತ್ತಾದ ಅಪಘಾತವಲ್ಲ, ವ್ಯವಸ್ಥಿತ ಕೊಲೆ ಎಂಬ ಸಂಶಯವಿತ್ತು, ಎಸ್‌ಐ ರವೀಂದ್ರರನ್ನು ಸಂಪರ್ಕಿಸಿದ ಆತ ಇದು ಅಪಘಾತವಲ್ಲ, ಕೊಲೆ ಎಂಬ ಅನುಮಾನವಿದೆ ದಯವಿಟ್ಟು ತನಿಖೆ ಮಾಡಿ ಅಂತ ದುಂಬಾಲು ಬಿದ್ದಿದ್ದ. ಅದೇ ವೇಳೆಗೆ ಒಂದಷ್ಟು ಅನುಮಾನಾಸ್ಪದ ಪುರಾವೆಗಳು ಬಂದು ತಲುಪಿದ್ದರಿಂದ ಡಿಸಿಪಿ ಡಾ.ಹೆಚ್.ಟಿ.ಶೇಖರ್ ಕೂಡಾ ಕೊಲೆಯ ಆ್ಯಂಗಲ್‌ನಲ್ಲೇ ಈ ಪ್ರಕರಣವನ್ನು ತನಿಖೆ ನಡೆಸುವಂತೆ ಎಸ್‌ಐ ರವೀಂದ್ರರಿಗೆ ಸೂಚನೆ ನೀಡಿದ್ದರು. ಆಗಲೇ ನೋಡಿ ಬಯಲಾದದ್ದು ಅನೈತಿಕ ಸಂಬಂಧದ ಕರಾಳ ಸತ್ಯ!

ಸುಧಾ ಆಂಟಿ ಬ್ಲೂಫಿಲಂ

ಮೂಲತಃ ತಿ.ನರಸೀಪುರ ನಿವಾಸಿಯಾದ 55 ವರ್ಷದ ಎಂ.ಎಸ್.ನಾಗೇಂದ್ರಸ್ವಾಮಿ ಗೌರವಸ್ಥ, 21 ವರ್ಷದ ಹಿಂದೆ ಸುಧಾ ಎಂಬಾಕೆಯ ಜೊತೆ ಈತನ ಮದುವೆಯಾಗಿತ್ತು. ಈ ದಂಪತಿಗೆ ಪೂಜಾ ಹಾಗೂ ಹೇಮಂತ್ ಎಂಬ ಇಬ್ಬರು ಮಕ್ಕಳೂ ಇದ್ದಾರೆ. ತಿ.ನರಸೀಪುರದ ವಿದ್ಯೋದಯ ಕಾಲೇಜು ವೃತ್ತದಲ್ಲಿ ಗಣೇಶ ಪ್ರಿಂಟಿಂಗ್ ಹಾಗೂ ಸ್ಟೇಷನರಿ ಅಂಗಡಿ ನಡೆಸುತ್ತಿದ್ದ ನಾಗೇಂದ್ರಸ್ವಾಮಿ ಪತ್ರ ಬರಹಗಾರ ವೃತ್ತಿಯನ್ನು ಮಾಡುತ್ತಿದ್ದ. ಹಾಗಾಗಿ ಜೆರಾಕ್ಸ್ ಅಂಗಡಿಯನ್ನು ಹೆಂಡತಿ ಸುಧಾ ಕೂಡ ನೋಡಿಕೊಳ್ಳುತ್ತಿದ್ದಳು. ಅಂತಹ ತುಂಬಿದ ಸಂಸಾರಕ್ಕೆ ಘಾತಕ ಎಂಟ್ರಿ ಕೊಟ್ಟವನೇ ಎಚ್.ಎಸ್.ಮೋಹನಕುಮಾರ ಅಲಿಯಾಸ್ ವಿನಯ್ ಅಲಿಯಾಸ್ ಕೊತ್ತಿ ಎಂಬ 32ರ ಹರೆಯದ ಕಾಮುಕ. ಮೈಸೂರಿನ ನೇತಾಜಿ ನಗರದ ಎಚ್.ಎಸ್.ನಂಜಪ್ಪ ಎಂಬ ಭತ್ತದ ವ್ಯಾಪಾರಿಯ ಮಗ ಈತ.

ವ್ಯಾಪಾರದ ನಿಮಿತ್ತ ಮೋಹನ್‌ಕುಮಾರ್ ಆಗಾಗ್ಗೆ ತಿ.ನರಸೀಪುರಕ್ಕೆ ಹೋಗಿಬರುತ್ತಿದ್ದ. ಆಗಾಗ್ಗೆ ಸುಧಾಳ ಜೆರಾಕ್ಸ್ ಅಂಗಡಿಗೆ ಹೋಗುತ್ತಿದ್ದ ಮೋಹನಕುಮಾರನಿಗೆ ಆಕೆಯ ಜೊತೆ ಸಲುಗೆ ಬೆಳೆಯಲು ಹೆಚ್ಚಿನ ದಿನಗಳೇನೂ ಬೇಕಾಗಲಿಲ್ಲ, ಅಷ್ಟರಲ್ಲಾಗಲೆ ಆಕೆಗೆ ನಲವತ್ತು ತುಂಬಿಯಾಗಿತ್ತು, ವಯಸ್ಸಿಗೆ ಬಂದ ಇಬ್ಬರು ಮಕ್ಕಳೂ ಇದ್ದರು. ಆದರೂ ಇವರಿಬ್ಬರ ನಡುವಿನ ಸಲುಗೆ ಬಲುಬೇಗನೇ ಅನೈತಿಕ ಸಂಬಂಧವಾಗಿ ಬದಲಾಗಿತ್ತು, ಗಂಡ ಜೆರಾಕ್ಸ್ ಅಂಗಡಿಯಲ್ಲಿದ್ದಾಗಲೇ ಮನೆಯಲ್ಲಿ ಸುಧಾಳ ತೋಳತೆಕ್ಕೆಯಲ್ಲಿ ಮೋಹನಕುಮಾರನಿರುತ್ತಿದ್ದ. ಹಲವು ವರ್ಷಗಳ ಕಾಲ ಕಾಮಾಂಧೆ ಸುಧಾ ಆಂಟಿಯ ಅನೈತಿಕ ಸಂಬಂಧ ಮೋಹನ ಕುಮಾರನ ಜೊತೆ ಮುಂದುವರೆದಿದ್ದರೂ ಗಂಡ ನಾಗೇಂದ್ರಸ್ವಾಮಿಯ ಗಮನಕ್ಕೆ ಬಂದಿರಲೇ ಇಲ್ಲ.

ಕಾಮಾಂಧೆ ಸುಧಾ ಹಾಗೂ ಕಾಮುಕ ಮೋಹನ ಕುಮಾರ್ ಇಬ್ಬರು ಎಂತಹ ಲಜ್ಜೆಗೆಟ್ಟವರೆಂದರೆ ತಾವು ಅನೈತಿಕ ಕ್ರಿಯೆಯಲ್ಲಿ ತೊಡಗಿದ್ದನ್ನು ಮೊಬೈಲ್‌ನಲ್ಲಿ ವೀಡಿಯೋ ಮಾಡಿಕೊಂಡಿದ್ದರು. ಮೋಹನಕುಮಾರ ವೀಡಿಯೋ ಮಾಡುತ್ತೇನೆಂದಾಗ ಬಯಲಾದರೆ ಗತಿ ಏನೆಂಬ ಅಂಜಿಕೆಯೂ ಇಲ್ಲದೆ ಸಹಕರಿಸಿದ್ದ ಸುಧಾ ಎಂತಹ ಲಜ್ಜೆಗೆಟ್ಟ ಹೆಂಗಸು ಎಂಬುದು ಗೊತ್ತಾಗುತ್ತದೆ. ಈಗ್ಗೆ ಮೂರು ವರ್ಷಗಳ ಹಿಂದೆ ಒಮ್ಮೆ ಮೋಹನನ ಮೊಬೈಲ್ ಕೆಟ್ಟು ಹೋಗಿದ್ದರಿಂದ ಅದನ್ನು ರಿಪೇರಿ ಮಾಡಿಸಲೆಂದು ಸರ್ವಿಸ್‌ಗೆ ಕೊಟ್ಟಿದ್ದ. ಆಗ ಅಂಗಡಿಯವ ಅವರಿಬ್ಬರ ಬ್ಲೂಫಿಲಂ ನೋಡಿ, ಡೌನ್‌ಲೋಡ್ ಮಾಡಿಕೊಂಡು ಪಡ್ಡೆ ಹುಡುಗರ ಮೊಬೈಲ್‌ಗೆಲ್ಲಾ ಹಂಚಿಬಿಟ್ಟಿದ್ದ. ಆ ವೀಡಿಯೋದ ಮೂಲಕ ಸುಧಾ ಆಂಟಿಯ ಕಾಮ ಪ್ರಲಾಪ ಬಯಲಾಗಿತ್ತು.

ಆಗ ಸುಧಾ ಆಂಟಿಯೇ ಪೊಲೀಸರಿಗೆ ಮೋಹನ್ ಕುಮಾರ್‌ನ ವಿರುದ್ಧ ದೂರು ನೀಡಿ ಆತ ಅರೆಸ್ಟ್ ಆಗುವಂತೆ ಮಾಡಿಸಿದ್ದಳು. ಆ ಮೂಲಕ ತಾನು ಮುಗ್ಧೆ ಎಂಬ ಸಾಬೀತುಮಾಡುವ ಸಾಹಸ ಮಾಡಿದ್ದಳು. ಇತ್ತ ತನ್ನ ಹೆಂಡತಿಯ ಕಾಮಲೀಲೆ ಹರಿದಾಡಿದ ನಂತರ ಅವಮಾನಿತನಾದ ನಾಗೇಂದ್ರಸ್ವಾಮಿ ತಿ.ನರಸೀಪುರವನ್ನೇ ತೊರೆದು ಮೈಸೂರಿನ ಆಲನಹಳ್ಳಿಯಲ್ಲಿ ಬಾಡಿಗೆ ಮನೆಗೆ ಮಾಡಿ ಅಲ್ಲಿಗೆ ಶಿಫ್ಟಾಗಿದ್ದ. ಮಕ್ಕಳ ಭವಿಷ್ಯದ ದೃಷ್ಟಿಯಿಂದ ಹೆಂಡತಿಯ ರಾಸಲೀಲೆಯನ್ನು ಮನ್ನಿಸಿ, ಆಕೆಗೆ ಮತ್ತೊಂದು ಅವಕಾಶ ಕೊಟ್ಟು ಹೊಸ ಸಂಸಾರ ಶುರು ಮಾಡಿದ್ದ. ಅದಾಗಿ ಆರು ತಿಂಗಳ ಕಾಲ ಸುಧಾ ಆಂಟಿಗೂ ಮೋಹನನಿಗೂ ಕಾಂಟ್ಯಾಕ್ಟ್ ಇರಲಿಲ್ಲ, ಸುಧಾ ಆಂಟಿಯಿಲ್ಲದೆ ವಿರಹ ವೇದನೆ ಅನುಭವಿಸುತ್ತಿದ್ದ ಮೋಹನಕುಮಾರ ಅದೊಂದು ದಿನ ನಾಗೇಂದ್ರಸ್ವಾಮಿ ತಿ.ನರಸೀಪುರದಿಂದ ಕೆಲಸ ಮುಗಿಸಿಕೊಂಡು ಸಂಜೆ ಮೈಸೂರಿಗೆ ಬೈಕ್‌ನಲ್ಲಿ ಬರುವಾಗ ಗೊತ್ತಾಗದಂತೆ ಅವರನ್ನೇ ಹಿಂಬಾಲಿಸಿ ಮೈಸೂರಿನ ಆಲನಹಳ್ಳಿಯಲ್ಲಿದ್ದ ಮನೆಯನ್ನು ಪತ್ತೆ ಮಾಡಿಬಿಟ್ಟಿದ್ದ.

ದಿನನಿತ್ಯ ತನ್ನ ಮನೆ ಬೀದಿಯಲ್ಲೇ ವಿಟಪುರುಷನಂತೆ ಸುತ್ತಾಡುತ್ತಿದ್ದ ಮೋಹನಕುಮಾರ ಕಂಡು ಸುಧಾ ಆಂಟಿಯ ಕಾಮವಾಂಛೆ ಕೆರಳಿತ್ತು. ಮೋಹನಕುಮಾರನ ತೆಕ್ಕೆಯಲ್ಲಿ ಬೀಳಲು ಹಾತೊರೆಯುತ್ತಿದ್ದ ಸುಧಾ ಅದಕ್ಕಾಗಿ ಮನೆಯಲ್ಲಿದ್ದ ತನ್ನ ಮಗಳಾದ ಪೂಜಾಳನ್ನೇ ಬಳಸಿಕೊಂಡಿದ್ದಾಳೆ. ತನ್ನ ತಾಯಿ ಸುಧಾ ಹಾಗೂ ಮೋಹನಕುಮಾರನ ರಾಸಲೀಲೆಯ ವೀಡಿಯೋ ಬಹಿರಂಗವಾದ ನಂತರ ದ್ವಿತೀಯ ಪಿಯುಸಿ ಓದುತ್ತಿದ್ದ ಪೂಜಾ ತೀವ್ರ ಮುಜುಗರಕ್ಕೊಳಗಾಗಿ ಕಾಲೇಜಿಗೆ ಗುಡ್‌ಬೈ ಹೇಳಿ ಮನೆಯಲ್ಲೇ ಇದ್ದಳು. ಆರು ತಿಂಗಳ ವಿರಹ ವೇದನೆಯಿಂದ ನರಳಿದ ಸುಧಾ ಹಾಗೂ ಮೋಹನಕುಮಾರ ಪೂಜಾಳನ್ನು ಸರಿಮಾಡಿಕೊಂಡು ಮತ್ತೆ ರಾಸಲೀಲೆ ಶುರು ಹಚ್ಚಿಕೊಂಡಿದ್ದರು.

ತನ್ನದೇ ಹೆಸರಿನಲ್ಲಿ ಬಿಎಸ್‌ಎನ್‌ಎಲ್ ಸಿಮ್ ಖರೀದಿಸಿ ಸುಧಾಳಿಗೆ ರಹಸ್ಯವಾಗಿ ಮೊಬೈಲ್ ಫೋನ್ ಗಿಫ್ಟ್ ಕೊಟ್ಟಿದ್ದ ಮೋಹನಕುಮಾರ ದಿನನಿತ್ಯ ಸಂಪರ್ಕದಲ್ಲಿದ್ದ. ಅತ್ತ ಗಂಡ ನಾಗೇಂದ್ರಸ್ವಾಮಿ ಕೆಲಸಕ್ಕೆ ತೆರಳುತ್ತಿದ್ದಂತೆ ಇತ್ತ ಸುಧಾ ಪ್ರಿಯಕರ ಮೋಹನಕುಮಾರನನ್ನು ಮನೆಗೆ ಕರೆಸಿಕೊಳ್ಳುತ್ತಿದ್ದಳು. ತಾಯಿ ಸುಧಾಳ ಅಕ್ರಮ ಸಂಬಂಧಕ್ಕೆ ಮಗಳು ಪೂಜಾ ಕೂಡ ಸಾಥ್ ನೀಡಿದ್ದಳು. ಮೋಹನ್‌ಕುಮಾರ್ ಬಂದಕೂಡಲೇ ಪೂಜಾ ತನ್ನ ದೊಡ್ಡಮ್ಮನ ಮನೆ ಹಾಗೂ ಸಿಟಿ ಕಡೆ ಹೊರಟುಹೋಗುತ್ತಿದ್ದಳು. ಅವಳು ಬರುವವರೆಗೂ ಮನೆಯಲ್ಲಿ ಸುಧಾ ಹಾಗೂ ಮೋಹನ ಕುಮಾರನ ಮಿಲನ ನೆರವೇರುತ್ತಿತ್ತು.

ತನ್ನ ಹೆಂಡತಿ ಸರಿಹೋಗಿದ್ದಾಳೆಂಬ ಭರವಸೆಯಲ್ಲೇ ಇದ್ದ ನಾಗೇಂದ್ರಸ್ವಾಮಿಗೆ ಎರಡು ವರ್ಷಗಳ ಅವರಿಬ್ಬರ ಅನೈತಿಕ ಸಂಬಂಧ ಮುಂದುವರೆದಿರುವ ಸಂಗತಿ ತಿಳಿದುಬಂದಿತ್ತು, ನಾಗೇಂದ್ರಸ್ವಾಮಿ ಹೆಂಡತಿ ಸುಧಾಳನ್ನು ಮಗಳು ಪೂಜಾಳ ಮುಂದೆಯೇ ಬೈದು ಬುದ್ಧಿ ಹೇಳಿದ್ದ. ಮೋಹನನ ಸಹವಾಸ ಬಿಡುವಂತೆ ಖಡಕ್ ವಾರ್ನಿಂಗ್ ಕೂಡಾ ಮಾಡಿದ್ದ. ಸುಧಾ ಆಂಟಿಯ ತಲೆಗೆ ಕಡುಕೆಟ್ಟ ಆಲೋಚನೆಯೊಂದು ಹೊಕ್ಕಿದ್ದೇ ಆಗ!

ಗಂಡನನ್ನೇ ಮುಗಿಸಲು ಸ್ಕೆಚ್

ಅದಾಗಲೇ ಒಬ್ಬರನ್ನೊಬ್ಬರು ಬಿಟ್ಟಿರಲಾರದಷ್ಟು ಬೆರೆತುಹೋಗಿದ್ದ ಸುಧಾ ಹಾಗೂ ಮೋಹನಕುಮಾರ ಇಬ್ಬರೂ ಸೇರಿ ತಮ್ಮ ಅನೈತಿಕ ಸಂಬಂಧಕ್ಕೆ ಮುಳ್ಳಾಗಿದ್ದ ನಾಗೇಂದ್ರಸ್ವಾಮಿಯನ್ನೇ ಶಾಶ್ವತವಾಗಿ ನಿವಾರಿಸಿಕೊಳ್ಳುವ ನಿರ್ಣಯಕ್ಕೆ ಬಂದಿದ್ದರು. ನಾಗೇಂದ್ರಸ್ವಾಮಿ ಸಾಯಬೇಕು, ಆದರೆ ತಮ್ಮ ಮೇಲೆ ಅನುಮಾನ ಬರಬಾರದು ಎಂಬ ಚಾಣಾಕ್ಷತೆ ತೋರಿದ ಅವರು ಕೊಲೆಗೆ ಆಯ್ಕೆ ಮಾಡಿಕೊಂಡಿದ್ದು ಆಕ್ಸಿಡೆಂಟ್ ಅಸ್ತ್ರವನ್ನು. ಅಪಘಾತದ ಕೇಸು ಸುಲಭವಾಗಿ ಮುಚ್ಚಿಹೋಗುತ್ತೆ, ನಮ್ಮ ಮೇಲೆ ಗುಮಾನಿಯೂ ಬರುವುದಿಲ್ಲ ಎಂದು ತೀರ್ಮಾ[...] ಅವರು ಅದಕ್ಕಾಗಿ ಗೊತ್ತು ಮಾಡಿದ್ದು ದೊಡ್ಡ[...] ಗ್ರಾಮದ ಡಿ.ಎಸ್.ಅಶೋಕ ಎಂಬ ಡ್ರೈವರ್‌ನನ್ನು[...] ಮೋಹನ್‌ಕುಮಾರ್‌ನ ಅಪ್ಪನ ಬಳಿ ಭತ್ತ ಸ[...] ಕೆಲಸ ಮಾಡಿಕೊಂಡಿದ್ದ ಆಕ್ಸಿಡೆಂಟ್ ಮಾಡಿ ನಾಗೇಂ[...] ಯನ್ನು ಸಾಯಿಸಿದರೆ 6 ಲಕ್ಷ ರೂ. ಕೊಡು[...] ಆಮಿಷ ತೋರಿಸಿ ಆತನನ್ನು ಸುಪಾರಿ ಕೊಲೆ[...] ಮಾಡಿದ್ದರು. ಅಲ್ಲದೇ ಮುಂಗಡವಾಗಿ 2 [...] ತಲುಪುತ್ತಿದ್ದಂತೆಯೇ ಚಾಲಕ ಅಶೋಕ್ ನಾಗೇಂದ್ರಸ[...] ನೆತ್ತರು ಹೀರಲು ಅಣಿಯಾಗಿದ್ದ.

ಎಲ್ಲಾ ಅಂದುಕೊಂಡಂತೆ ನಡೆದಿದ್ದರೆ ಜೂನ್ [...] ನಾಗೇಂದ್ರಸ್ವಾಮಿಯನ್ನು ಅವರು ಕೊಲೆ ಮಾಡಿರು[...] ಅವತ್ತು ಮೈಸೂರಿನಿಂದ ತಿ.ನರಸೀಪುರಕ್ಕೆ ಬೆ[...] ಹೋಗುತ್ತಿದ್ದ ನಾಗೇಂದ್ರಸ್ವಾಮಿಗೆ ಲಾರಿಯಿಂದ ಗು[...] ಸಕಲ ಸಿದ್ಧತೆ ಮಾಡಿಕೊಂಡಿದ್ದರು. ಅದೃಷ್ಟವಶಾತ್ [...] ತಿ.ನರಸೀಪುರ ಮುಖ್ಯರಸ್ತೆಯಲ್ಲಿ ವಾಹನಗಳ [...] ಹೆಚ್ಚಾಗಿತ್ತಾದ್ದರಿಂದ ನಾಗೇಂದ್ರಸ್ವಾಮಿ ಹಂತ[...] ಬಚಾವಾಗಿದ್ದ. ತಮ್ಮ ಪ್ಲಾನ್ ವರ್ಕ್‌ಔಟ್ ಆಗದಿ[...] ಮೋಹನಕುಮಾರ, ಸುಧಾ ಕೈಕೈ ಹಿಸುಕಿಕೊಂಡ[...]

ನಾಗೇಂದ್ರಸ್ವಾಮಿಗೆ ಆ ಅದೃಷ್ಟ ಎರಡನೇ[...] ಕೈಹಿಡಿಯಲಿಲ್ಲ. ಸುಧಾ, ಮಗಳು ಪೂಜಾ [...] ಪ್ರಿಯಕರ ಮೋಹನಕುಮಾರ ಸೂರಿನ ಜಯಲಕ್ಷ್ಮಿ[...] ಕಾಳಿದಾಸ ರಸ್ತೆಯಲ್ಲಿರುವ ಗ್ರೀನ್‌ಲೀಫ್ ಹೋ[...] ಶತಗತಾಯ ನಾಳೆ ನಾಗೇಂದ್ರಸ್ವಾಮಿಯನ್ನು [...] ಮಾಡಲೇಬೇಕೆಂಬ ತೀರ್ಮಾನಕ್ಕೆ ಬಂದಿದ್ದರು. ನಾ[...] ಖಾಲಿಯಾಗಿದೆ ತುಂಬಿಸಿಕೊಂಡು ಬನ್ನಿ ಅಂತ [...] ಬಳಿ ಸಿಲಿಂಡರ್ ಕೊಟ್ಟುಕಳಿಸ್ತೇನೆ, ಆಗ ಅವರನ್ನು [...] ಮಾಡಲು ಡ್ರೈವರ್‌ಗೆ ಸುಲಭವಾಗುತ್ತೆ ಎಂಬ ಸಲ[...] ಖುದ್ದು ಸುಧಾಳೆ ಕೊಟ್ಟಿದ್ದಳು. ಯಾವ ಕಾರಣಕ್ಕ[...] ಈ ಬಾರಿ ಮಿಸ್ ಆಗಬಾರದೆನ್ನುವ [...] ಆಕೆಯಲ್ಲಿದ್ದಂತಿತ್ತು, ಅದರಂತೆ ಜೂನ್ 27ರ [...] ಹೆಂಡತಿ ಕೊಟ್ಟಿದ್ದ ಖಾಲಿ ಸಿಲಿಂಡರ್ ಅನ್ನು ತಿ.ನರಸೀ[...] ಕೊಂಡೊಯ್ದಿದ್ದ ನಾಗೇಂದ್ರಸ್ವಾಮಿ, ತನ್ನ ಅಂಗಡಿಯ[...] ಮುಗಿಸಿಕೊಂಡು ಸಂಜೆ ಮನೆಗೆ ಮರಳುವಾಗ ತ[...] ಸಿಲಿಂಡರ್ ಅನ್ನು ಬೈಕ್ ಹಿಂಬದಿಯಲ್ಲಿ ಇರಿಸಿಕೊಂ[...] ಹೊರಟಿದ್ದರು.

ಸುಪಾರಿ ಪಡೆದಿದ್ದ ಡ್ರೈವರ್ ಅಶೋಕ್ ಕೆಎ-1[...] ಸಂಖ್ಯೆಯ ತನ್ನ ಲಾರಿಯನ್ನು ನರಸೀಪುರ ಸರ್ಕ[...] ನಿಲ್ಲಿಸಿಕೊಂಡು ಕಾಯುತ್ತಿದ್ದ. ಸಂಜೆ ಅಲ್ಲಿಗೆ [...]


ಅಪಘಾತದ ಭೀಕರ ದೃಶ್ಯ


ಕೃತ್ಯಕ್ಕೆ ಬಳಸಿದ ಲಾರಿ

...ಳಸಾ ಬಂಡೂರಿ: ಜನದ್ರೋಹಿಗಳಿಗೆ ಕಾದಿದೆ ತಕ್ಕ ಪಾಠ

...ನಾವು ಪಾಕಿಸ್ತಾನದೋರಿಂದ, ಬಾಂಗ್ಲಾದೋರಿಂದ ... ಕೊಡ್ರಿ ಅಂತ ಕೇಳಕ್ಹತ್ತಿಲ್ಲ; ನಮ್ಮ ನಾಡ್ನಾಗೆ ಹುಟ್ಟಿ ...ಹೋ ನದೀ ನೀರ್ನ ನಮ್ಗೆ, ನಮ್ ದನಕರುಗೋಳಿಗೆ ...ಯೋಕ್ ಕೊಡ್ರಿ ಅಂತ ಕೇಳ್ತಿದಿವಿ. ಇದ್ಕೆ ಇಷ್ಟೆಲ್ಲಾ ...ರಾಟ ಮಾಡ್ಬೇಕೇನ್ರಿ.....'

...ಹುಬ್ಬಳ್ಳಿಯ ಕಿತ್ತೂರು ಚೆನ್ನಮ್ಮ ಸರ್ಕಲ್‌ನಲ್ಲಿ ಇತ್ತೀಚೆಗೆ ...ಪದೇ ತೂರಿಬರುತ್ತಿರುವ ಮಾತು ಇದು. ಕೇವಲ ...ಳ್ಳಿ ಮಾತ್ರವಲ್ಲ ಕಳಸಾ-ಬಂಡೂರಿ ಹೋರಾಟದ ... ಹತ್ತಿಸಿಕೊಂಡಿರುವ ನರಗುಂದ, ನವಲಗುಂದ, ...ವಾಡ, ಬೆಳಗಾಂ, ಗದಗ ಎಲ್ಲಾ ಭಾಗದ ರೈತರ ...ಲು ಹೆಚ್ಚೂಕಡಿಮೆ ಇದೇ ಹತಾಶೆಯನ್ನು ಸೂಸುತ್ತವೆ. ... ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಹಾಗೂ ...ತವರ ಪಾರ್ಟಿ ಪುಂಡರಿಗೆ ಇಂತಹ ಪ್ರಶ್ನೆಗಳ ...ಂತಿಕೆಯೇ ಅರ್ಥವಾಗುತ್ತಿಲ್ಲ, ಒಣ ರಾಜಕಾರಣದ ...ಚಷ್ಟೇ ಅವರಿಗೆ ಸಾಕೆನಿಸಿವೆ. ಅಧಿಕಾರಸ್ಥ ಬಿಜೆಪಿ ..., ಕಾಂಗ್ರೆಸ್ ಪಕ್ಷಗಳು ಒಬ್ಬರ ಮೇಲೊಬ್ಬರು ಸಬೂಬು ...ಕೊಂಡು ರೈತರ ಜೀವಸಮಸ್ಯೆಯನ್ನು ರಾಜಕೀಯಗೊಳಿ...ಸುತ್ತಿವೆ. ರೈತರ ಬಗ್ಗೆ ಕಾಳಜಿ, ಬದ್ಧತೆ ಇಲ್ಲದ ...ವರಿಂದ ಇದಕ್ಕಿಂತ ಹೆಚ್ಚೇನು ನಿರೀಕ್ಷಿಸಲಾದೀತು. ... ರೈತರ ಆಕ್ರೋಶ ಈ ಬಾರಿ ತನ್ನ ಸಹನೆಯನ್ನು ...ಮೀರಿನಿಂತಿದೆ. ಮೂರು ತಿಂಗಳ ನಂತರವೂ ...-ಬಂಡೂರಿ ಹೋರಾಟ ತನ್ನ ಗತಿ ಕಳೆದುಕೊಳ್ಳದೇ ...ದಿಂದ ದಿನಕ್ಕೆ ಉರಿಗೊಳ್ಳುತ್ತಿರೋದೇ ಇದಕ್ಕೆ ಸಾಕ್ಷಿ.

ರಾಜ್ಯ-ಕೇಂದ್ರ ಜಂಗಿ ಆಟ

...ಕುಡಿಯುವ ನೀರಿಗಾಗಿ ಉತ್ತರ ಕರ್ನಾಟಕದ ಜನರ ...ಳು ಉರಿದುಹೋಗುತ್ತಿದೆ. ಅವರ ಸಂಕಷ್ಟಗಳಿಗೆ ಕಿವಿ ...ಬೇಕಾದ ಸರ್ಕಾರಗಳು ತಮ್ಮತಮ್ಮ ಅಂಗಳದಿಂದ ...ನ್ನು ಹೊರನೂಕಿ ಬೇರೊಬ್ಬರಿಗೆ ಜವಾಬ್ದಾರಿಯನ್ನು ...ಯಿಸುವ ತಂತ್ರಗಾರಿಕೆಯಲ್ಲೇ ಮುಳುಗಿಹೋಗಿವೆ. ..., ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಾ ಹೊರತೇನಲ್ಲ. ...ಗಲೇ ಸರ್ವಪಕ್ಷ ನಿಯೋಗವನ್ನು ಪ್ರಧಾನಮಂತ್ರಿ ... ಕರೆದೊಯ್ದಿರುವ ಸಿದ್ದರಾಮಯ್ಯ ಅತ್ತ ಮೋದಿಯಿಂದ ..., ಪ್ರತಿಕ್ರಿಯೆ ಸಿಕ್ಕಿಲ್ಲ ಎನ್ನುವ ಅಸಹಾಯಕತೆಯಲ್ಲೇ ... ಹಿಸುಕಿಕೊಳ್ಳುತ್ತಿದ್ದಾರೆ. ಬಿಜೆಪಿಗರ ಜನದ್ರೋಹದ ... ತಿಳಿದಿರುವಂತದ್ದೇ. ಅದಕ್ಕೆ ಸರಿಯಾಗಿ ಅವರು ...ರಾಮಯ್ಯನವರನ್ನು ಗುರಿ ಮಾಡಿಕೊಂಡಿದ್ದಾರೆ ಹೊರತು ... ಪ್ರಧಾನಿ ಮೋದಿಯ ಬೇಜವಾಬ್ದಾರಿತನದ ಬಗ್ಗೆ ...ರವೆತ್ತುತ್ತಿಲ್ಲ.


...ಕಾವೇರಿ ನದಿ ನೀರಿನ ಹೋರಾಟ ಹಳೇ ಮೈಸೂರು ...ದಲ್ಲಿ ಭುಗಿಲೆದ್ದಂತಹ ಸಂದರ್ಭದಲ್ಲಿ ರಾಜಕೀಯ ...ಗಳು ಹೀಗೆ ಜಂಗೀಕುಸ್ತಿ ಆಡುತ್ತಿದ್ದವಾ? ಖಂಡಿತ ... ರಾಜ್ಯಕ್ಕೆ ಅನ್ಯಾಯವಾಗುತ್ತದೆ ಎಂದು ಎಲ್ಲರೂ ...ತ ಹೇರುತ್ತಿದ್ದರು. ಅಂತಹ ಒತ್ತಡ ಕಳಸಾ-ಬಂಡೂರಿ ...ವರದಲ್ಲಿ ಏಕೆ ಇಲ್ಲವಾಗಿದೆ?

...ಈಗ ಮತ್ತೊಮ್ಮೆ ಕರ್ನಾಟಕದಿಂದ ಸರ್ವಪಕ್ಷ ...ಯೋಗವನ್ನು ಪ್ರಧಾನಿ ಬಳಿಗೆ ಕೊಂಡೊಯ್ಯಲು ತಾನು ... ಎನ್ನುವುದಾಗಿ ಸಿದ್ದರಾಮಯ್ಯ ಹೇಳಿಕೆಗಳನ್ನು ...ನುತ್ತಿದ್ದಾರೆ. ಆದರೆ ಸಮಸ್ಯೆ ಬಗೆಹರಿಸಲು ಸಿದ್ಧವೇ ...ವ ಪ್ರಧಾನಿಯ ಬಳಿ ಒಮ್ಮೆಯಲ್ಲ ಇನ್ನು ಹತ್ತು ... ನಿಯೋಗ ಕೊಂಡೊಯ್ದರೂ ಏನು ಪ್ರಯೋಜನ?


...ಇದರ ಜೊತೆಗೆ ಇತ್ತೀಚಿನ ಹಲವು ವಿದ್ಯಮಾನಗಳೂ ...ರಾಮಯ್ಯನವರ ಸರ್ಕಾರದ ಮೇಲೆ ಗುಮಾನಿ ಬರುವಂತೆ ...ಡಿವೆ. ಈಗಾಗಲೇ ಧಾರವಾಡಕ್ಕೆ ಮಂಜೂರಾಗಿದ್ದ ...ಟಿಯನ್ನು ರಾಯಚೂರಿಗೆ ಮಂಜೂರು ಮಾಡಿ ಎನ್ನುವ ...ವನ್ನು ಬರೆದ ಸಿಎಂ ಸಿದ್ದರಾಮಯ್ಯ ಈ ಭಾಗದಲ್ಲಿ ...ಸ ಸಮಸ್ಯೆಯೊಂದನ್ನು ಹುಟ್ಟುಹಾಕಿ ಆ ಮೂಲಕ ... ರೈತರ ಹೋರಾಟವನ್ನು ಶಿಥಿಲಗೊಳಿಸುತ್ತಿದ್ದಾರೆ ...ಬುದು ಹೋರಾಟಗಾರರ ಅನುಮಾನ.

... ಈ ಹಿಂದೆ, 'ಜಗದೀಶ ಶೆಟ್ಟರ್ ಮುಖ್ಯಮಂತ್ರಿಯಾಗಿ ...ಗಲೇ ರಾಯಚೂರಿನಲ್ಲೇ ಐಐಟಿ ಸ್ಥಾಪಿಸಿ ಅಂತಾ ... ಬರೆದಿದ್ದರು' ಅಂತಾ ಸಿದ್ದರಾಮಯ್ಯ ನುಣುಚಿಕೊಳ್ಳುವ ...ಯತ್ನ ನಡೆಸಿದರೆ 'ಮಂಜೂರಾದ ಐಐಟಿಯನ್ನೇ ಸ್ಥಳಾಂತರ ...ಡಿ ದ್ರೋಹ ಮಾಡುತ್ತಿದ್ದಾರೆ' ಅಂತ ಹೊಣೆಗೇಡಿ ...ಜಕಾರಣಿ ಪ್ರಹ್ಲಾದ ಜೋಶಿ ಅರಚಾಡುತ್ತಿದ್ದಾನೆ. ಐಐಟಿ ...ಬುದೇನು ಹೈಮರಿ ಸ್ಕೂಲಾ? ಇದರಿಂದ ಯಾರಿಗೆ? ...? ಎಷ್ಟು ಲಾಭವಾಗುತ್ತದೆ ಎಂಬ ವಿಚಾರವನ್ನೇ ...ಸ್ತಾಪಿಸದೆ ಇಂತಹದ್ದೊಂದು ವಿವಾದವನ್ನು ...ಜಿತವಾಗಿಡಲು ಹವಣಿಸುತ್ತಿರುವುದರ ಹುನ್ನಾರವನ್ನು ...ಎಂದು ಅರ್ಥೈಸಿಕೊಳ್ಳಬೇಕು?

... ಸಿದ್ದರಾಮಯ್ಯನಿಗೇ ಆಗಲಿ, ಹುಬ್ಬಳ್ಳಿಯ ಪ್ರಹ್ಲಾದ್ ...ಶಿಗೆ ಆಗಲೀ ಕಳಸಾ-ಬಂಡೂರಿ ರೈತರ ಆಕ್ರೋಶದಿಂದ ...ಳ್ಳ ಬೇಕಾಗಿತ್ತು, ಅದನ್ನು ಐಐಟಿ ವಿವಾದ ಒದಗಿಸಿ ...ದುತ್ತಿದೆ!



ಇನ್ನು ಕಾರ್ಪೊರೇಟ್ ಕೈಗೊಂಬೆಯಂತೆ ವರ್ತಿಸುತ್ತಿರುವ ಮೋದಿಯನ್ನು ಕೇಂದ್ರವಾಗಿಸಿಕೊಂಡು ರೈತ ಮತ್ತು ಕಾರ್ಮಿಕ ಸಮಸ್ಯೆಗಳನ್ನು ಚರ್ಚಿಸುವುದೇ ಒಂದು ವ್ಯರ್ಥಾಲಾಪ. ಭೂಸ್ವಾಧೀನ ಸುಗ್ರೀವಾಜ್ಞೆಯ ಮೂಲಕ ರೈತರ ಬದುಕುಗಳ ಮೂಲಾಧಾರವನ್ನೇ ಅಲ್ಲಾಡಿಸಲು ಹೊರಟ ಮೋದಿಯನ್ನು ನಮ್ಮ ಪ್ರಧಾನಿ ಅಂತ ಭಾರತೀಯರು ಮರೆತೇ ಅರ್ಧ ವರ್ಷ ಆಗುತ್ತಾ ಬಂತು. ಜೀವನಾಡಿಗಳ ಸಮಸ್ಯೆಗೆ ಕಿವಿಯಾನಿಸುವ ಸಂವೇದನೆ ಮೋದಿಗಿಲ್ಲ ಎನ್ನುವುದು ಮತ್ತೊಮ್ಮೆ ಸಾಬೀತಾಗಿದೆ. ಮಹದಾಯಿ ನದಿ ನೀರು ಹಂಚಿಕೆಯ ಸಂಪೂರ್ಣ ವಿವಾದದಲ್ಲಿ ಮೋದಿ ಒಂದು ರಾಜಕೀಯ ಪಕ್ಷದ



ಮುಖಂಡನಾಗಿ ವರ್ತಿಸಿದ್ದಾನೆಯೇ ಹೊರತು ಸಮಗ್ರ ದೇಶದ ಜವಾಬ್ದಾರಿಯುತ ಪ್ರಧಾನಿಯಾಗಿ ಆತನ ವರ್ತನೆ ಕಂಡುಬಂದಿಲ್ಲ. ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಅಧಿಕಾರದಲ್ಲಿರುವ ಸರ್ಕಾರಗಳ ಪಾತ್ರ ನಿರ್ಣಾಯಕವಾಗಿರುತ್ತದೆಯೇ ಹೊರತು ವಿರೋಧ ಪಕ್ಷಗಳದ್ದಲ್ಲ. ಹೆಚ್ಚೆಂದರೆ ಅವು ಸಾಧಕ-ಬಾಧಕವನ್ನು ಅಂದಾಜು ಮಾಡಿ (ಈಗೀಗ ರಾಜಕೀಯ ಲಾಭ ನಷ್ಟ ಅಂದಾಜು ಮಾಡಲಾಗುತ್ತಿದೆ ಅಷ್ಟೆ) ಸಲಹೆ ಅಥವಾ ವಿರೋಧ ವ್ಯಕ್ತ ಪಡಿಸುವುದು ಅವುಗಳ ಕೆಲಸವಾಗಿರುತ್ತದೆ. ಈ ಸತ್ಯ ಮೋದಿಗೆ ಗೊತ್ತಿಲ್ಲವೇ? ಗೊತ್ತಿದ್ದರೂ, ಮೊದಲು ಗೋವಾ ಮತ್ತು ಮಹಾರಾಷ್ಟ್ರ ರಾಜ್ಯಗಳ ವಿರೋಧ ಪಕ್ಷಗಳನ್ನು ಒಪ್ಪಿಸಿಕೊಂಡು ಬನ್ನಿ (ಎರಡೂ ಕಡೆ ಕಾಂಗ್ರೆಸ್ ಪಕ್ಷವೇ ವಿರೋಧ ಪಕ್ಷದ ಸ್ಥಾನದಲ್ಲಿದೆ) ಅಂತ ಸಬೂಬು ಹೇಳಿ ಕರ್ನಾಟಕದ ಸರ್ವಪಕ್ಷ ನಿಯೋಗವನ್ನು ಸಾಗಹಾಕಿದ್ದೇಕೆ? ಅನುಮಾನವೇ ಇಲ್ಲ, ಅದು ಶುದ್ಧ ನೆಪ ರಾಜಕಾರಣ!

ಹೊಣೆಗೇಡಿ ಕಾಂಗ್ರೆಸ್ಸಿಗರೂ, ಜನದ್ರೋಹಿ ಜೋಷಿಯೂ

ಹೋರಾಟದ ಲಾಭನಷ್ಟವನ್ನು ಲೆಕ್ಕಹಾಕಿದ ನಂತರವಷ್ಟೇ ರಾಜಕೀಯ ಪಕ್ಷಗಳು ಹೋರಾಟವನ್ನು 'ಕೈ'ಗೆತ್ತಿಕೊಳ್ಳುವ ಪರಿಪಾಠ ಇತ್ತೀಚಿನ ದಿನಗಳಲ್ಲಿ ಸಾಮಾನ್ಯವಾಗುತ್ತಿದೆ. ಕಾಂಗ್ರೆಸ್‌ಗೆ ಕಳಸಾ ಬಂಡೂರಿ ಹೋರಾಟದಲ್ಲಿ ತೊಡಗಿಸಿಕೊಳ್ಳುವುದು ಇಬ್ಬಂದಿ ಸಂಕಟ. ರೈತರ ಕೂಗಿಗೆ ಧ್ವನಿಯಾದರೆ ತಮ್ಮದೇ ರಾಜ್ಯ ಸರ್ಕಾರದ ವಿರುದ್ಧ ನಿಲ್ಲಬೇಕಾಗುತ್ತದೆಂಬ ಅಳುಕು. ಮೊದಮೊದಲು ಕಾಂಗ್ರೆಸಿಗರು ಕಳಸಾ ಹೋರಾಟದಿಂದ ದೂರ ಉಳಿದದ್ದೂ ಇದೇ ಕಾರಣಕ್ಕೆ. ಆದರೆ ಯಾವಾಗ ಮೋದಿಯ ಮೊಂಡಾಟ ಬಯಲಾಗಿ ಹೋರಾಟ ಕೇಂದ್ರ ಸರ್ಕಾರದತ್ತಲೂ ತಿರುಗಿತೋ ಆಗಷ್ಟೆ ಧಾರವಾಡ ಗ್ರಾಮೀಣ ಕ್ಷೇತ್ರದ ವಿನಯ ಕುಲಕರ್ಣಿ, ಕುಂದಗೋಳ ಕ್ಷೇತ್ರದ ಸಿ.ಎಸ್. ಶಿವಳ್ಳಿಯಂತವರು ಹೋರಾಟದ ಮುಂಚೂಣಿಗೆ ಬಂದದ್ದು. ಇವರನ್ನು ಬಿಟ್ಟರೆ ಕಲಘಟಗಿಯ ಶಾಸಕ ಸಂತೋಷ್ ಲಾಡ್, ಹು-ಧಾ ಪೂರ್ವ ಕ್ಷೇತ್ರದ ಪ್ರಸಾದ ಅಬ್ಬಯ್ಯ, ಎಂಎಲ್‌ಸಿಗಳಾದ ಶ್ರೀನಿವಾಸ್ ಮಾನೆ, ನಾಗರಾಜ್ ಛಬ್ಬಿ, ವೀರಣ್ಣ ಮತ್ತಿಕಟ್ಟಿ ಮೊದಲಾದವರು ಈ ಹೋರಾಟದತ್ತ ಮುಖ ತೋರಿಸದೇ ತಿರುಗಾಡುತ್ತಿದ್ದಾರೆ. ಇನ್ನು ನರಗುಂದದ ಶಾಸಕ ಬಿ.ಆರ್.ಯಾವಗಲ್ ಹುಬ್ಬಳ್ಳಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ರೈತರು ಹೋರಾಟ ಕೈಬಿಡುವಂತೆ ಹೇಳಿ ನಗೆಪಾಟಲಿಗೀಡಾಗಿದ್ದಾನೆ. ಹಿರಿಯ ಸಚಿವ ಎಚ್ಕೆ ಪಾಟೀಲ್‌ರಂತು ಐಬಿಯಲ್ಲಿ ಪತ್ರಿಕಾಗೋಷ್ಠಿ ನಡೆಸುವುದಕ್ಕಷ್ಟೆ ತಮ್ಮ ಹೋರಾಟವನ್ನು ಸೀಮಿತವಾಗಿಸಿಕೊಂಡಿದ್ದಾರೆ.

ಇನ್ನು ಕಳಸಾ ಹೋರಾಟದಲ್ಲಿ ಸ್ಥಳೀಯ ಬಿಜೆಪಿಗರೇ ಪರಮ ವಿಲನ್‌ಗಳು! ರೈತರು ನೀರಿಗಾಗಿ ಹಾಹಾಕಾರ ಇಡುತ್ತಿದ್ದರೆ, ರೈತ ಚೈತನ್ಯದ ಹೆಸರಲ್ಲಿ ಹುಚ್ಚಾಟ ನಡೆಸುತ್ತಿರುವ ಬಿಜೆಪಿಗರು ಕಳಸಾ ಬಂಡೂರಿ ಹೋರಾಟಕ್ಕೆ ಧ್ವನಿಯಾಗುವುದಿರಲಿ ಹೋರಾಟವನ್ನೇ ಮಟ್ಟ ಹಾಕುವ ವ್ಯವಸ್ಥಿತ ಸಂಚು ಮಾಡಿಕೊಂಡು ಬರುತ್ತಿದ್ದಾರೆ. ಅದಕ್ಕೇ ಹೋರಾಟಗಾರರಿಗೆ ಬಿಜೆಪಿ ರಾಜ್ಯಾಧ್ಯಕ್ಷ ಪ್ರಹ್ಲಾದ್ ಜೋಷಿ, ಮಾಜಿಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮೇಲೆ ಆ ಪರಿ ಆಕ್ರೋಶ. ಹೋರಾಟ ಐವತ್ತನೇ ದಿನಕ್ಕೆ ಕಾಲಿಟ್ಟಾಗ ನೆಪಕ್ಕೆಂಬಂತೆ ಯಡ್ಡಿ ಬಂದುಹೋದದ್ದು ಬಿಟ್ಟರೆ ಬಿಜೆಪಿಯವರಿಂದ ನೈತಿಕ ಅಥವಾ ಭೌತಿಕ ಬೆಂಬಲವಾಗಲಿ ಇದುವರೆಗೂ ಸಿಕ್ಕಿಲ್ಲ. ಏಕೆಂದರೆ ಮೋದಿಯ ಗುಲಾಮಗಿರಿಯನ್ನು ಪ್ರಶ್ನಿಸುವ ತಾಕತ್ತು ಅವರ್‍ಯಾರಿಗೂ ಇಲ್ಲ. ರಾಜ್ಯದ ಜನ ನೀರಿಲ್ಲದೆ ಸತ್ತರೂ ಪರವಾಗಿಲ್ಲ ಕೇಂದ್ರ ಸರ್ಕಾರಕ್ಕೆ ಮುಖ್ಯವಾಗಿ ಮೋದಿಗೆ ಮುಜುಗರ ಆಗಬಾರದು ಎನ್ನುವುದಷ್ಟೇ ಅವರ ಕಾಳಜಿ. ಇಂತಹ ಆರೋಪ ಕೇಳಿಬರುತ್ತಿದ್ದಂತೆಯೇ ಹುಬ್ಬಳ್ಳಿಯಲ್ಲಿ ನಮ್ಮ ಪಕ್ಷದಿಂದ ಕಳಸಾ ಬಂಡೂರಿಗಾಗಿ ಪ್ರತ್ಯೇಕವಾಗಿ 8 ದಿನಗಳ ಹೋರಾಟ ಮಾಡುತ್ತೇವೆ ಎಂದು ಟೆಂಟ್ ಹಾಕಿದ್ದ ಬಿಜೆಪಿಗರು ನಾಲ್ಕನೇ ದಿನಕ್ಕೇ ಟೆಂಟ್ ಸಮೇತ ನಾಪತ್ತೆಯಾಗಿದ್ದರು!

ಬಿಜೆಪಿಗರ ಇಂತಹ ಗೋಮುಖವ್ಯಾಘ್ರ ನೀತಿಯ ಅರಿವು ಇರುವುದರಿಂದಲೇ ಅವರನ್ನು ಹೋರಾಟದಿಂದ ಸಂಪೂರ್ಣವಾಗಿ ಹೊರಗಿಟ್ಟು ಕಳಸಾ ಬಂಡೂರಿ ಹೋರಾಟ ಸಮಿತಿ ಹೆಸರಲ್ಲಿ ಪಕ್ಷಾತೀತ ಹೋರಾಟಕ್ಕೆ ಮುಂದಾಗಿರೋದು. ಸೆಪ್ಟೆಂಬರ್ 27ರ ಕರ್ನಾಟಕ ಬಂದ್ ಸಂದರ್ಭದಲ್ಲೂ ಹೋರಾಟಗಾರರು ಬಿಜೆಪಿ ನಾಯಕರಾದ ಪ್ರಹ್ಲಾದ್ ಜೋಷಿ ಮತ್ತು ಜಗದೀಶ್ ಶೆಟ್ಟರ್ ಮನೆಗೆ ಮುತ್ತಿಗೆ ಹಾಕಿದ್ದು ಕೂಡಾ ಇದೇ ಕಾರಣಕ್ಕೆ. ಅಂದು ಮನಸೂರ ಮಠದ ಬಸವರಾಜ ದೇವರು, ರಾಜಣ್ಣ ಕೊರವಿ, ವಿಕಾಸ ಸೊಪ್ಪಿನ, ವೀರಣ್ಣ ಮಳಗಿ, ಸಿದ್ದು ತೇಜ, ಬಾಬಾಜಾನ ಮುದ್ಗೋಳ, ಅಮೃತ ಇಜಾರಿ ಮೊದಲಾದ ಮುಖಂಡರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಹುಬ್ಬಳ್ಳಿಯ ಚೆನ್ನಮ್ಮ ಸರ್ಕಲ್‌ನಲ್ಲಿ ಸಭೆ ಸೇರಿದ ಸುಮಾರು 600ಕ್ಕೂ ಹೆಚ್ಚು ಜನರಿದ್ದ ಪ್ರತಿಭಟನಾನಿರತರು ತಮ್ಮ ಹೋರಾಟಕ್ಕೆ ಹಿನ್ನಡೆ ಉಂಟುಮಾಡುತ್ತಿರುವ ಸಂಸದ ಜೋಶಿ ಮನೆ ಎದುರು ಪ್ರತಿಭಟನೆ ನಡೆಸುವ ಒಮ್ಮತದ ತೀರ್ಮಾನಕ್ಕೆ ಬಂದಿದ್ದರು. ನಾಯಕರ ಸಮ್ಮತಿ ದೊರಕುತ್ತಿದ್ದಂತೆಯೇ ಅಷ್ಟೂ ಪ್ರತಿಭಟನಾಕಾರರು ಈಶ್ವರಪುರದಲ್ಲಿರುವ ಮಯೂರಿ ಬಡಾವಣೆಯ ಜೋಶಿ ಮನೆಯತ್ತ ಹೊರಟರು. ಈ ಜೋಷಿ ಅದೆಂತಹ ರಣಹೇಡಿಯೆಂದರೆ ತನಗೆ ಮತಹಾಕಿ ಗೆಲ್ಲಿಸಿದ ಜನರ ಆಕ್ರೋಶಕ್ಕೆ ಬೆದರಿ ಪೊಲೀಸ್ ಕೋಟೆಯನ್ನು ನಿರ್ಮಿಸಿಕೊಂಡಿದ್ದ. ಆತನ ಮನೆ ಇನ್ನು 1 ಕಿ.ಮೀ. ಇದೆ ಎನ್ನುವಾಗಲೇ ಶಾಂಡಿಲ್ಯಾಶ್ರಮದ ಬಳಿ ಪೊಲೀಸರು ಪ್ರತಿಭಟನಾಕಾರರನ್ನು ತಡೆದರು.

ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿಯೂ ನಡೆಯಿತು. ಅಷ್ಟಾದರು 'ಜೋಶಿಗೆ ನಾವು ಮತ ಹಾಕಿದ್ದೇವೆ, ಎಂಪಿ ಮಾಡಿದ್ದೇವೆ. ಅವನ ಮನೆಗೆ ಹೋದರೆ ತೊಂದರೆ ಏನು? ನಮ್ಮನ್ನೇ ಗೂಂಡಾಗಳು ಎನ್ನುತ್ತಾನೆ. ದಿಲ್ಲಿಗೆ ಹೋಗಿದ್ದಾಗ ನಮ್ಮ ಬಗ್ಗೆ ಏನು ಮಾತಾಡಿದ. ಮೋದಿ ಕಿವಿ ಚುಚ್ಚಿ ನಮಗೆ ನೀರು ಕೊಡೋದು ಅಡ್ಡಿ ಮಾಡ್ಯಾನ. ಯಾಕಪ್ಪಾ ಹಿಂಗೆಲ್ಲಾ ಮಾಡ್ಯಾಕ್ಹತ್ತೀಯಾ ಅಂತ ಕೇಳ್ಬೇಕು ಸ್ವಾಮಿ. ನಾವು ಅವರಿಗೇ ಓಟ್ ಹಾಕೇವಿ. ಪೇಪರ್‌ನ್ಯಾಗ್, ಟಿವಿಯಾಗ್ ಮಾತಾಡತಾನ್ ನಮ್ಮ ಜೊತೆಗೆ ಮಾತಾಡಾಕ ಏನ್ ತ್ರಾಸ. ಅವ ನಮ್ಮ ಸಂಸದ ಆದಾನ, ಅವನತ್ರ ಮಾತಾಡೋದೆ ಬ್ಯಾಡ ಅಂದ್ರೆ ನಮ್ಮ ಸಮಸ್ಯೇನ ಇನ್ನ್ಯಾರತ್ರ ಹೇಳ್ಕೊಬೇಕ್ರಿ' ಅನ್ನೋದಷ್ಟೇ ಪ್ರತಿಭಟನಾಕಾರರ ಅಹವಾಲಾಗಿತ್ತು.

ಈ ಚಕಮಕಿಯ ನಡುವೆ ಮನಸೂರ ಮಠದ ಬಸವರಾಜ ದೇವರು, ಸಿದ್ದು ತೇಜಿ, ವೀರಣ್ಣ ಮಳಗಿ, ರಾಜಣ್ಣ ಕೊರವಿ, ಅಮೃತ ಇಜಾರಿ ಪೊಲೀಸರ ಕಣ್ಣು ತಪ್ಪಿಸಿ ಜೋಶಿ ಮನೆಯತ್ತ ನುಗ್ಗಿದರು. ಅವರನ್ನು ಹಿಂಬಾಲಿಸಿ ಸುಮಾರು 300 ಜನ ಹೋರಾಟಗಾರರು ಓಡಿದರು. ಇನ್ನೇನು ಜೋಶಿ ಮನೆಗೆ ನುಗ್ಗಬೇಕು. ಅಷ್ಟರಲ್ಲಿ ಅವನ ಮನೆ ಗೇಟ್ ಬಳಿ ಕಾರ್ಪೊರೇಟರ್ ಸುಧೀರ್ ಸರಾಫ, ಉಮೇಶ ದೋಶಿ, ಜಯತೀರ್ಥ ಕಟ್ಟಿ, ವೆಂಕಟೇಶ ಮೆಸ್ತ್ರಿ ಮುಂತಾದ ಬಿಜೆಪಿ, ಸಂಘ ಪರಿಹಾರದ ಗುಂಪೇ ಸೇರಿತ್ತು. ಒಂದುಕಡೆ ಪೊಲೀಸರು, ಮತ್ತೊಂದು ಕಡೆ ಸಂಘಪರಿವಾರದ ಗೂಂಡಾಗಳು, ಜೋಷಿ ಅದಿನ್ನೆಂತಾ ರಣಹೇಡಿ ಇರಬೇಡ, ಹೋರಾಟಗಾರರನ್ನು ನಿಂದಿಸಿದ ಜೋಷಿ ಬೆಂಬಲಿಗ ಪಡೆ ಅವರನ್ನು ಕಾಂಗ್ರೆಸ್-ಜೆಡಿಎಸ್ ಏಜೆಂಟರೆಂದು ಜರಿದು ಮಾತನಾಡಿ ಉದ್ರೇಕಿಸಲು ಮುಂದಾಗಿದ್ದರು. ಅವರನ್ನು ಹದ್ದುಬಸ್ತಿನಲ್ಲಿಡುವ ಬದಲು ಎಸಿಪಿ ಛಬ್ಬಿ ಅಮಾಯಕ ಪ್ರತಿಭಟನಾನಿರತರನ್ನೇ ಪೊಲೀಸ್ ವ್ಯಾನಿಗೆ ತುಂಬಿಕೊಂಡು 71 ಜನರ ಮೇಲೆ ಸ್ವಯಂದೂರನ್ನು ದಾಖಲಿಸಿಕೊಂಡಿದ್ದಾರೆ. ಇದಕ್ಕೆ ಪ್ರತಿಯಾಗಿ ಹೋರಾಟ ಸಮಿತಿಯವರು ಜೋಶಿ ಬೆಂಬಲಿತ ಸುಧೀರ್, ಸರೂಫ, ಉಮೇಶ್ ದೋಶಿ, ಜಯತೀರ್ಥ, ಕಟ್ಟಿ, ವೆಂಕಟೇಶ ಮೇಲೆ ಲಿಖಿತ ದೂರನ್ನು ದಾಖಲಿಸಿದ್ದಾರೆ. ಇದು ಜೋಶಿಯ ರೈತ ಕಾಳಜಿ. ಇಂತವನ ಸಾರಥ್ಯವಿರುವ ಪಕ್ಷ ನಡೆಸುತ್ತಿರುವ ರೈತ ಚೈತನ್ಯ ಯಾತ್ರೆಯನ್ನು ಜನ ನಂಬಬೇಕು...!

ಇದ್ದುದರಲ್ಲಿ ಕಳಸಾ ಬಂಡೂರಿ ಹೋರಾಟದಿಂದ ರಾಜಕೀಯ ಲಾಭ ಅಂತೇನಾದರು ಸಿಕ್ಕುತ್ತಿದ್ದರೆ ಅದು ಜೆಡಿಎಸ್ ಪಾರ್ಟಿಯವರಿಗೆ ಮಾತ್ರ. ಯಾಕೆಂದರೆ ಅತ್ತ ಕೇಂದ್ರದಲ್ಲಾಗಲಿ, ಇತ್ತ ರಾಜ್ಯ ಸರ್ಕಾರದಲ್ಲಾಗಲಿ ಅಧಿಕಾರ ಹೊಂದಿರದ ಜೆಡಿಎಸ್ ಯಾವ ಮುಜುಗರವಿಲ್ಲದೆ ತೊಡಗಿಸಿಕೊಳ್ಳಲು ಸಾಧ್ಯವಾಗಿದೆ. ಓಲೈಸುವ ಅನಿವಾರ್ಯತೆಯಾಗಲಿ, ತರಾಟೆಗೆ ತೆಗೆದುಕೊಳ್ಳಲು ದುರ್ಜಯಾಗಲಿ ಬೇಕಿಲ್ಲವಾದ್ದರಿಂದ ನವಲಗುಂದದ ಜೆಡಿಎಸ್ ಶಾಸಕ ಕೋನರೆಡ್ಡಿ, ಬಸವರಾಜ್ ಹೊರಟ್ಟಿ ಯಂತವರು ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿ ಕೊಂಡು ಪಕ್ಷಕ್ಕೆ ಇಲ್ಲಿ ನೆಲೆ ಒದಗಿಸಿಕೊಳ್ಳುತ್ತಿದ್ದಾರೆ. ಸಿದ್ದರಾಮಯ್ಯ ಇದನ್ನು ಗಮನಿಸದೇ ಹೋದರೆ ಅದು ಕಾಂಗ್ರೆಸ್ ಪಕ್ಷಕ್ಕೆ ತಗಲುವ ದೊಡ್ಡ ಆಘಾತವೇ ಸರಿ.

■ ಹುಬ್ಬಳ್ಳಿಯಾಂವ

ಶಿವಣ್ಣ ಹಾರ್ಟು ಬೀಟು ಪಡಿಪಾಟು



ಜಿಮ್; ಅಂದರೆ ವ್ಯಾಯಾಮ ಶಾಲೆಗೂ ರಾಜ್ ಕುಟುಂಬಕ್ಕೂ ಅದೇನು ಬಾದರಾಯಣ ಸಂಬಂಧವೊ!

ಜಿಮ್ಮೊಂದರ ಟ್ರೆಡ್‌ಮಿಲ್ ಮೇಲೆಯೇ ಕುಸಿದು ಬಿದ್ದ ರಾಘವೇಂದ್ರ ರಾಜ್‌ಕುಮಾರ್ ಕೈಕೊಟ್ಟ ತನ್ನ ಹೃದಯದ ಆರೈಕೆಗೆಂದು ಪ್ರತಿಷ್ಠಿತ ಸಿಂಗಾಪೂರ್ ಆಸ್ಪತ್ರೆ ಸೇರಿದ್ದು ಹಳೆ ಕತೆ. ಈಗ ಹಿರಿಯಣ್ಣ ಶಿವಣ್ಣನ ಸರದಿ. ಇಡೀ ದಿನದ ನ್ಯೂಸ್ ಚಾನಲ್ಲುಗಳ ವಸ್ತು, ಸಹಸ್ರಾರು ಭಕ್ತಾದಿಗಳ ತಳಮಳ, ಮುಖ್ಯಮಂತ್ರಿ ಸಿದ್ದರಾಮಯ್ಯ ಮೊದಲಾಗಿ ಆರೋಗ್ಯ ಮಂತ್ರಿ ಖಾದರ್, ವಸತಿ ಮಂತ್ರಿ ಅಂಬರೀಷ್ ಇತ್ಯಾದಿಗಳೆಲ್ಲ ಮಲ್ಯ ಆಸ್ಪತ್ರೆಗೆ ದೌಡಾಯಿಸಿದ ರೀತಿ ಮತ್ತು ಇಡೀ ಗಾಂಧಿನಗರದುದ್ದಕ್ಕೂ ಕವಿದ ಕಾರ್ಮೋಡದ ಭೀತಿ; ಎಲ್ಲಕ್ಕೂ ಕಾರಣವಾಗಿದ್ದು ಜಿಮ್ಮು ಮತ್ತು ಕೈಕೊಟ್ಟ ಹಾರ್ಟು!

ಅದು ಯಥಾವತ್ ಶಿವಣ್ಣನ ದಿನಚರಿಯ ಅಕ್ಟೋಬರ್ 6ರ ಮಂಗಳವಾರ ಬೆಳ್ಳಂಬೆಳಗ್ಗೆ. ನಾಗವಾರದ ಮಾನ್ಯತಾ ಟೆಕ್‌ಪಾರ್ಕ್ ಕ್ಯಾಂಪಸ್ ಆವರಣದ ತನ್ನ ವಿಶಾಲ ಬಂಗಲೆಯ ಜಿಮ್‌ನಲ್ಲಿ ಮಾಮೂಲಿನಂತೆ ವ್ಯಾಯಾಮನಿರತ ಶಿವಣ್ಣ ಇದ್ದಕ್ಕಿದ್ದಂತೆ ಎದೆ ಹಿಡಿದು ಕುಸಿದಿದ್ದಾರೆ. ಅದಕ್ಕೂ ಮುನ್ನ ಬರೋಬ್ಬರಿ ಮುಕ್ಕಾಲು ಗಂಟೆ ಕಾಲ ಯೋಗ ಮತ್ತು ಪ್ರಾಣಾಯಾಮವನ್ನೂ ಮುಗಿಸಿದ್ದಾರೆ. ಇದ್ದಕ್ಕಿದ್ದಂತೆ ಎದೆ ಹಿಡಿದುಕೊಂಡಂತಾಗಿ ಉಸಿರಾಟ ಕಷ್ಟವಾಗಿ ಜಿಮ್ಮಿನಿಂದ ನೇರವಾಗಿ ತನ್ನ ಬೆಡ್‌ರೂಮ್ ಹೊಕ್ಕಿದ್ದಾರೆ. ಅನಿರೀಕ್ಷಿತವಾಗಿ ಸಂಭವಿಸಿದ ಅಚಾತುರ್ಯಕ್ಕೆ ಆತಂಕದಿಂದಲೇ ಎದುರಾದ ಪತ್ನಿ ಗೀತಾ ಏನಾಯಿತೆಂದು ಕೇಳುವ ಮೊದಲೇ ಶಿವಣ್ಣ "ಯಾಕೋ ಎದೆ ಹಿಡಿಕೋಬಿಟ್ಟಿದೆ ಕಣೇ...!" ಎಂದಿದ್ದೇ ಅಂಗಾತ ಹಾಸಿಗೆಗೆ ಬಿದ್ದು ಪ್ರಜ್ಞಾಹೀನರಾಗಿದ್ದಾರೆ.

ಅಷ್ಟೇ. ಅದೆಲ್ಲಿದ್ದರೋ ಮಧು ಬಂಗಾರಪ್ಪ ಧಾವಿಸಿದ್ದು ಪತ್ನಿ ಗೀತಾ ಸೇರಿದಂತೆ ಇಡೀ ಬಳಗ ಪೂರ್ತಿ ಹೆಬ್ಬಾಳದ ಕೊಲಂಬಿಯಾ ಆಸ್ಪತ್ರೆಗೆ ಪ್ರಜ್ಞಾಹೀನ ಶಿವಣ್ಣನನ್ನು ಸಾಗಿಸಿದ್ದು ಅಲ್ಲಿ ಏನೇನೋ ಪರೀಕ್ಷೆ ಚಿಕಿತ್ಸೆಯ ನಂತರ ತಮ್ಮಿಂದೇನೂ ಸಾಧ್ಯವಿಲ್ಲ ಎಂಬಂತೆ ಕೊಲಂಬಿಯಾದ ಡಾಕ್ಟರ್‌ಗಳು ಕೈಚೆಲ್ಲಿದ್ದು, ಆನಂತರ ಮಲ್ಯ ಆಸ್ಪತ್ರೆಗೆ ಅರೆಪ್ರಜ್ಞಾವಸ್ಥೆಯಲ್ಲೇ ಶಿವಣ್ಣನನ್ನು ಹೊತ್ತು ತಂದದ್ದು, ಅಲ್ಲಿ ಗಂಟೆಗಟ್ಟಲೇ ಚಿಕಿತ್ಸೆಯ ನಂತರ ಐಸಿಯುಗೆ ರವಾನಿಸಿದ್ದು, ಆತುರಕ್ಕೆ ಬಿದ್ದ ನ್ಯೂಸ್ ಚಾನಲ್ಲುಗಳು ಇದನ್ನೇ ಹಾರ್ಟ್ ಅಟ್ಯಾಕಂತೆ, ಬದುಕುಳಿಯುವುದೇ ಕಷ್ಟವಂತೆ, ಅಳಿವು ಉಳಿವಿನ ನಡುವೆ ಶಿವಣ್ಣ ಸೆಣಸಾಡುತ್ತಿದ್ದಾರಂತೆ ಎಂದೆಲ್ಲ ಬ್ರೇಕಿಂಗ್ ನ್ಯೂಸ್ ಬೊಬ್ಬೆಯಿಟ್ಟದ್ದೇ ಬಂತು.

ರಾಜ್ ಬಂಗಲೆ ಇಬ್ಭಾಗ!

ಸದ್ಯ ಶಿವಣ್ಣ ಅಪಾಯದಿಂದ ಬಚಾವು. ಹಾಗೆಂದು ಮಲ್ಯ ಆಸ್ಪತ್ರೆಯ ಕಾರ್ಡಿಯಾಲಜಿಸ್ಟ್ ಡಾ. ಶ್ರೀನಿವಾಸ್ ಆಣೆ ಪ್ರಮಾಣದ ಟೈಪಿನಲ್ಲೇ ಘೋಷಣೆ ಮಾಡುತ್ತಾರೆ. ಅವರ ಪ್ರಕಾರ ಆ್ಯಂಜಿಯೋಗ್ರಾಮ್ ನಡೆಸಲಾಗಿದೆ. ಜೀವಕ್ಕೆ ಯಾವುದೇ ಅಪತ್ತಿಲ್ಲ, ಮಾನಸಿಕ ಒತ್ತಡ ಅಥವಾ ದೈಹಿಕ ಬಳಲಿಕೆಯಿಂದಾಗಿ ಎದೆನೋವು ಬಂದಿರಬೇಕು. ಅದಕ್ಕೆ ಒಂದೆರಡು ದಿನ ವಿಶ್ರಾಂತಿಯ ಅಗತ್ಯವಿದೆ. ಇನ್ನು ಎರಡು ಅಥವಾ ಮೂರು ದಿನಗಳ ನಂತರವಷ್ಟೇ ಅವರನ್ನು ಆಸ್ಪತ್ರೆಯಿಂದ ಬಿಡುಗಡೆಗೊಳಿಸಲು ಸಾಧ್ಯ...!

ಅಂದರೆ ಶಿವಣ್ಣನಿಗೆ ಈಗಾಗಲೇ ಆ್ಯಂಜಿಯೋಗ್ರಾಮ್ ನಡೆಸಲಾಗಿದೆ. ಅಲ್ಲಿಗದು ಹೃದಯದ ಸಮಸ್ಯೆ ಎಂಬುದಂತೂ ಸತ್ಯ. ಅದಕ್ಕೆ ಕಾರಣ ಮಾತ್ರ ಮಾನಸಿಕ ಒತ್ತಡ ಮತ್ತು ದೈಹಿಕ ಬಳಲಿಕೆ?

ಯಾರೋ ರಾಜಕಾರಣಿಯಂತೆ, ಮಾರ್ವಾಡಿಯಂತೆ, ಸಾಲಗಾರನಂತೆ ವ್ಯಾಪಾರಿಯಂತೆ ಅನಗತ್ಯ ಟೆನ್ಷನ್ನು, ತಾಪತ್ರಯ, ಪಜೀತಿಗೆ ಬಿದ್ದು ಹೈರಾಣಾಗುವ ಹರಕತ್ತು ಶಿವಣ್ಣನಿಗಿಲ್ಲ, ಶಿವಣ್ಣ ವರನಟ ರಾಜ್ ಉತ್ತರಾಧಿಕಾರಿ. ಲಕ್ಷಾಂತರ ಅಭಿಮಾನಿಗಳುಂಟು. ಸಾಲುಗಟ್ಟಿ ನಿಂತ ನಿರ್ಮಾಪಕರುಂಟು. ಕೀರ್ತಿ, ಆಸ್ತಿ, ಅಂತಸ್ತು, ಸುಖ, ಸಂಪತ್ತು ಎಲ್ಲವೂ ಇದ್ದೂ ಶಿವಣ್ಣನಿಗೆಂಥ ಬಳಲಿಕೆ ಮನೋ ಜಂಜಡಿಕೆ?

ರಾಜ್ ಪುತ್ರರ ಪೈಕಿ ಪುನೀತ್ ಮತ್ತು ರಾಘವೇಂದ್ರ ರಾಜ್‌ಕುಮಾರ್ ಪರಿಸ್ಥಿತಿಗಳೇ ಒಂಥರದ್ದಾದರೆ ಶಿವಣ್ಣನದ್ದು ತೀರ ವಿಭಿನ್ನ ವಿಚಿತ್ರ ಮನಸ್ಥಿತಿ ಮತ್ತು ಪರಿಸ್ಥಿತಿ. ಗಾಂಧಿನಗರದ ಹೆಡ್ಡಾಫೀಸು ವಜ್ರೇಶ್ವರಿ ಕಂಬೈನ್ಸ್‌ಗೂ ಶಿವಣ್ಣನಿಗೂ ಸಂಬಂಧವಿಲ್ಲ, ಸದಾಶಿವನಗರದ ರಾಜ್ ಬಂಗಲೆ ನೆಲಸಮಗೊಂಡು ಇಬ್ಭಾಗವಾಗುವುದಕ್ಕೂ ಮೊದಲೇ ಶಿವಣ್ಣ ಪ್ರತ್ಯೇಕಗೊಂಡಾಗಿತ್ತು, ನಾಗವಾರದ ಮಾನ್ಯತಾ ಟೆಕ್‌ಪಾರ್ಕ್ ಆವರಣದಲ್ಲೇ ಬರೋಬ್ಬರಿ ಒಂದೆಕರೆ ವಿಸ್ತೀರ್ಣದ ಬಂಗಲೆಯೆಬ್ಬಿಸಿ ಅಲ್ಲೇ ಸ್ವಿಮ್ಮಿಂಗ್‌ಪೂಲ್, ಜಿಮ್ಮು, ವಾಕಿಂಗ್ ಟ್ರ್ಯಾಕು, ಗಾರ್ಡನ್ನು, ಹೋಮ್ ಥಿಯೇಟರ್; ಎಲ್ಲವನ್ನೂ ನಿರ್ಮಿಸಿಕೊಂಡೇ ಅಣಿಯಾದ ಶಿವಣ್ಣ ಪಾರ್ವತಮ್ಮ ಪಾಳೆಪಟ್ಟಿಯಿಂದ ಯಾವತ್ತಿಗೂ ಹೊರಗಿದ್ದವರೆ.

ಗೀತಕ್ಕನ ಬಂಡಾಯ

ಅದಕ್ಕೆ ಕಾರಣ ಗೀತಕ್ಕ. ಆಕೆ ಮಿನಿ ಪಾರ್ವತಮ್ಮನಂತೆ. ಯಾವತ್ತಿಗೂ ಅತ್ತೆ ಮನೆಯ ಹಂಗಿಗೆ ಬಿದ್ದವರಲ್ಲ. ತನ್ನದೇ ಪ್ರತ್ಯೇಕ ಸಾಮ್ರಾಜ್ಯ ಬಿಜಿನೆಸ್, ಔಟ್‌ಡೋರ್ ಯೂನಿಟ್, ಸಿನಿಮಾ ಪ್ರೊಡಕ್ಷನ್ ಹೀಗೆ ರಾಜ್ ಕುಟುಂಬಕ್ಕೆ ತೀರ ವಿಭಿನ್ನವಾಗಿ ಸ್ವತಂತ್ರವಾಗಿ ಅಸ್ತಿತ್ವಕ್ಕೆ ಬಂದದ್ದು ಗೀತಕ್ಕ ಶಿವಣ್ಣರ ಸಂಸ್ಥಾನ. 2013ರ ವರೆಗೂ ರಾಜ್ ಫ್ಯಾಮಿಲಿಯೆಂದರೆ ಅದಕ್ಕೆ ಪಾರ್ವತಮ್ಮನವರೇ ಸುಪ್ರೀಂ ಎಂದಿದ್ದದ್ದು ಮೊಟ್ಟ ಮೊದಲ ಬಾರಿಗೆ ಅಪಸ್ವ... ಕೇಳಿ ಬಂದಿದ್ದು ಗೀತಕ್ಕ ರಾಜಕೀಯ ಪ್ರವೇಶದ ಮು... ಮಾಜಿ ಮುಖ್ಯಮಂತ್ರಿ ಯಡ್ಡಿ ವಿರುದ್ಧ ಜೆಡಿ... ಅಭ್ಯರ್ಥಿಯಾಗಿ ಶಿವಮೊಗ್ಗ ಲೋಕಸಭಾ ಕ್ಷೇತ್ರ... ಕಣಕ್ಕಿಳಿದ ಗೀತಕ್ಕನ ಬೆನ್ನಿಗಿದ್ದದ್ದು ಮಧು ಬಂಗಾ... ತನ್ನ ಒಡಹುಟ್ಟಿದ ಅಣ್ಣ ಕುಮಾರ್ ಬಂಗಾರಪ್ಪ... ರಾಜಕೀಯವಾಗಿ ನಿರ್ನಾಮ ಮಾಡಲು ಮಧು ... ಗೀತಕ್ಕನನ್ನೇ ಎತ್ತಿಕಟ್ಟಿದ್ದ. ಬಂಗಾರಪ್ಪನವರ ಕೌಟುಂ... ತಾಪತ್ರಯ ಅಂತಿಮವಾಗಿ ಹಾನಿಗೊಳಿಸಿದ್ದು ... ಕುಟುಂಬದ ಏಣಿಯನ್ನು. ಅದೀಗ ಶಿವಣ್ಣನ ಪ್ರಾ... ಎರವಾಗಿ ಪರಿಣಮಿಸಿದೆ.

ಮೇಲುನೋಟಕ್ಕೆ ಶಿವಮೊಗ್ಗದಲ್ಲಿ ಗೀತಾ ಚುನಾ... ನಿಲ್ಲುವುದಕ್ಕೂ, ಶಿವಣ್ಣನ ಮನೋಬಳಲಿಕೆ... ಸಂಬಂಧವಿಲ್ಲದಿರಬಹುದು. ಆದರೆ ಸೂಕ್ಷ್ಮ... ಗಮನಿಸಿದರೆ ಶಿವಣ್ಣನ ತಾಪತ್ರಯಗಳ ಮೂಲವಿರುವ... ಆತನ ಸಾಂಸಾರಿಕ ಜಂಜಾಟದಲ್ಲಿ!

ಗೀತಕ್ಕನ ಪರವಾಗಿ ತಾನು ಬೀದಿಗಿಳಿದೆನೆಂ... ಯಡಿಯೂರಪ್ಪನ ಸೋಲು ಗ್ಯಾರಂಟಿಯೆಂದು ಅದ... ಶಿವಣ್ಣನ ತಲೆತಿಕ್ಕಿದರೋ ಗೊತ್ತಿಲ್ಲ, ಗಾಂಧಿನಗ... ಹುಡಿಪುಡಿ ಕಲಾವಿದರಿಂದ ಹಿಡಿದು ದುನಿಯಾ ... ಯಶ್, ಕಿಟ್ಟಿ, ಲೂಸ್ ಮಾದ ಇತ್ಯಾದಿಗಳೆಲ್ಲ ಶಿವಮ... ಎಲೆಕ್ಷನ್ನಿನ ಪ್ರಚಾರಕ್ಕೆಂದು ಬೀದಿಗಿಳಿದರು. ಆದರೆ ಪುನಿ... ಆಗಲಿ ರಾಘಣ್ಣ ಆಗಲಿ ಅಪ್ಪಿತಪ್ಪಿಯೂ ಅಖಾಡಕ್ಕಿಳಿಯ... ಕನಿಷ್ಠ ಪಾರ್ವತಮ್ಮ ಶಿವಮೊಗ್ಗಕ್ಕೆ ಬಂದು ಮು... ತೋರಿಸಿದ್ದರೆ ಏನಾಗುತ್ತಿತ್ತೋ. ರಾಜ್ ಹೆಣ್ಣುಮಕ್ಕಳ ... ಲಕ್ಷ್ಮಿ ಪಾರ್ವತಮ್ಮನವರ ಎರಡನೇ ತ...



ಆಸ್ಪತ್ರೆ ಕಿಟಕಿಯಿಂದ ... ಶಿವಣ್ಣ

ಗೋವಿಂದರಾಜುವನ್ನು ಮದುವೆಯಾದರೆ ತಂ... ಪೂರ್ಣಿಮಾ ರಾಮ್‌ಕುಮಾರ್ ಕೈಹಿಡಿದಿದ್ದಾರೆ. ಕನಿ... ತಂಗಿಯರಾದರೂ ತನ್ನ ಬೆಂಬಲಕ್ಕೆ ನಿಲ್ಲಬಹುದೆಂಬ ನಿರೀ... ಶಿವಣ್ಣನಿಗಿತ್ತು.

ಶಿವಮೊಗ್ಗ ಸೋಲು

ಪೂರ್ಣಿಮಾ ಮತ್ತು ಲಕ್ಷ್ಮಿ ಶಿವಮೊಗ್ಗಕ್ಕೆ ಬಂದ... ಅತ್ತಿಗೆಯ ಪರ ವಹಿಸುತ್ತಾರೆಂಬ ಶಿವಣ್ಣನ ನಿರೀ... ಸುಳ್ಳಾಗಿತ್ತು. ಮೋದಿ ಅಲೆ, ಆರೆಸ್ಸೆಸ್-ಬಿಜೆಪಿ ವ್ಯೂ... ತಂತ್ರ, ಕಾಂಗ್ರೆಸ್‌ನ ಅಧಿಕಾರ ಬಲ, ಯಡ್ಡಿಯ ರೊಕ್ಕ... ಮುಂದೆ ಜೆಡಿಎಸ್ ತಾಕತ್ತು, ಬಂಗಾರಪ್ಪ ವರ್ಚಸ್ಸು, ಶಿವಣ್ಣ... ಇಮೇಜು ಏನೊಂದೂ ಪ್ರಯೋಜನಕ್ಕೆ ಬರಲೇ ಇಲ್ಲ... ರಾಜ್ ಕುಟುಂಬದ ಸೊಸೆ ಎಂಬುದು ಬೆಂಗಳೂರಿ... ಮಟ್ಟಿಗೆ ದೊಡ್ಡಸ್ಥಿಕೆಯಿರಬಹುದು. ಆದರೆ ಶಿವಮೊಗ್ಗ... ಮತದಾರರ ಪಾಲಿಗೆ 'ಬಂ' ಮಗಳಾದರೇನು? ರಾಜ... ಕುಟುಂಬದ ಸೊಸೆಯಾದರೇನು?

ಗೀತಕ್ಕ ಮೂರನೇ ಸ್ಥಾನಕ್ಕಷ್ಟೇ ತೃಪ್ತಿ ಪಡಬೇಕಾಯಿತು... 'ಬಂ' ಮಕ್ಕಳ ಕೋ... ಜಗಳದ ಬಗ್ಗೆಯೇ ಜನಕ್ಕೆ ಅಸಹ... ಶುರುವಾಗಿತ್ತು, ಕು...ರ್ ಬಂಗಾರಪ್ಪ ಒಳಗಿಂದೊಳಗೇ... ಅಕ್ಕನ ವಿರುದ್ಧ ... ಮಸೆದದ್ದು, ಅಪಾರ ಜನ... ಬೆಂಬಲವಿದ್ದರೂ ಅ...ನ್ನು ಮತಗಳನ್ನಾಗಿ ಪರಿವರ್ತಿಸಬಲ್ಲ... ಕೌಶಲ್ಯ ಮಧು ಬ...ಪ್ಪನಲ್ಲಿಲ್ಲದೇ ಹೋದದ್ದು ಗೀತಕ್ಕನ... ಹೀನಾಯ ಸೋ...ರಿಣಮಿಸಿತ್ತು.

ನೇರವಾಗಿ ಬ...ಾರಪ್ಪ ಕುಟುಂಬ ಶಿವಮೊಗ್ಗದ... ಕಣದಲ್ಲಿತ್ತಾದರೂ ...ೇರಾಟದ ಸೇನಾನಿಯಂತಿದ್ದದ್ದು... ಶಿವಣ್ಣನೆ. ಅದು ...ಣ್ಣನಿಗಾದ ಮೊದಲ ಸೋಲಿನ... ಅನುಭವ. ಪತ್ನಿ...ನ್ನು ಗೆಲ್ಲಿಸಿಕೊಳ್ಳಲು ಇನ್ನಿಲ್ಲದಂತೆ... ಹಣಗಾಡಿ ಹೈರಾ... ಶಿವಣ್ಣ ದೊಡ್ಡ ಮೊತ್ತವನ್ನಲ್ಲದೆ... ಹೋದರೂ ಗ...ನೀಯ ಪ್ರಮಾಣದ ಹಣ... ಕಳಕೊಂಡಿದ್ದಂತೂ ...ಳ್ಳಲ್ಲ.

ಶಿವಮೊಗ್ಗ ಸೋ...ನ ಬೆನ್ನಲ್ಲೇ ಎದುರಾದ ಮತ್ತೊಂದು ಸಮಸ್ಯೆ ಮಗಳು ನಿರುಪಮಾಳ ನಿಶ್ಚಿತಾರ್ಥ. ಅದಕ್ಕೂ...



ಮಗಳ ಮದುವೆಯಲ್ಲಿ ಶಿವಣ್ಣ



...ಆಹ್ವಾನ ಪತ್ರಿಕೆ ನೀಡಿದ್ದು



ರಜನಿಗೆ ಮಗಳ ಮದುವೆಯ ಕರೆ

...ಓದು, ಪರೀಕ್ಷೆಯ ತಯಾರಿ, ಪ್ರೀತಿಸಿದ ...ಷ್‌ನ ಕೌಟುಂಬಿಕ ತಾಪತ್ರಯ ಎಲ್ಲಕ್ಕೂ ...ಕೊಡಬೇಕಾಯಿತು. ಹೇಗೋ ಪರೀಕ್ಷೆ ...ತಾರ್ಥವೂ ನಡೆದು ಇನ್ನೇನು ಮದುವೆ ...ತೆನ್ನುವ ಹೊತ್ತಿಗೆ ಅಸಲೀ ಸಮಸ್ಯೆ ... ಅದು ಪ್ರತಿಯೊಂದನ್ನೂ ತಾನೇ ...ದ ಅನಿವಾರ್ಯ. ತಮ್ಮಂದಿರಾದ ಪುನೀತ್, ...ಯರು, ತಾಯಿ ಪಾರ್ವತಮ್ಮ ಯಾರನ್ನೂ ...ವೆಯ ವಿಷಯಕ್ಕೆ ಶಿವಣ್ಣ ಅವಲಂಬಿಸಲಿಲ್ಲ. ... ತಮ್ಮಂದಿರು, ತಂಗಿಯರು, ತಾಯಿ ... ಈ ವಿಷಯದಲ್ಲಿ ಅತೀ ಆಸಕ್ತಿ ತೋರಲಿಲ್ಲ.

ದಿಗ್ಗಜರ ಗುರು

... ಚುನಾವಣೆಯ ಮೂಲಕ ಬಹಿರಂಗಗೊಂಡ ...ಲಿಯ ಒಡಕು ಶಿವಣ್ಣನ ಮಗಳ ... ಮತ್ತಷ್ಟು ದೊಡ್ಡದಾಗಿತ್ತು. ಅತ್ತಿಗೆಯ ...ರಕ್ಕೆ ಬರಲಿಲ್ಲ ಮತ್ತು ಗೀತಾ ರಾಜಕೀಯ ...ಲ ವ್ಯಕ್ತಪಡಿಸಲಿಲ್ಲ ಎಂಬ ಒಂದೇ ಕಾರಣಕ್ಕೆ ... ಲಕ್ಷ್ಮಿ ಮತ್ತು ಪೂರ್ಣಿಮಾರನ್ನು ಶಿವಣ್ಣ ...ವೆಗೆ ಕರೆಯಲೇ ಇಲ್ಲ. "ಅವರೂ ನಿನ್ನ ...ನೋ. ಅವರನ್ನು ಮದುವೆಗೆ ಕರೆಯೋದು ಅಲ್ಲವೇನೋ..." ಎಂದು ಪಾರ್ವತಮ್ಮ ...ಡಿದ್ದಕ್ಕೆ "ಬೇಕಿದ್ರೆ ಅವರೇ ಬರಬೇಕಪ್ಪಾ, ...ಟೇಷನ್ ಕೊಟ್ಟು ಕರೀಬೇಕಾ? ಅವರನ್ನು ...ೋದು ನಿನಗೆ ಅಷ್ಟೊಂದು ಕೆಟ್ಟದ್ದು ... ನೀನೂ ಬರಬೇಡ. ಅದಕ್ಕೆ ನಾನೇನೂ ...ಳ್ಳಲ್ಲ..." ಎಂದರಂತೆ ಶಿವಣ್ಣ!

...ಎಷ್ಟು ಸತ್ಯವೋ ಗೊತ್ತಿಲ್ಲ. ಹಾಗೆಂದು ...ಂದು ರಾಜ್ ಕುಟುಂಬದ ಸುತ್ತ ಹೊಗೆಯಾಡಿದ್ದಂತೂ ನಿಜ. ಹಾಗೇ ಏಕಾಂಗಿಯಾಗಿ ಅಂಥಾ ಮದುವೆಯೊಂದನ್ನು ನಿಭಾಯಿಸುವುದು ಸಾಧ್ಯವಿಲ್ಲ ಎಂಬುದು ಅರ್ಥವಾಗುವ ಹೊತ್ತಿಗೆ ಕಾಲ ಮಿಂಚಿತ್ತು. ಸ್ವತಃ ಶಿವಣ್ಣನೇ ಹೇಳಿಕೊಂಡಂತೆ ಅದು 25 ಕೋಟಿಯ ಮದುವೆ!



ಆಸ್ಪತ್ರೆಗೆ ಧಾವಿಸಿದ ಪುನೀತ್

ತಿಂಗಳು ಪೂರ್ತಿ ಅರಮನೆ ಮೈದಾನದಲ್ಲಿ ಐಷಾರಾಮಿ ಸಿನಿಮಾ ಸೆಟ್ಟೊಂದನ್ನು ಹಾಕಿ ಅದನ್ನೇ ಮದುವೆ ಮಂಟಪವಾಗಿ ಪರಿವರ್ತಿಸಿ ದಿನಕ್ಕೊಂದು ಶಾಸ್ತ್ರ ತರಹೇವಾರಿ ಖಾದ್ಯ, ಸಿಕ್ಕಸಿಕ್ಕವರಿಗೆಲ್ಲ ಬಟ್ಟೆಬರೆ, ಒಡವೆ, ಅತಿಥಿಗಳಿಗೆಂದೇ ವಿಶಿಷ್ಟ ವ್ಯವಸ್ಥೆ ಎಲ್ಲವನ್ನೂ ಮಾಡಿಕೊಂಡ ಶಿವಣ್ಣ ಇದಕ್ಕೊಂದು ನಡೆಸಿದ ತಯಾರಿಯಿತ್ತಲ್ಲ; ಅದೇ ಹೆಚ್ಚೂಕಮ್ಮಿ ಮೂರೂವರೆ ತಿಂಗಳಿನಷ್ಟಾಗಿತ್ತು.

ಬಾಲಿವುಡ್‌ನ ದಿಗ್ಗಜರಿಂದ ಹಿಡಿದು ತೆಲುಗು, ತಮಿಳು, ಮಲೆಯಾಳಂ ಚಿತ್ರರಂಗದ ದಿಗ್ಗಜರೆಲ್ಲರನ್ನೂ ಮಗಳ ಮದುವೆಗೆ ಬರುವಂತೆ ಮಾಡುವ ಮಹತ್ವಾಕಾಂಕ್ಷೆ ಹೊತ್ತೇ ತಿಂಗಳು ಪೂರ್ತಿ ಆಹ್ವಾನ ಪತ್ರಿಕೆ ವಿತರಣೆಗೆಂದು ಶಿವಣ್ಣ ಹೆಣಗಾಡಿದ್ದರು. ಖುದ್ದಾಗಿ ಮುಂಬಯಿಗೆ ಹೋಗಿ ಅಮಿತಾಬ್‌ರನ್ನೇ ಕಂಡು ಮಗಳ ಮದುವೆಯ ಆಹ್ವಾನ ಪತ್ರಿಕೆಯಿತ್ತರು. ಅಮಿತಾಬ್ ಅಕ್ಕರೆಯಿಂದಲೇ ಬರಮಾಡಿಕೊಂಡರು. ಪ್ರೀತಿಯಿಂದಲೇ ಮಾತನಾಡಿಸಿದರು. ಅಮಿತಾಬ್ ಮನೆಗೆ ಹೋಗಿ ಮಗಳ ಮದುವೆಯ ಕಾರ್ಡ್ ಕೊಟ್ಟ ಶಿವಣ್ಣನ ಫೋಟೋ ಹಾಕಿದ ಪತ್ರಿಕೆಗಳು ಅದನ್ನೇ ದೊಡ್ಡ ಸುದ್ದಿ ಮಾಡಿದವು.

ಹಾಗೇ ತೆಲುಗಿನ ದೈತ್ಯ ಚಿರಂಜೀವಿಯನ್ನೂ ಕಂಡು ಆಹ್ವಾನ ಪತ್ರಿಕೆ ನೀಡಿದ್ದು ಒಂದು ವಾರ ಪೂರ್ತಿ ಚೆನ್ನೈನಲ್ಲೇ ತಂಗಿದ್ದು ಸೂಪರ್‌ಸ್ಟಾರ್ ರಜನಿಕಾಂತ್, ಕಮಲ್‌ಹಾಸನ್, ವಿಜಯ್, ವಿಕ್ರಂ ಎಲ್ಲರನ್ನೂ ಕಂಡು ಆಹ್ವಾನ ಪತ್ರಿಕೆ ಕೊಟ್ಟ ಸುದ್ದಿ ಫೋಟೋ ಸಮೇತ ಪ್ರಕಟಗೊಂಡಿತ್ತು. ಮಲೆಯಾಳಂನ ಮಮ್ಮುಟ್ಟಿ, ಮೋಹನ್ ಲಾಲ್‌ಗೂ ಶಿವಣ್ಣ ಖುದ್ದಾಗಿಯೇ ಹೋಗಿ ಆಹ್ವಾನ ಪತ್ರಿಕೆ ಕೊಟ್ಟು ಬಂದಿದ್ದರು. ಬೆಂಗಳೂರಿನ ಅರಮನೆ ಮೈದಾನದಲ್ಲಿ ಮದುವೆಯ ದಿನ ಅತಿಥಿಗಣ್ಯರ ವಿರಾಮಕ್ಕೆಂದೇ ಒಂದಲ್ಲ ಎರಡಲ್ಲ ಬರೋಬ್ಬರಿ ಐದು ಐಷಾರಾಮೀ ಕ್ಯಾರಾವಾನ್‌ಗಳನ್ನು ನಿಲ್ಲಿಸಲಾಗಿತ್ತು. ಅಮಿತಾಬ್ ಸೇರಿದಂತೆ ಸೂಪರ್‌ಸ್ಟಾರ್ ರಜನಿ, ಕಮಲ್ ಹಾಸನ್, ಚಿರಂಜೀವಿ, ಮೋಹನ್‌ಲಾಲ್, ಮಮ್ಮುಟ್ಟಿ ಎಲ್ಲರೂ ಬರುತ್ತಾರೆಂದೇ ಹಾಕಿದ ಶಿವಣ್ಣನ ಲೆಕ್ಕಾಚಾರ ತಲೆಕೆಳಕಾಗಿ ಹೋಯಿತು.

ಬಂದದ್ದು ಅಕ್ಕಿನೇನಿ ನಾಗಾರ್ಜುನ, ಡ್ಯಾನ್ಸರ್ ಪ್ರಭುದೇವ, ಕನ್ನಡದ ಸ್ಟಾರ್‌ಗಳ ಹೊರತಾಗಿ ನಿರೀಕ್ಷಿಸಿದ್ದ ಬಹುತೇಕ ದಿಗ್ಗಜರ್‍ಯಾರೂ ಬರಲೇ ಇಲ್ಲ. ಹಾಗಂತ ಶಿವಣ್ಣ ತಲೆಕೆಡಿಸಿಕೊಳ್ಳಲಿಲ್ಲ. ಮದುವೆ ಅದ್ದೂರಿಯಾಗೇ ನಡೆಯಿತು. ಕರ್ನಾಟಕದ ಮಟ್ಟಿಗೆ ಅಪರೂಪದ ಮದುವೆ ಎಂಬಂತೆಯೇ ಮೀಡಿಯಾಗಳು ಬಿಂಬಿಸಿದ್ದವು. ಅಮಿತಾಬ್, ಚಿರಂಜೀವಿ, ರಜನಿಕಾಂತ್, ಕಮಲ್, ಮಮ್ಮುಟ್ಟಿ ಮುಂತಾದವರೆಲ್ಲಾ ಬಂದೇ ಬರುತ್ತಾರೆಂದು ಶಿವಣ್ಣನ ನಿರೀಕ್ಷೆ ಹುಸಿಯಾಗಿದ್ದಕ್ಕಿಂತಲೂ ಎಲ್ಲರನ್ನು ಆಹ್ವಾನಿಸಲು ಮುಂಬಯಿ, ಚೆನ್ನೈ, ದೆಹಲಿ, ಕೇರಳಗಳಲ್ಲಿ ಸುತ್ತಾಡಿದ್ದೇ ಶಿವಣ್ಣರನ್ನು ಹೈರಾಣಾಗಿಸಿತ್ತು.

ಗಾಂಧಿನಗರದ ಪ್ರತಿಯೊಬ್ಬರಿಗೂ ಖುದ್ದು ಶಿವಣ್ಣನೇ ಬಂದು ಆಹ್ವಾನ ಪತ್ರಿಕೆ ನೀಡಿದ್ದರು. ಮದುವೆ ಮುಗಿಯುವ ಹೊತ್ತಿಗೆ ಅಕ್ಷರಶಃ ಶಿವಣ್ಣ ಹೈರಾಣಾಗಿಹೋಗಿದ್ದರು. ಇದು ಕೇವಲ ಮಗಳ ಮದುವೆಗಷ್ಟೇ ಸೀಮಿತವಾಗಿದ್ದರೆ ಆ ಮಾತು ಬೇರೆ. ಮದುವೆ ಮುಗಿಯಿತಾದರೂ ಅದಕ್ಕೆಂದು ವ್ಯಯಿಸಿದ ಶ್ರಮ, ಧನ, ಸಮಯದ ಲೆಕ್ಕಾಚಾರವಿನ್ನೂ ಚುಕ್ತಾಗೊಂಡಿರಲಿಲ್ಲ. ಬರೋಬ್ಬರಿ 25 ಕೋಟಿಯ ಮದುವೆ ಎಂದರೆ ಕಮ್ಮಿಯ ಮಾತೇ?

ಮದುವೆಯ ಖರ್ಚಿಗೆ ಅಂತಲೇ ಗಾಂಧಿನಗರದ ನಾಲ್ಕೈದು ಮಂದಿ ನಿರ್ಮಾಪಕರನ್ನು ಕರೆದು ಮುಂಗಡ ಕಾಲ್‌ಶೀಟ್ ಕೊಟ್ಟು ತಲಾ ನಾಲ್ಕೋ ಐದೋ ಕೋಟಿಯ ಅಡ್ವಾನ್ಸ್ ಪಡೆದಿದ್ದರಂತೆ. ಈ ಪೈಕಿ ರಾಕ್‌ಲೈನ್ ಒಬ್ಬರೇ ಐದು ಕೋಟಿಯ ಅಡ್ವಾನ್ಸ್ ಕೊಟ್ಟಿದ್ದರಂತೆ. ಕೆ. ಮಂಜು ಸೇರಿದಂತೆ ಇನ್ನೂ ಕೆಲ ನಿರ್ಮಾಪಕರಿಂದ ಮುಂಗಡವಾಗಿ ಮಗಳ ಮದುವೆ ಖರ್ಚಿಗೆಂದು ಅಡ್ವಾನ್ಸ್ ಪಡೆದಿದ್ದರೆಂಬ ವದಂತಿಯೂ ಹಬ್ಬಿತ್ತು.

ಇದು ಸಾಲದೆಂಬಂತೆ ಒಂದರ ಮೇಲೊಂದು ಸಿನಿಮಾಗಳ ಶೂಟಿಂಗ್ ಭರಾಟೆಗೂ ಶಿವಣ್ಣ ತಲೆಕೊಟ್ಟಿದ್ದಾರೆ. ಸದ್ಯ ನಿರ್ಮಾಣ ಹಂತದಲ್ಲಿರುವ ಚಿತ್ರಗಳ ಶೂಟಿಂಗ್ ಹೆಣಗಾಟ, ಇದು ಸಾಲದೆಂಬಂತೆ ಕಾಲ್‌ಶೀಟ್ ಕೊಟ್ಟು ಪಡೆದ ಅಡ್ವಾನ್ಸ್‌ಗಳ ತಲೆಬಿಸಿ, ಈ ಮಧ್ಯೆ ಮಗಳ ಮದುವೆಯ ಜಂಜಾಟ, ಅದಕ್ಕೆಂದು ಇಡೀ ದೇಶ ಸುತ್ತಿ ಬಂದು ಆಹ್ವಾನ ಪತ್ರಿಕೆ ಕೊಟ್ಟು ಬಳಲಿಕೆ, ಇದೆಲ್ಲಕ್ಕೂ ಮುನ್ನ ಶಿವಮೊಗ್ಗದ ಚುನಾವಣೆಗೆಂದು ಓಡಾಡಿದ ಸುಸ್ತು ಮತ್ತು ತಲೆಬಿಸಿ ಎಲ್ಲವೂ ಶಿವಣ್ಣನಂಥ ನಟನೊಬ್ಬನಿಗೆ ಭರಿಸಲಾಗದ ತಾಪತ್ರಯಗಳೆ.

ಆ ಹಾಟ ಕೆಲಸಗಳನ್ನೆಲ್ಲ ತಾನೊಬ್ಬನೇ ಹೊತ್ತುಕೊಂಡು ಹೈರಾಣಾದ ಶಿವಣ್ಣನದ್ದು ಏಕಾಂಗಿ ಹೋರಾಟ. ತಾಕತ್ತು ಮೀರಿದ ಹೊರೆ ಹೊತ್ತ ನಟ. ರಾಜ್ ಕುಟುಂಬದ ಸಣ್ಣಪುಟ್ಟ ಅಪಶಕುನಗಳೂ ಕೂಡ ಪ್ರಾಣ-ಜೀವದ ಪಶ್ನೆಗಳಾಗಿ ಅವತರಿಸಬಹುದೆಂಬ ನಿರೀಕ್ಷೆ ಯಾರಿಗಿತ್ತು?

■ ರಾ. ಸೋಮನಾಥ್


...ಸಿದ ಬಲೆಯೊಳಗೆ ತಾನೇ ಬಂಧಿಯಾಗಿ!

...ಯಿಸಿ ಮೇಲೆಳೆದುಕೊಂಡಂತೆ ಸಿಕ್ಕಸಿಕ್ಕವರಿಗೆಲ್ಲಾ ...ಕೊಡುವ ಶಿವಣ್ಣನ ವ್ಯಾವಹಾರಿಕ ತಂತ್ರವೀಗ ...ತ್ತಾಗಿ ಪರಿಣಮಿಸಿದೆಯೆ?

...ತ್ತದ ಗಾಂಧಿನಗರ. ಕತೆ, ತಾಂತ್ರಿಕತೆ, ...ತಲೂ ಶಿವಣ್ಣ ಬೆಲೆಕೊಡುವುದು ಸಂಭಾವನೆಗೆ. ...ಟ್ ರೇಟು ಪಾವತಿಸಿಬಿಟ್ಟರೆ ಸಾಕು ... ಯಾರು, ಕತೆ ಏನು, ಡೈರೆಕ್ಟರ್ ಯಾರು ...ಣ್ಣನಿಗೆ ಮುಖ್ಯವೆನಿಸುವುದಿಲ್ಲ. ಹೀಗಾಗಿಯೇ ... ಹಿಟ್ ಕೊಟ್ಟು ಮಿಕ್ಕಂತೆ ಶಿವಣ್ಣನ ...ನಿಮಾಗಳು ಮುಗ್ಗರಿಸುತ್ತವೆ. ಶಿವಣ್ಣ ಪಕ್ಕಾ ... 'ಭಜರಂಗಿ' ಹಿಟ್ಟಾಯಿತೆಂದು ಏಕಾಏಕಿ ...ನೆ ಹೆಚ್ಚಿಸಿಕೊಂಡರು.

...ತ್ಯಾಗಿಯೇ ಅರಿತಿದ್ದ ರಾಂಗೋಪಾಲ್ ವರ್ಮ ...' ವೀರಪ್ಪನ್' ಚಿತ್ರಕ್ಕೆಂದು ಸಾಧಾರಣದ ...ಕ್ಕೆ ಶಿವಣ್ಣನನ್ನು ಒಪ್ಪಿಸಿಬಿಟ್ಟರು.

...ಾದ ರೊಕ್ಕ ಬಂತೆಂದರೆ ಪಾತ್ರ ...ನು? ಕತೆ ಏನಾದರೇನು? 'ಕಿಲ್ಲಿಂಗ್ ...' ಶೂಟಿಂಗ್ ಮುಗಿದು ಬಿಡುಗಡೆಗೆ ... ಇದರ ನಡುವೆಯೇ ಹೊಸಹೇಳಿಯ ...ಮಾರಸ್ವಾಮಿ ಎಂಬ ಗಣಿ ಆಸಾಮಿಗೆಂದು ... ಕಬೀರ' ಎಂಬ ಚಿತ್ರವನ್ನು ಶಿವಣ್ಣ ... 'ಕಬಡ್ಡಿ' ಚಿತ್ರ ನಿರ್ದೇಶಿಸಿದ್ದ ಬಾಬು ... ಡೈರೆಕ್ಟರ್ ನಿರ್ದೇಶಿಸಿ ಹೊರಟ ... ಕಬೀರ' ಶಿವಣ್ಣನ ಕಾರಣಕ್ಕಲ್ಲದೆ ಇನ್ನಾವ ...ಗಬಹುದೆಂಬ ಲೆಕ್ಕದಲ್ಲಿ ಗಾಂಧಿನಗರ




ಕನ್ನಡದ ಬೇರೆ ಯಾವ ನಟನೂ ನಾಲ್ಕೋ ಐದೋ ಚಿತ್ರಗಳನ್ನು ಒಟ್ಟೊಟ್ಟಿಗೆ ಒಪ್ಪಿಕೊಳ್ಳುವುದಿಲ್ಲ, ಸದ್ಯ ಶಿವಣ್ಣ ಒಂದಲ್ಲ ಎರಡಲ್ಲ ಒಟ್ಟು ಐದು ಚಿತ್ರಗಳಿಗೆ ಏಕಕಾಲಕ್ಕೆ ಕಾಲ್‌ಶೀಟ್ ಕೊಟ್ಟಿದ್ದಾರೆ. ಗೋವಿಂದಾಯ ನಮಃ ಸುರೇಶ್ ಎಂಬ ನಿರ್ಮಾಪಕನ 'ಶಿವಲಿಂಗು' ಚಿತ್ರ ಇನ್ನೇನು ಬಿಡುಗಡೆಗೆ ರೆಡಿಯಾಗಿದೆ. 'ಕಿಲ್ಲಿಂಗ್ ವೀರಪ್ಪನ್' ನವೆಂಬರ್ ಮೊದಲ ವಾರದಲ್ಲಿ ಬಿಡುಗಡೆಯಾಗುವ ಸಾಧ್ಯತೆಯಿದ್ದು ಆ ನಂತರ 'ಶಿವಲಿಂಗು'ಗೆ ಅವಕಾಶ.

ಇದರ ಹೊರತಾಗಿಯೂ 'ಖದರ್' ಎಂಬ ಮತ್ತೊಂದು ಲಾಂಗ್ ಮಚ್ಚು ಕ್ಯಾಟಗಿರಿ ಚಿತ್ರಕ್ಕೆಂದು ಶಿವಣ್ಣ ಅಡ್ವಾನ್ಸ್ ಪಡೆದಿದ್ದಾರೆ. ಶೂಟಿಂಗ್ ಕೂಡ ನಡೆಯುತ್ತಿದೆ. ಇದಕ್ಕೂ ಗೋವಿಂದಾಯ ನಮಃ ಪ್ರೊಡ್ಯೂಸರ್ ಸುರೇಶ್‌ರೇ ನಿರ್ಮಾಪಕರು. ರಾಂಗೋಪಾಲ್ ವರ್ಮಾನ 'ಕಿಲ್ಲಿಂಗ್ ವೀರಪ್ಪನ್' ತಮಿಳಿನ ಖ್ಯಾತ ಡೈರೆಕ್ಟರ್ ವಾಸು ನಿರ್ದೇಶನದ 'ಶಿವಲಿಂಗು', ಕಬಡ್ಡಿ ಬಾಬು ಕೈಚಳಕದ 'ಸಂತೆಯಲ್ಲಿ ನಿಂತ ಕಬೀರ' ಹಾಗೂ ನಿರ್ಮಾಪಕ ಸುರೇಶ್‌ರ 'ಖದರ್' ಸೇರಿಸಿದರೆ ಸದ್ಯ ಶಿವಣ್ಣ ಬಿಜಿಯಾಗಿರುವ ಚಿತ್ರಗಳ ಒಟ್ಟು ಸಂಖ್ಯೆ ನಾಲ್ಕು.

ಒಂದರ ಮೇಲೊಂದರಂತೆ ಶೂಟಿಂಗ್‌ನಲ್ಲಿ ಬಿಜಿಯಾಗಿರಬೇಕು. ಒಂದರ ಕಾಲ್‌ಶೀಟ್ ಮುಗಿಯುತ್ತಿದ್ದಂತೆ ಮತ್ತೊಂದಕ್ಕೆ ತಲೆಕೊಡಬೇಕು. ಪ್ರತಿನಿತ್ಯ ಶೂಟಿಂಗು. ಅದರ ಮಧ್ಯೆ ಸಾಂಸಾರಿಕ ತಾಪತ್ರಯ. ವಯಸ್ಸು ಐವತ್ತೂ ದಾಟಿತು. ಇದು ಸಾಲದೆಂಬಂತೆ ಇನ್ನೂ ಮೂರ್‍ನಾಲ್ಕು ಮಂದಿಯಿಂದ ಹೊಸ ಕಾಲ್‌ಶೀಟ್‌ನ ಅಡ್ವಾನ್ಸ್ ಕೂಡ ಪಡೆದಿದ್ದಾರಂತೆ. ವಿಶ್ರಾಂತಿಯಿಲ್ಲ, ಸಣ್ಣಪುಟ್ಟ ಕೆಲಸಕ್ಕೂ ತಾನೇ ತಲೆಕೊಡಬೇಕು. ಬಿಡುವೇ ಇಲ್ಲದ ...ಷ್ಯನೊಬ್ಬನಿಗೆ ಏನಾಗಬಹುದೋ ಅದೇ ಶಿವಣ್ಣನಿಗೂ ಒದಗಿಬಂದಿರಬೇಕು.

ಹೀಗಾಗಬಾರದಿತ್ತು.

ಮುಧೋಳದ 'ಕೋಮು' ಬೆಂಕಿಗೆ ಬಿಜೆಪಿಯ 'ತು



ಘಟನೆ ನಡೆದು ಆದಾಗಲೇ ಹದಿನೈದು ದಿನ ಕಳೆಯುತ್ತಾ ಬಂದರೂ ಮುಧೋಳದ ಮುಸ್ಲಿಮರ ಮನೆಗಳಲ್ಲಿ ಭಯ ಆತಂಕದ ವಾತಾವರಣ ಸಂಪೂರ್ಣ ತಿಳಿಗೊಂಡಿಲ್ಲ; ಕತ್ತಲಾಯಿತೆಂದರೆ ಗಂಡಸರು ಮನೆಗೆ ವಾಪಾಸಾಗಿಲ್ಲವೆಂಬ ಹೆಂಗಸರ ಆತಂಕ ದೂರವಾಗಿಲ್ಲ; ಸುಟ್ಟು ಕರಕಲಾದ ತಮ್ಮ ಅಂಗಡಿಮುಂಗಟ್ಟುಗಳನ್ನು ನಿವಾರಿಸಿಕೊಂಡು ಬದುಕನ್ನು ಸಹಜಸ್ಥಿತಿಗೆ ತರುವ ಧೈರ್ಯ ಯಾವೊಬ್ಬ ಮುಸ್ಲಿಮನ ಮುಖದಲ್ಲೂ ಕಾಣುತ್ತಿಲ್ಲ; ಕೇವಲ ಅನುಮಾನದ ಮೇಲೆ ಬಂಧಿತರಾದ ಹತ್ತಾರು ಮುಸ್ಲಿಂ ಯುವಕರ ಭವಿಷ್ಯದ ಮೇಲಿನ ಕಾರ್ಮೋಡ ಕಿಂಚಿತ್ತೂ ಕರಗಿಲ್ಲ...... ಆದರೆ ದಾಂಧಲೆ ನಡೆಸಿದ ಹಿಂದೂ ಸಂಘಟನೆಯ ಕಿಡಿಗೇಡಿಗಳನ್ನು ಬಚಾವು ಮಾಡುವ ಪ್ರಯತ್ನ ಮಾತ್ರ ಮುಲಾಜಿಲ್ಲದೆ ನಡೆಯುತ್ತಿದೆ!

ಮೊನ್ನೆಯಷ್ಟೇ 'ಗಣೇಶನ ಗಲಾಟೆ'ಯ ಕೋಮು ದಳ್ಳುರಿಗೆ ನಲುಗಿಹೋದ ಮುಧೋಳದ ಸದ್ಯದ ಚಿತ್ರಣ ಇದು. ಸಮುದಾಯಗಳ ಮಧ್ಯ ವಿಷ ಬೀಜ ಬಿತ್ತುವುದು, ಸಾಮಾಜಿಕ ಸಾಮರಸ್ಯ ಹಾಳು ಮಾಡುವುದು, ಧರ್ಮ ಧರ್ಮಗಳ ಮಧ್ಯೆ ಬೆಂಕಿ-ಹಚ್ಚಿ ಅದರಲ್ಲಿ ಬೇಳೆ ಬೇಯಿಸಿಕೊಳ್ಳುವುದು, ಅಲ್ಪಸಂಖ್ಯಾತ, ದಲಿತ ವರ್ಗದವರ ಬದುಕನ್ನು ಸಂಕಟಕ್ಕೆ ದೂಡಿ ಅದರಲ್ಲಿ ರಾಜಕಾರಣ ಮಾಡುವುದು ಇದ್ಯಾವುದೂ ಬಿ.ಜೆ.ಪಿ. ನಾಯಕರಿಗೆ ಹೊಸದಲ್ಲ, ಇಂತಹ ಸಾಲಿಗೆ ಮುಧೋಳದ ಕೋಮುಗಲಭೆ ಹೊಸ ಸೇರ್ಪಡೆ ಅಷ್ಟೆ. ನೂರಾರು ಮುಸ್ಲಿಂ ಅಂಗಡಿಗಳು ಸುಟ್ಟು ಬೂದಿಯಾಗಿ ಸಾವಿರಾರು ಜನ ಬದುಕು ಕಳೆದುಕೊಳ್ಳುವಂತಾಗಿರುವಾಗ ಇಲ್ಲಿನ ಬಿ.ಜೆ.ಪಿ. ನಾಯಕರು ಮಾತ್ರ ಮಾನ, ಮರ್ಯಾದೆ ಲೆಕ್ಕಿಸದೇ ಆರೋಪಿಗಳಾಗಿರುವ ಹಿಂದೂ ಸಂಘಟನೆಯ ಕಾರ್ಯಕರ್ತರ ರಕ್ಷಣೆಗೆ ಶತಪ್ರಯತ್ನ ನಡೆಸಿದ್ದಾರೆ.

ಒಬ್ಬ ಜನಪ್ರತಿನಿಧಿಯಾಗಬೇಕಾದವನ ಕನಿಷ್ಠ ಅರ್ಹತೆಯೇ ಎಲ್ಲ ಜನಾಂಗದವರನ್ನು ಸಮಾನವಾಗಿ ಕಾಣುವುದು. ಆದರೆ ಇಲ್ಲಿನ ಶಾಸಕ ಗೋವಿಂದ ಕಾರಜೋಳ ಸ್ವತಃ ಒಬ್ಬ ದಲಿತನಾಗಿದ್ದುಕೊಂಡು, ಮುಧೋಳದ ಜನಪ್ರತಿನಿಧಿಯಾಗಿ ಕನಿಷ್ಠ ಸಂತ್ರಸ್ತ ಅಲ್ಪಸಂಖ್ಯಾತರ ಮನೆಗಳಿಗೂ ಭೇಟಿ ನೀಡದೇ ಹಿಂದೂ ಸಂಘಟನೆಗಳ ಕಾರ್ಯಕರ್ತರ ರಕ್ಷಣೆಗೆ ಬಹಿರಂಗ ಸಭೆ, ಸಮಾರಂಭ ನಡೆಸುತ್ತಾರೆಂದರೆ ಏನೆನ್ನಬೇಕು?

ಗಣೇಶನ ನೆಪದಲ್ಲಿ ಪುಂಡಾಟಿಕೆ

ಮುಧೋಳ ನಗರ ಮೊದಲಿನಿಂದಲೂ ಬಲಪಂಥೀಯ ಸಂಘಟನೆಗಳ ಕಾರ್ಯಕ್ಷೇತ್ರ. ಕರ್ನಾಟಕದಲ್ಲಿ ಇರಬಹುದಾದ ಅಷ್ಟೂ ಹಿಂದೂ ಸಂಘಟನೆಗಳ ಶಾಖೆಗಳು ಇಲ್ಲಿವೆ. ವಿಶೇಷವಾಗಿ ಕೆಳವರ್ಗದವರು, ಅಲ್ಪಸಂಖ್ಯಾತರು ಹಾಗೂ ಕಡುಬಡವರೇ ಹೆಚ್ಚಾಗಿ ವಾಸಿಸುವ ಇಲ್ಲಿನ ಆಶ್ರಯ ಕಾಲನಿ ಇವರ ಚಟುವಟಿಕೆಗಳ ಕೇಂದ್ರ. ಇಲ್ಲಿರುವ ಬಡ ಯುವಕರೇ ಈ ಸಂಘಟನೆಗಳ ಮೂಲ ಬಂಡವಾಳ. ಇತ್ತೀಚೆಗೆ ಶ್ರೀರಾಮಸೇನೆ ನೇತೃತ್ವದಲ್ಲಿ ಇದೇ ಕಾಲನಿಯಲ್ಲಿ ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿತ್ತು, ಅದು ಕೂಡಾ ಇಲ್ಲಿನ ಮಸೀದಿಗೆ ಕೇವಲ 200 ಮೀಟರ್ ಅಂತರದಲ್ಲಿ, ದಿನಾಂಕ 23-10-2015ರ ರಾತ್ರಿ ಸುಮಾರು 8-30ಕ್ಕೆ ಗಣಪತಿ ವಿಸರ್ಜನೆ ಮೆರವಣಿಗೆ ಆರಂಭವಾಗಿದೆ. ಕೆಲವೇ ನಿಮಿಷಗಳಲ್ಲಿ ಅದು ಮಸೀದಿಯ ಮುಂದೆ ಬಂದುನಿಂತಿದೆ. ಗಲಾಟೆ ಮಾಡಬೇಕೆಂದು ಮೊದಲೇ ಅಣಿಯಾಗಿದ್ದ ಕಿರಾತಕರು ಅಲ್ಲಿ ಹಾಡು ಕುಣಿತವನ್ನು ಜೋರಾಗಿಸಿದ್ದರು. ಅಷ್ಟಾದರು ಮುಸ್ಲಿಮರಿಂದ ಯಾವ ಪ್ರತಿರೋಧವೂ ತೋರಿಬಂದಿಲ್ಲ, ಆಗ ಕೆಲ ಕಿಡಿಗೇಡಿಗಳು ಮಸೀದಿಯ ಮೇಲೆ ಕಲ್ಲು ತೂರಲಾರಂಭಿಸಿದ್ದಾರೆ. ಮಸೀದಿಯಲ್ಲಿದ್ದ ಕೆಲವರು ಇದಕ್ಕೆ ಆಕ್ಷೇಪಿಸುತ್ತಿದ್ದಂತೆಯೇ ಕೆಲ ದುಷ್ಟರು ಪಕ್ಕದ ಮುಸ್ಲಿಮರ ಮನೆಗೆ ಕಲ್ಲು ತೂರಿ ಕಿಟಕಿಯ ಗಾಜು ಪುಡಿಪುಡಿ ಮಾಡಿದ್ದಲ್ಲದೆ ಮನೆಯ ಒಳಗೆ ನುಗ್ಗಿ ಸಾಮಾನುಗಳನ್ನೆಲ್ಲ ಒಡೆದು ಇಡೀ ಮನೆಗೆ ಬೆಂಕಿ ಹಚ್ಚಿದ್ದಾರೆ.

ಪ್ರಾಣ ಉಳಿಸಿಕೊಳ್ಳುವುದಕ್ಕಾಗಿ ಮನೆಯಲ್ಲಿದ್ದವರು ಪಕ್ಕದ ಮನೆಯಲ್ಲಿ ಆಶ್ರಯ ಪಡೆಯಬೇಕಾಗಿತ್ತು. ಮತ್ತಷ್ಟು ಉನ್ಮಾದಕ್ಕೊಳಗಾದ ಗುಂಪು ಮನೆಯ ಹೊರಗೆ ನಿಂತಿದ್ದ ಎರಡು ಕ್ರೂಸರ್ ವಾಹನ ಮತ್ತು ಸೈಕಲ್ ಮೋಟರ್‌ಗಳಿಗೂ ಬೆಂಕಿ ಹಚ್ಚಿದ್ದರು. ದುರಂತವೆಂದರೆ ಇಷ್ಟೆಲ್ಲಾ ನಡೆಯುತ್ತಿದ್ದುದು ಪೊಲೀಸರ ಸಮ್ಮುಖದಲ್ಲೇ!

ಆರಂಭದಲ್ಲೇ ಗಲಭೆಕೋರರನ್ನು ನಿಯಂತ್ರಿಸುವ ಬದಲು ಅವರು ವಾಹನಗಳಿಗೆ ಬೆಂಕಿ ಹಚ್ಚಿದ ನಂತರ ಸಿಪಿಐ ಆರ್. ಕೆ. ಪಾಟೀಲ, ಪಿಎಸ್‌ಐ ಡಿ. ಕೆ. ಪಾಟೀಲ ಮೊದಲಾದವರು ಪುಂಡರನ್ನು 'ಶಾಂತ'ಗೊಳಿಸುವ ಪ್ರಯತ್ನಕ್ಕೆ ಮುಂದಾಗಿದ್ದರು. ಆದರೆ ಉನ್ಮತ್ತರಾಗಿದ್ದ ಆ ಗುಂಪು ಪೊಲೀಸ್ ಸಿಬ್ಬಂದಿಯ ಮೇಲೂ ಕಲ್ಲು ತೂರಿ ಅವರನ್ನೂ ಗಾಯಗೊಳಿಸಿದ್ದರು. ಪೊಲೀಸ್ ಅಧಿಕಾರಿಗಳು ಅತ್ತ ಆಸ್ಪತ್ರೆ ಸೇರಿಕೊಳ್ಳುತ್ತಲೇ ನಗರದ ಬೇರೆಬೇರೆ ಕಡೆಗಳಲ್ಲಿ ಹಾರೆ, ಸಲಾಕೆಗಳಿಂದ ಅಂಗಡಿಗಳ ಶೆಟರ್ ಮುರಿದು ಪೆಟ್ರೋಲ್ ಡೀಸೆಲ್ ಸುರಿದು ಸುಮಾರು 50ಕ್ಕೂ ಹೆಚ್ಚು ಮುಸ್ಲಿಂರ ಅಂಗಡಿಗಳಿಗೆ ಬೆಂಕಿ ಹಚ್ಚಲಾಗಿತ್ತು. ಮಾರುಕಟ್ಟೆಯ ಮಧ್ಯದಲ್ಲಿರುವ ಎ.ಆರ್. ರಾಮದುರ್ಗ ಎಂಬ ಮುಸ್ಲಿಂ ವ್ಯಾಪಾರಿಯ ನಾಲ್ಕು ಅಂತಸ್ತಿನ ಬಟ್ಟೆ ಅಂಗಡಿಗೆ ಬಿದ್ದ ಬೆಂಕಿ ಸುಮಾರು ಎರಡು ದಿನ ಉರಿದು ಇಡೀ ಅಂಗಡಿಯನ್ನೇ ಬೂದಿಯಾಗಿಸಿದೆ. ಅವರ ದಾಂಧಲೆಗೆ ನೂರಕ್ಕೂ ಹೆಚ್ಚು ಸೈಕಲ್ ಮೋಟರ್‌ಗಳು ಭಸ್ಮವಾಗಿದ್ದವು.

ಪೂರ್ವಯೋಜಿತ ಕೃತ್ಯ

ಇದೊಂದು ಆಕಸ್ಮಿಕ ಘಟನೆ, ಅಮಾಯಕ ಹಿಂದೂಗಳನ್ನು ಬಂಧಿಸಬಾರದು ಎಂದು ಗೋವಿಂದ ಕಾರಜೋಳ ಹಾಗೂ ಮುರುಗೇಶ ನಿರಾಣಿ ಬಾಯಿಬಾಯಿ ಬಡಿದುಕೊಳ್ಳುತ್ತಿದ್ದಾರೆ. ಆದರೆ ಇದು ಆಕಸ್ಮಿಕವಾಗಿ ನಡೆದ ಘಟನೆಯಲ್ಲ ಎಂಬುದು ಎಂತವರಿಗೂ ಅರ್ಥವಾಗುತ್ತದೆ. ಸಂಪೂರ್ಣ ತಯಾರಿ ಮಾಡಿಕೊಳ್ಳದ ಹೊರತು ಈ ಪ್ರಮಾಣದ ಧ್ವಂಸ ಸಾಧ್ಯವಿಲ್ಲ, ಏಕೆಂದರೆ ಕೆಲವೇ ಗಂಟೆಗಳಲ್ಲಿ ನಗರದ ಸುಮಾರು 50 ಕಡೆಗಳಲ್ಲಿ ಅಂಗಡಿ ಮನೆಗಳಿಗೆ ಬೆಂಕಿ ಹಚ್ಚಲಾಗಿದೆ. ಇದಕ್ಕಿಂತ ಮುಖ್ಯ ವಿಷಯವೆಂದರೆ ಬೆಂಕಿಗೆ ಆಹುತಿಯಾದ ಅಂಗಡಿ ಮನೆಗಳೆಲ್ಲ ಮುಸ್ಲಿಂ ಸಮುದಾಯಕ್ಕೆ ಸೇರಿದವು. ಅಕ್ಕಪಕ್ಕದ ಹಿಂದೂಗಳ ಅಂಗಡಿಗಾಗಲಿ, ಮನೆಗಳಿಗಾಗಲಿ ಯಾವುದೇ ಧಕ್ಕೆಯಾಗಿಲ್ಲ, ಅಷ್ಟೇ ಅಲ್ಲ ಮುಸ್ಲಿಂ ಮಾಲಿಕತ್ವದ ಅಂಗಡಿಗಳಲ್ಲಿ ಹಿಂದೂಗಳು ಬಾಡಿಗೆ ಇರುವ ಅಥವಾ ಹಿಂದೂಗಳ ಕಟ್ಟಡದಲ್ಲಿ ಮುಸ್ಲಿಂ ವ್ಯಾಪಾರಿಗಳು ಬಾಡಿಗೆ ಇರುವ ಅಂಗಡಿಗಳಿಗೆ ಕಿಂಚಿತ್ತೂ ಹಾನಿಯಾಗಿಲ್ಲ, ಅಂದರೆ ಹಿಂದೂ ಗಳಿಗೆ ಯಾವುದೇ ರೀತಿಯಲ್ಲೂ ಹಾನಿಯಾಗದ ಹಾಗೆ ನೋಡಿಕೊಳ್ಳಲಾಗಿದೆ. ಮುಸ್ಲಿಮರ ಅಂಗಡಿಗಳನ್ನು ಮೊದಲೇ ಗುರುತಿಸಿಟ್ಟು, ಹಾರೆ, ಸಲಾಕೆ, ಪೆಟ್ರೋಲ್, ಡೀಸೆಲ್ ಮುಂತಾದವುಗಳನ್ನು ಸಂಗ್ರಹಿಸಿಟ್ಟುಕೊಂಡು ವ್ಯವಸ್ಥಿತ ದಾಳಿ ಇದು.

ಇಡೀ ಘಟನೆಯಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ಪೊಲೀಸ್ ಇಲಾಖೆಯ ನಿರ್ಲಕ್ಷ್ಯತನವನ್ನು. ಮುಧೋಳ ನಗರದಲ್ಲಿ ಆಗಾಗ ಸಣ್ಣಪುಟ್ಟ ಕೋಮುಗಲಭೆಗಳು ನಡೆಯುತ್ತಲೇ ಬಂದಿದ್ದರೂ, ಜನತಾ ಪ್ಲಾಟ್‌ನಲ್ಲಿ ಮಸೀದಿಗೆ ಕೇವಲ 200 ಮೀಟರ್ ದೂರದಲ್ಲಿ ಗಣಪತಿ ಪ್ರತಿಷ್ಠಾಪನೆಗೆ ಅವಕಾಶ ಕೊಟ್ಟಿದ್ದೆ ಮೊದಲ ತಪ್ಪು, ಗಣೇಶ ವಿಸರ್ಜನೆ ಸಮಯದಲ್ಲಿ ಪಿಎಸ್‌ಐ ಡಿ. ಕೆ. ಪಾಟೀಲ, ಸಿಪಿಐ ಆರ್. ಕೆ. ಪಾಟೀಲ ಮತ್ತು ಪೊಲೀಸ್ ಸಿಬ್ಬಂದಿ ಸ್ಥಳದಲ್ಲಿದ್ದರೂ ಗಲಭೆಯನ್ನು ಆರಂಭದಲ್ಲಿಯೇ ನಿಯಂತ್ರಿಸಿ ಕ್ರಮಕೈಗೊಳ್ಳದೇ ಕೈಮೀರಿ ಹೋಗುವವರೆಗೂ ಬಿಟ್ಟದ್ದೇ ಪುಂಡರು ವಿಜೃಂಭಿಸಲು ನೆರವಾದದ್ದು. ದಾಳಿಯಿಂದಾಗಿ ಎಸ್.ಐ., ಸಿಪಿಐ, ಗಾಯಗೊಂಡು ಆಸ್ಪತ್ರೆ ಸೇರಿದನಂತರ ಪೊಲೀಸರು ದಿಕ್ಕು ಕಾಣದೇ ಮೂಕಪ್ರೇಕ್ಷಕರಾಗಿದ್ದಾರೆ. ಈ ಅವಕಾಶವನ್ನು ಬಳಸಿಕೊಂಡ ಕಿಡಿಗೇಡಿಗಳು ಹುಚ್ಚು ಹಿಡಿಸಿಕೊಂಡವರಂತೆ ಸಿಕ್ಕಸಿಕ್ಕ ಕಡೆಗಳಲೆಲ್ಲ ಮುಸ್ಲಿಂರ ಆಸ್ತಿ ಪಾಸ್ತಿಗೆ ಬೆಂಕಿ ಇಟ್ಟಿದ್ದಾರೆ. ವಾತಾವರಣ ಸಂಪೂರ್ಣ ತ... ನಂತರವೂ ಡಿವೈಎಸ್‌ಪಿ ಮುದರೆಡ್ಡಿ ಸಾಕಷ... ಫೋರ್ಸ್‌ಗೆ ವ್ಯವಸ್ಥೆ ಮಾಡದೆ ಏಕಾಂಗಿ... ಆಗಮಿಸಿ ಏಟು ತಿಂದು ಆಸ್ಪತ್ರೆ ಸೇರಿದ್ದು ಕೂ... ವೈಫಲ್ಯದ ಮತ್ತೊಂದು ಮಜಲು. ಅಗ್ನಿ... ಬಂದರೂ ಬೆಂಕಿ ಆರಿಸದಂತೆ ಪುಂಡ... ನಿಲ್ಲಿಸುತ್ತಾರೆಂದರೆ ಅಲ್ಲಿ ಪೊಲೀಸ್ ವ್ಯವಸ್ಥೆ ಅ... ಹೋಗಿರಬೇಡ. ಆದಾಗ್ಯೂ ಜಮಖಂಡಿಯ... ಕಮೀಷನರ್ ರಾಕೇಶ್‌ಕುಮಾರ ಪ್ರಾಣದ ಹ... ಅಗ್ನಿಶಾಮಕ ಸಿಬ್ಬಂದಿಯೊಂದಿಗೆ ತಾವೇ ವ... ಬೆಂಕಿ ಆರಿಸುವ ಕೆಲಸ ಮಾಡಿದ್ದನ್ನು ಮೆ...

ಅರೆಸ್ಟ್ ಅನ್ಯಾಯ ಮತ್ತು ಬಿಜೆಪಿಯ ನೀಚತನ

ಘಟನೆಯ ತೀವ್ರತೆ ಅರಿತ ಬಾಗಲಕೋ... ಯಡಾ ಮಾರ್ಟಿನ್ ಮಾರ್ಬನ್ಯಾಂಗ್, ತ... ಬೇರೆ ಕಡೆಯ ಪೊಲೀಸ್ ಸಿಬ್ಬಂದಿಯನ... ಕಾರ್ಯಾಚರಣೆಗಿಳಿದ ಮೇಲಷ್ಟೇ ಪರಿಸ್ಥಿತಿ... ಬಂದದ್ದು. ಗಲಭೆ ಸಂಬಂಧ 70ಕ್ಕೂ ಹೆ... ಹಡೆಮುರಿಕಟ್ಟಿ ತಂದು ಜೈಲಿಗಟ್ಟ... ಆಶ್ಚರ್ಯವೆನೆಂದರೆ ಹಾಗೆ ಬಂಧಿತರಾದ... ಹಲ್ಲೆಗೊಳಗಾಗಿ ಮನೆ, ಮಠ, ಅಂಗಡಿಯನ್ನು ಕ... ಬೀದಿಪಾಲಾಗಿರುವ ಮುಸ್ಲಿಮ್ ಸಮುದಾಯಕ... 45 ಜನರಿದ್ದರು. ಹಿಂದೂ ಸಂಘಟನೆಗೆ ಸೇರಿ... ಕೇವಲ 30 ಜನರಷ್ಟೆ! ಒಂದೇಒಂದ... ಅಂಗಡಿ-ಮನೆ ಹಾನಿಗೊಳಗಾಗಿಲ್ಲ, ಆದ... ಸಂಖ್ಯೆಯಲ್ಲಿ ಮುಸ್ಲಿಂ ಯುವಕರನ್ನು ಬಂಧಿ... ಎಂಬ ಪ್ರಶ್ನೆಯನ್ನು ಕೇಳಿದರೆ 'ಬಹಳಷ್ಟು ... ತಲೆ ಮರೆಸಿಕೊಂಡಿದ್ದಾರೆ. ಅವರನ್ನು ಬಿಡುವ... ಉತ್ತರ ಎಸ್ಪಿಯವರಿಂದ ಬರುತ್ತಿದೆ.

ಇಷ್ಟೆಲ್ಲ ಘಟನೆ ನಡೆದು ಹಿಂದೂ ... ದುಷ್ಕರ ಅಕ್ರಮಣಕ್ಕೊಳಗಾಗಿ ಅಲ್ಪ... ನಲುಗಿಹೋಗಿದ್ದರೂ ಇಲ್ಲಿನ ಶಾಸಕ ಗೋವಿಂದ... ನೆಪ ಮಾತ್ರಕ್ಕೂ ಹಾನಿಗೊಳಗಾದವರ ಮನೆಗೆ ... ಸಾಂತ್ವನ ಹೇಳುವ ಕೆಲಸ ಮಾಡಿಲ್ಲ, ... ಕಳೆದುಕೊಂಡವರಿಗೆ ಧೈರ್ಯ ತುಂಬುವ ಕೆ... ಬದಲಿಗೆ ಮುರುಗೇಶ ನಿರಾಣಿ, ಜಿ. ಎಸ್. ... ಮುಂತಾದ ಬಿಜೆಪಿ ನಾಯಕರನ್ನು ಸೇರಿಸಿ ... ಹಿಂದೂಗಳನ್ನು ಬಂಧಿಸಿದ್ದಾರೆ, ತಕ್ಷಣ ಹಿಂದೂ ... ನಾಯಕರನ್ನು ಬಿಡುಗಡೆ ಮಾಡಬೇಕ... ಗೋಳಾಡುತ್ತಿದ್ದಾರೆ. ಮೂಲತಃ ಚೆಡ್ಡಿ ತೊ... ರಾಜಕೀಯ ಜೀವನ ಆರಂಭಿಸಿದ ಮ... ಮುರುಗೇಶ ನಿರಾಣಿ ತನ್ನ ಮನಸ್ಥಿತಿಗೆ ತಕ್ಕ... ಸಂಘಟನೆಗಳಿಗೆ ಸೇರಿದ ಆರೋಪಿಗಳನ್ನು ರ... ತೊಟ್ಟಿದ್ದಾನೆ. ಹೀಗೆ ಹೊತ್ತಿ ಉರಿದ ... ರಾಜಕಾರಣ ಮಾಡುವ ಬಿಜೆಪಿ ಶಾಸಕ ... ಕಾರಜೋಳ, ಹಿಂದುತ್ವದ ಅಮಲು ... ದುಷ್ಟರು, ಮೂಕಪ್ರೇಕ್ಷಕರಂತೆ ವರ್ತಿಸುವ ... ಈ ಕುರಿತು ತುಟಿ ಬಿಚ್ಚದ ಟಿ.ವಿ. ಮ... ನರಸತ್ತಂತೆ ವರ್ತಿಸುವ ಪ್ರಗತಿಪರ ಸ... ಇವೆಲ್ಲವುಗಳ ಮಧ್ಯ ಬದುಕು ಕಳೆದುಕೊಂಡವ... ಕೇಳಿಸಿಕೊಳ್ಳಬೇಕಾದ ವರಾದರೂ ಯಾರು?

■ ಮಹಾಲಿಂಗಪ್ಪ ಆ...

---

08 ⏮ ಅಕ್ರಮ ಸಂಬಂಧಕ್ಕೆ ಗಂಡನೇ ಬಲಿ!

ಮೋಹನಕುಮಾರ ತನ್ನ ಬೈಕನ್ನು ಅಶೋಕನಿಗೆ ಕೊಟ್ಟು ನಾಗೇಂದ್ರಸ್ವಾಮಿಯ ಜೆರಾಕ್ಸ್ ಅಂಗಡಿಗೆ ಹೋಗಿ ಆತ ಯಾವ ಬಣ್ಣದ ಶರ್ಟ್ ಹಾಕಿದ್ದಾನೆ. ಎಷ್ಟುಹೊತ್ತಿಗೆ ಅಂಗಡಿಯಿಂದ ಹೊರಡುತ್ತಾನೆ ಎಂಬುದನ್ನು ಕನ್‌ಫರ್ಮ್ ಮಾಡಿಕೊಂಡು ಬಾ, ಲಾರಿ ಗುದ್ದಿಸುವಾಗ ಗೊಂದಲವಾಗುವುದು ತಪ್ಪುತ್ತೆ ಅಂತೇಳಿ ಕಳಿಸಿದ್ದ ಅವತ್ತು ಸುಮಾರು ಸಂಜೆ 6.30ರ ಸುಮಾರಿಗೆ ನಾಗೇಂದ್ರಸ್ವಾಮಿ ಅಂಗಡಿ ಕ್ಲೋಸ್ ಮಾಡಿಕೊಂಡು ಮೈಸೂರಿನ ತಮ್ಮ ಮನೆಯತ್ತ ಹೊರಟಿದ್ದರು. ಹಿಂಬದಿಯಲ್ಲಿ ತುಂಬಿದ ಗ್ಯಾಸ್ ಸಿಲಿಂಡರ್ ಕೂಡಾ ಇತ್ತು, ಅಶೋಕ ಲಾರಿಯಲ್ಲಿ ಹಿಂಬಾಲಿಸಿದನಾದರೂ ರಸ್ತೆಯಲ್ಲಿ ಓಡಾಟ ಹೆಚ್ಚಿದ್ದರಿಂದ ಗೊಂದಲಕ್ಕೀಡಾಗಿ ಮೋಹನನಿಗೆ ಫೋನು ಮಾಡಿ ತನ್ನ ಪೇಚು ತೋಡಿಕೊಂಡಿದ್ದಾನೆ. ಇವತ್ತೂ ಎಲ್ಲಿ ತಮ್ಮ ಪ್ಲಾನ್ ಮಿಸ್ ಆಗುತ್ತೊ ಅನ್ನೊ ಧಾವಂತದಲ್ಲಿ ಬೈಕನ್ನೇರಿ ಅದೇ ರಸ್ತೆಯತ್ತ ತಾನೂ ಬಂದಿದ್ದ.

ಆಗ ದುದ್ದಗೆರೆ ಬಳಿ ನಾಗೇಂದ್ರಸ್ವಾಮಿ ಬೈಕಲ್ಲಿ ಹೋಗುತ್ತಿರೋದು ಮೋಹನ್ ಗಮನಕ್ಕೆ ಬಂದಿತ್ತು, ಕೂಡಲೇ ಅಶೋಕನಿಗೆ ಫೋನ್ ಮಾಡಿ ವಿಷಯ ತಿಳಿಸಿ ಆಕ್ಸಿಡೆಂಟ್ ಮಾಡುವಂತೆ ತಿಳಿಸಿದ್ದ ಅದರಂತೆ ಮರಕೋಡು ಗೇಟ್ ಬಳಿಯಿಂದ ಬೈಕ್ ಹಿಂಬಾಲಿಸಿ ವೇಗವಾಗಿ ಲಾರಿಯನ್ನು ನುಗ್ಗಿಸಿ ತಂದ ಅಶೋಕ ಗುದ್ದುವ ಪ್ರಯತ್ನ ಮಾಡಿದ್ದನಾದರು ಹಿಂದೆ-ಮುಂದೆ ವಾಹನಗಳ ಓಡಾಟ ಹೆಚ್ಚಾಗಿದ್ದರಿಂದ ಸುಮ್ಮನಾಗಿದ್ದ ಆದರೆ ಸಾಡಪಳ್ಳಿ-ಚಿಕ್ಕಳ್ಳಿ ಬಳಿ ಅಂತಹ ಯಾವ ಅಡೆತಡೆಯೂ ಕಾಣಿಸಲಿಲ್ಲ, ಲಾರಿ ಡ್ರೈವರ್ ಅಶೋಕ ಹಿಂಬದಿಯಿಂದ ನಾಗೇಂದ್ರಸ್ವಾಮಿಯ ಬೈಕ್‌ಗೆ ಡಿಕ್ಕಿ ಹೊಡೆದಿದ್ದ ಕೆಳಗೆ ಬಿದ್ದ ನಾಗೇಂದ್ರಸ್ವಾಮಿಯ ಮೇಲೆ ಲಾರಿ ಹತ್ತಿಸಿದ್ದಲ್ಲದೆ ಸಾಯಿಸಲೇಬೇಕೆಂದು ಸುಪಾರಿ ಪಡೆದಿದ್ದ ಹಂತಕ ಡ್ರೈವರ್ ರಿವರ್ಸ್ ಗೇರ್‌ನಲ್ಲಿ ಚಲಿಸಿ ಮತ್ತೊಮ್ಮೆ ಲಾರಿಯನ್ನು ನಾಗೇಂದ್ರಸ್ವಾಮಿಯ ಮೇಲೆ ಹತ್ತಿಸಿದ್ದ ಅಷ್ಟೇ, ನಾಗೇಂದ್ರಸ್ವಾಮಿಯ ದೇಹ ಮಾಂಸದ ಮುದ್ದೆಯಂತಾಗಿತ್ತು ಜೀವ ಕ್ಷಣಾರ್ಧದಲ್ಲಿ ಆರಿಹೋಗಿತ್ತು, ಆದಷ್ಟು ಬೇಗ ಅಲ್ಲಿಂದ ಲಾರಿ ಸಮೇತ ಎಸ್ಕೇಪಾಗಬೇಕೆಂದು ಲಾರಿಯನ್ನು ರಿವರ್ಸ್ ತೆಗೆಯುವ ವೇಳೆ ಹಿಂದಿದ್ದ ಕೇರಳ ಬಸ್‌ಗೆ ಡಿಕ್ಕಿ ಹೊಡೆದಿದ್ದ ಅದೇ ಸಮಯಕ್ಕೆ ಅಪಘಾತ ಗಮನಿಸಿದ ಬೈಕ್ ಸವಾರನೊಬ್ಬ ಲಾರಿಗೆ ಅಡ್ಡನಾಗಿ ಬೈಕ್ ನಿಲ್ಲಿಸಿ ಅಶೋಕನತ್ತಲೇ ನುಗ್ಗಿ ಬಂದಿದ್ದ ಕೂಡಲೇ ಅಶೋಕ ಅಲ್ಲಿಂದ ಪರಾರಿಯಾಗಿದ್ದ

ಕೇಸಿಗೆ ಮರುಜೀವ

ವ್ಯವಸ್ಥಿತವಾಗಿ ನಡೆಸಿದ್ದ ಈ ಕೊಲೆಯನ್ನು ಪೊಲೀಸರು ಮೇಲ್ನೋಟಕ್ಕೆ ಕಾಣುವಂತೆ ಆಕ್ಸಿಡೆಂಟ್ ಕೇಸ್ ದಾಖಲಿಸಿಕೊಂಡು ಶವಪರೀಕ್ಷೆ ಮಾಡಿಸಿ ಕುಟುಂಬ ವರ್ಗದವರಿಗೆ ಶವ ಹಸ್ತಾಂತರ ಮಾಡಿದ್ದರು. ತಾಯಿ ಸುಧಾ ಹಾಗೂ ಮಗಳು ಪೂಜಾ ಎದೆಬಡಿದುಕೊಂಡು ತಂದೆಯ ಶವದ ಮೇಲೆ ಬಿದ್ದು ಗೋಳಾಡಿದ್ದರು. ಇಂತಹದ್ದೊಂದು ಕೊಲೆಯ ಸುಳಿವು ಯಾರಿಗೂ ಗೊತ್ತಾಗದೆ ಸುಧಾಳ ದುರ್ವಿಧಿಗೆ ಎಲ್ಲರೂ ಮರುಗಿದ್ದರು.

ಆದರೆ ನಾಗೇಂದ್ರಸ್ವಾಮಿಯ ತಮ್ಮ ಲೋಕೇಶನಿಗೆ ಅಪಘಾತ ನಡೆದ ದಿನವೇ ಸಣ್ಣದೊಂದು ಅನುಮಾನ ತಲೆಹೊಕ್ಕಿತ್ತು. ಯಾಕೆಂದರೆ ಅಪಘಾತ ನಡೆದ ಸ್ಥಳದಲ್ಲಿ ಭತ್ತದ ಕಾಳುಗಳು ಚೆಲ್ಲಾಡಿದ್ದವು. ಅಂದರೆ ಅಪಘಾತ ನಡೆದದ್ದು ಭತ್ತದ ಲಾರಿಯಿಂದ ಎಂಬುದು ಗೊತ್ತಾಗಿತ್ತು. ತನ್ನ ಅತ್ತಿಗೆ... ಭತ್ತದ ವ್ಯಾಪಾರಿ ಮೋಹನ್‌ಗೂ ಅನೈತಿಕ ಸಂಬಂಧ ಇದ್ದ... ವೀಡಿಯೋ ಹರಿದಾಡಿ ಸುದ್ದಿಯಾದದ್ದನ್ನು ಕಂಡಿದ್ದ ಲೋಕೇ... ವ್ಯವಸ್ಥಿತ ಕೊಲೆ ಇರಬಹುದೆನ್ನುವ ಅನುಮಾನ ಬಂದು, ... ನಡೆಸುವಂತೆ ಸಿದ್ಧಾರ್ಥ ಸಂಚಾರ ನಗರ ಪೊಲೀಸ್ ಎಸ್‌ಐ ... ಮನವಿ ಮಾಡಿಕೊಂಡಿದ್ದರು. ಅದೇವೇಳೆಗೆ ಹದಿನೈದು ದಿನಗ... ಡಿಸಿಪಿ ಡಾ.ಹೆಚ್.ಟಿ.ಶೇಖರ್‌ರವರಿಗೆ ಸುಧಾ ಮತ್ತು ಮೋಹನ್‌ರ ... ಬ್ಲೂಫಿಲಂ ಬಗ್ಗೆಯೂ ಮಾಹಿತಿ ಬಂದು ತಲುಪಿತ್ತು. ಅವರು ಕ... ನಡೆಸುವಂತೆ ರವೀಂದ್ರರಿಗೆ ಸೂಚನೆ ನೀಡಿದ್ದರು.

ಸುಧಾ ಹಾಗೂ ಆಕೆಯೂ ಪ್ರಿಯಕರ ಮೋಹನ ಕುಮ... ಪೊಲೀಸರು ನಿಗಾವಹಿಸಿದ್ದರು. ಅವರಿಬ್ಬರ ಮೊಬೈಲ್ ಟ್ಯಾಪ್ ... ನಾಗೇಂದ್ರಸ್ವಾಮಿಯ ಆಕ್ಸಿಡೆಂಟ್ ಹಿಂದಿನ ಅಸಲೀ ಕೊಲೆ ರಹ... ಬಂದಿತ್ತು, ಈ ನಡುವೆ ಆಕ್ಸಿಡೆಂಟ್ ಮಾಡಿದ್ದ ಡ್ರೈವರ್ ಅಶೋಕ... ಐಷಾರಾಮಿ ಜೀವನದ ಬಗ್ಗೆಯೂ ಪೊಲೀಸರಿಗೆ ಮಾಹಿತಿ ... ಮೂವರನ್ನು ಠಾಣೆಗೆ ತಂದ ಎಸ್‌ಐ ರವೀಂದ್ರರ ಪೊಲೀಸ್ ತಂ... ಭಾಷೆಯಲ್ಲಿ ಕೇಳುತ್ತಿದ್ದಂತೆ ಸಂಪೂರ್ಣ ವೃತ್ತಾಂತವನ್ನು ಒಪ್ಪಿ... ತನ್ನ ತಂದೆಯ ಹತ್ಯೆಗೆ ತಾಯಿ ಸುಧಾಳೇ ಸುಪಾರಿ ನೀಡಿದ ಸಂಗತಿ... ತಡೆಯದೆ, ಸಹಕರಿಸಿದ ಪುತ್ರಿ ಪೂಜಾ ಕೂಡಾ ಪ್ರಕರಣದಲ್ಲಿ ... ಹಿನ್ನೆಲೆಯಲ್ಲಿ ಜೈಲು ಪಾಲಾಗಿದ್ದಾಳೆ.

■ ವ...

ಗರಿಬೊಮ್ಮನಹಳ್ಳಿಗೆ ಶಾಸಕನೇ ಕಂಟಕ!

ಮಾನಾಯ್ಕನ ಎಮ್ಮೆಲ್ಲೇಗಿರಿಯಿಂದ ಹಗರಿ ಹಳ್ಳಿ ಅಕ್ಷರಶಃ ನಲುಗಿಹೋಗುತ್ತಿದೆ. ಅಭಿವೃದ್ಧಿ ಇಲ್ಲಿನ ಜನರು ಮರೆಯುವಂತಾಗಿರೋದು ಇದೀ ಬಳ್ಳಾರಿ ಜಿಲ್ಲೆಯ ಏಕೈಕ ಜೆಡಿಎಸ್ ಮಾನಾಯ್ಕ, ತನ್ನ ಪಕ್ಷದ ಲಾಂಛನವಾದ (ತೆನೆಯ ಹೊರೆ ಹೊತ್ತ ರೈತ ಮಹಿಳೆ) ಇಲ್ಲಿನ ಜನರ ಮೇಲೆಸೆದು ಸ್ವಜನಪಕ್ಷಪಾತ ದಲ್ಲಿ ಬ್ಯುಸಿಯಾಗಿದ್ದಾನೆ. ಮೀಸಲು ಕಾರಣಕ್ಕೆ ಡೂರಿ ನಿಂದ ಇಲ್ಲಿಗೆ ವಲಸೆ ಬಂದಿರುವ ನಿಗೆ ಹಗರಿಬೊಮ್ಮನಹಳ್ಳಿ ಕ್ಷೇತ್ರದ ಸಮಸ್ಯೆ ಗಳ ಆಳ ಅಗಲವೇ ಗೊತ್ತಿಲ್ಲ. ತುಂಗಭದ್ರಾ ನಿರ್ಮಾಣದಿಂದ ನಿರ್ವಸಿತರಾಗಿರುವ ಹಳ್ಳಿ, ಪಿಂಜಾರ ಹೆಗ್ಗಾಳ, ಬಲ್ಲಾಹುಣಸಿ ಏಳೆಂಟು ಗ್ರಾಮಗಳ ಜನರು ಇವತ್ತಿಗೂ ಗಾಗಿ ಜಲಾಶಯದ ನೀರನ್ನು ಪಡೆಯಲಾಗದೆ ದ್ದರೂ ಭೀಮಾನಾಯ್ಕ ಅತ್ತ ತಿರುಗಿಯೂ ಹೈ-ಕ ವಿಶೇಷ ಅನುದಾನದಡಿ ಬಂದ ೋಟಿ ರೂಪಾಯಿ ಎಲ್ಲೆಲ್ಲಿಗೆ ಖರ್ಚಾಗುತ್ತಿದೆ ಳಿವೇ ಸಿಗುತ್ತಿಲ್ಲ. ಕ್ಷೇತ್ರದ ಏತ ನೀರಾವರಿ ನೆಲ ಹಿಡಿದಿದ್ದು ರೈತರು ನೆರವಿಗಾಗಿ ಮಯ್ಯನವರನ್ನೇ ಎಡತಾಕುವಂತಾಗಿದೆ. ಇನ್ನು ರ್ಕಾರಿ ಆಸ್ಪತ್ರೆಯಂತೂ ಜನರಿಂದ ದೂರವಾಗಿ ವೇ ಆಗಿಹೋಗಿದೆ. ಇಂತಹ ಸಮಸ್ಯೆಗಳನ್ನೆಲ್ಲ ನ್ನ ಸ್ವಜಾತಿ ಪ್ರೀತಿಯ ಪಟಾಲಂ ಕಟ್ಟಿಕೊಂಡು ೀಜನಕ್ಕೆ ಕೂತಿರುವ ಭೀಮಾನಾಯ್ಕನ ರ್ ಎಗ್ಗಿಲ್ಲದಂತೆ ಸಾಗುತ್ತಿದೆ.

ನ್ನಾಟಕ್ಕೆ ಈತ ಮಾಡಿಕೊಂಡಿರುವ ವ್ಯವಸ್ಥೆಯೇ ತ್ತದೆ. ಬೇರೆಯವರಾದರೆ ತನ್ನ ಆಟ ಸಲೀಸಾಗಿ ದಿಲ್ಲ ಎಂಬುದನ್ನರಿತಿರುವ ಯ್ಕ ತನ್ನ ಕುಲಬಾಂಧ ರನ್ನೇ ಕ್ಷೇತ್ರಕ್ಕೆ ಗುತ್ತಿಗೆ ದ್ದಾನೆ. ಬೆಸ್ಕಾಂ ಎ.ಇ.ಇ.ಯಾಗಿ ಯ್ಕ ಕೃಷಿ ಇಲಾಖೆಯ ಜೆಡಿಎ ಮೇಶನಾಯ್ಕ, ಸಿಡಿಪಿಒ ಆಗಿ , ಪಂಚಾಯತ್‌ರಾಜ್ ಇಲಾಖೆ ಹುದ್ದೆಗೆ ಹಂಜಿನಾಯ್ಕ, ಕ್ಷೇತ್ರ ಅಧಿಕಾರಿಯಾಗಿ (ಶಿಕ್ಷಣ) ಯ್ಕ, ಹಗರಿಬೊಮ್ಮನಹಳ್ಳಿ ಕಾರಿ ಹುದ್ದೆಗೆ ಪಂಪಾನಾಯ್ಕ ಹೀಗೆ ಸಾಗುತ್ತಲೇ ಭೀಮನಾಯ್ಕನ ವ್ಯವಸ್ಥಿತ ಜಾತಿಪ್ರೇಮ!



ಪರಮ ಅವಕಾಶವಾದಿ


ಮಾನಾಯ್ಕ ರಾಜಕಾರಣಕ್ಕೆ ಪಾದಾರ್ಪಣೆ ಮಾಡಿ ವರ್ಷವೂ ಕಳೆದಿಲ್ಲ. ಅಷ್ಟರೊಳಗೇ ಈತ ಪಕ್ಷಾಂತರಿ ನಾಟಕವನ್ನೇನಾದರು ನೋಡಿದರೆ ಪಕ್ಷಾಂತರಿ ಸ್ಪೆಷಲಿಸ್ಟ್‌ಗಳೇ ತಲೆತಗ್ಗಿಸಿ 2004ರ ಸುಮಾರಿನವರೆಗೆ ಈತ ಏನೆಂದರೆ ಸಂಡೂರಿನ ಕಲ್ಲಹಳ್ಳಿ ತಾಂಡಾದಲ್ಲಿ ಅಪ್ಪ ಯ್ಕ ಮಾಡಿಕೊಂಡಿದ್ದ ಬಡ್ಡಿ ವ್ಯವಹಾರದಲ್ಲೇ ಉಂಡು ಓಡಾಡಿ ಕೊಂಡಿದ್ದ ಭೀಮಾನಾಯ್ಕನಿಗೆ ಕಮಾಯಿಯ ರುಚಿ ಹತ್ತಿಸಿದ್ದೇ ಗಣಿ ರಾಜಕಾರಣ. ಆಗಿನ್ನೂ ರೆಡ್ಡಿ ಬ್ರದರ್ಸ್‌ಗಳು ಬಲಾಢ್ಯರಾಗಿ ಬೇರೂರಿರಲಿಲ್ಲ. ಎಂ.ವೈ ಘೋರ್ಪಡೆಯೆಂಬ ಅಂದಕಾಲತ್ತಿಲ್ ಪಾಳೆಗಾರಿಕೆಯ ಗತ್ತು ಸವಕಲು ಸ್ಥಿತಿಗೆ ತಲುಪುತ್ತಿದ್ದ ಕಾಲವದು. ಸಂತೋಷ್ ಲಾಡ್ ಮತ್ತು ಅನಿಲ್ ಲಾಡ್‌ರದ್ದೇ ಗಣಿ ಪಾರುಪತ್ಯ ಜೋರಾಗಿತ್ತು. ಸಂತೋಷ್ ಲಾಡ್ ಸಂಡೂರಿನಿಂದ ಜೆಡಿಎಸ್ ಶಾಸಕನಾದರೆ, ಸೋದರ ಸಂಬಂಧಿ ಅನಿಲ್ ಲಾಡ್ ಕೂಡ್ಲಿಗಿಯಿಂದ ಶಾಸಕನಾಗಿದ್ದ. ಬಳ್ಳಾರಿ–ಕೂಡ್ಲಿಗಿ–ಹೊಸಪೇಟೆ ಕಡೆಯಿಂದ ಅದಿರು ತುಂಬಿದ ಲಾರಿಗಳು ಭೀಮಾನಾಯ್ಕನ ಕಲ್ಲಹಳ್ಳಿ ತಾಂಡಾದ ಮೂಲಕವೇ ಹಾದುಹೋಗಬೇಕಿದ್ದರಿಂದ ಪುರೋಡಿಯಾಗಿದ್ದ ಭೀಮಾನಾಯ್ಕ ಲಾರಿಗಳ ವಸೂಲಿ ದಂಧೆಗಿಳಿದಿದ್ದ. ಆ ಮೂಲಕ ಸಂತೋಷ್ ಲಾಡ್‌ನ ನಿಕಟಸ್ನೇಹವನ್ನೂ ಸಂಪಾದಿಸಿಕೊಂಡಿದ್ದ. ಅಲ್ಲಿಂದಾಚೆಗೆ ಭೀಮಾನಾಯ್ಕನ ನಸೀಬೇ ಬದಲಾಗಿಹೋಯ್ತು.



ನೋಡನೋಡುತ್ತಿದ್ದಂತೆಯೇ ಸಂತೋಷ್ ಲಾಡ್ ನೆರಳಲ್ಲಿ ಸಣ್ಣ ಸೈಜಿನ ಪೊಲಿಟಿಷಿಯನ್ ಆಗಿ ಚಲಾವಣೆಗೆ ಬಂದ. ಅಪ್ಪ ತೋಟಾನಾಯ್ಕ ಕಾಂಗ್ರೆಸ್‌ನ ಕಟ್ಟಾ ಅನುಯಾಯಿಯಾಗಿದ್ದರೂ ಮಗ ಭೀಮಾನಾಯ್ಕ ಜೆಡಿಎಸ್ ಪಾರ್ಟಿಯಲ್ಲಿ ರಾಜಕಾರಣಿಯಾಗಿ ರೂಪುಗೊಂಡ. ಲಾಡ್ ಸಾಂಗತ್ಯಕ್ಕೂ ಮುನ್ನ ಗ್ರಾಮ ಪಂಚಾಯ್ತಿಗೂ ನಾಲಾಯಕ್‌ನಂತಿದ್ದ ಭೀಮಾನಾಯ್ಕ, ಶಾಸಕನ ಕೃಪಾಶೀರ್ವಾದದಿಂದ ಯಶವಂತ ನಗರ ವಾರ್ಡ್‌ನಿಂದ ಜಿ.ಪಂಗೆ ಸ್ಪರ್ಧಿಸಿ ಗೆದ್ದೇಬಿಟ್ಟಿದ್ದ. ಆಮೇಲೆ ಸುಲಿಗೆಗಿಳಿದ ಭೀಮಾನಾಯ್ಕನ ಆಸ್ತಿ ಕೂಡಾ ಅಷ್ಟೇ ವೇಗವಾಗಿ ಹಿಗ್ಗುತ್ತಾ ಬಂತು. ಈ ನಡುವೆ ಭೀಮನಾಯ್ಕನಿಗೆ ಅನುಕೂಲವಾಗುವಂತ ವಿದ್ಯಮಾನವೊಂದು 2008ರಲ್ಲಿ ಘಟಿಸಿತು. ಏನೆಂದರೆ ಆ ಸಲ ನಡೆಯಲಿದ್ದ ವಿಧಾನಸಭಾ ಚುನಾವಣೆಗೆ ಕ್ಷೇತ್ರಗಳ ಮರುವಿಂಗಡಣೆ ಮತ್ತು ಮೀಸಲಾತಿ ಹಂಚಿಕೆ ನಡೆಯಿತು. ಆಗ ಸಂತೋಷ್ ಲಾಡ್ ಪ್ರತಿನಿಧಿಸುತ್ತಿದ್ದ ಸಂಡೂರು ಕ್ಷೇತ್ರ ಎಸ್‌ಟಿಗೆ ಮೀಸಲಾದರೆ, ಹಗರಿಬೊಮ್ಮನಹಳ್ಳಿ ಹೊಸ ಕ್ಷೇತ್ರವಾಗಿ ಜನ್ಮತಳೆದು ಎಸ್‌ಸಿ ಅಭ್ಯರ್ಥಿಗೆ ಮೀಸಲಿರಿಸಲ್ಪಟ್ಟಿತ್ತು. ಆಗ ಅನಿವಾರ್ಯವಾಗಿ ಸಂತೋಷ್ ಲಾಡ್ ಸಂಡೂರನ್ನು ಬಿಟ್ಟು ಕಲಘಟಗಿಗೆ ವಲಸೆ ಹೋಗಬೇಕಾಯ್ತು. ತನ್ನ ಗಾಡ್‌ಫಾದರ್‌ನಂತಿದ್ದ ಸಂತೋಷ್ ಲಾಡ್ ಕ್ಷೇತ್ರದಿಂದಲೇ ವಲಸೆಹೋದ ನಂತರ ಭೀಮಾನಾಯ್ಕ ಪರ್ಯಾಯ ಆಯ್ಕೆಯತ್ತ ಕಣ್ಣು ಹಿಗ್ಗಲಿಸಿದ್ದ. ಆಗ ಅವನಿಗೆ ಹುಲುಸಾಗಿ ಕಂಡಿದ್ದೇ ಎಸ್‌ಸಿಗೆ ಮೀಸಲಿರಿಸಿದ್ದ ಹಗರಿಬೊಮ್ಮನಹಳ್ಳಿ ಕ್ಷೇತ್ರ.

ಹೇಗೂ ಸಂತೋಷ್ ಲಾಡ್‌ನ ನೆರವು ಇತ್ತಾದ್ದರಿಂದ ಸಂಡೂರು ಕ್ಷೇತ್ರದಿಂದ ವಲಸೆಬಂದು ಹಗರಿಬೊಮ್ಮನಹಳ್ಳಿಗೆ ಗಂಟುಬಿದ್ದ ಶಾಸಕ ಲಾಡ್‌ನ ರಾಜಕೀಯ ಮತ್ತು ಗಣಿಗಾರಿಕೆಯ ರೊಕ್ಕ ಭೀಮಾನಾಯ್ಕನ ರಾಜಕೀಯ ಹೊಸ ಅವತಾರಕ್ಕೆ ಸಾತ್ ನೀಡಿತು. 2008ರ ಎಂಎಲ್‌ಎ ಎಲೆಕ್ಷನ್‌ಗೇ ಕಾಂಗ್ರೆಸ್ ಟಿಕೆಟ್ ಪಡೆಯುವ ಇರಾದೆ ಭೀಮಾನಾಯ್ಕನಿಗೆ ಇತ್ತಾದರು ಎಂ.ಪಿ.ಪ್ರಕಾಶ್‌ರು ಕ್ಷೇತ್ರದಲ್ಲಿ ಹೆಚ್ಚು ಮತದಾರರಿರುವ ಮಾದಿಗ ಸಮುದಾಯದ ಹೆಗಡಾಳು ರಾಮಣ್ಣನಿಗೆ ಟಿಕೇಟು ನೀಡಿದ್ದರು. ಆಗ ತನ್ನನ್ನು ಸಂಡೂರಿನಿಂದ ಜಿ.ಪಂ. ಸದಸ್ಯನನ್ನಾಗಿಸಿದ್ದ ಜೆಡಿಎಸ್ ಟಿಕೆಟ್ ಪಡೆದುಬಂದ ನಾಯ್ಕ, ಸ್ಪರ್ಧಿಸಿ ಬಿಜೆಪಿಯ ನೇಮರಾಜನಾಯ್ಕನ ಎದುರು ಹೀನಾಯವಾಗಿ ಸೋತಿದ್ದ. ಆಗ ಆತನಿಗೆ ಅಧಿಕಾರ ಅಂತ ಉಳಿದದ್ದು ಸಂಡೂರಿನ ಜಿಪಂ ಸದಸ್ಯಗಿರಿ ಮಾತ್ರ.

ತನ್ನ ಅಧಿಕಾರಾವಧಿ ಮುಗಿದಬಳಿಕ 2010ರಲ್ಲಿ ಅಧಿಕೃತವಾಗಿ ಕಾಂಗ್ರೆಸ್ ಸೇರಿಕೊಂಡ ಭೀಮಾನಾಯ್ಕ ಸಂತೋಷ್ ಲಾಡ್ ನೆರವಿನಿಂದ ಹಗರಿಬೊಮ್ಮನಹಳ್ಳಿಯ ಚೋರನೂರು ಕ್ಷೇತ್ರದಿಂದ ಜಿ.ಪಂ. ಟಿಕೆಟ್ ಗಿಟ್ಟಿಸಿದ್ದಲ್ಲದೆ ಸ್ಪರ್ಧಿಸಿ ಗೆದ್ದೂ ಬಿಟ್ಟಿದ್ದ. ಆದರೆ ಆತನ ರಗಳೆ ರಾಜಕಾರಣ ಅಲ್ಲಿಗೇ ನಿಲ್ಲುವಂತದ್ದಾಗಿರಲಿಲ್ಲ. 2013ರಲ್ಲಿ ಎರಡನೇ ಅವಧಿಗೆ ಜಿ.ಪಂ. ಅಧ್ಯಕ್ಷರನ್ನು ಆಯ್ಕೆ ಮಾಡುವಾಗ ತನ್ನ ನಿಷ್ಠೆಯನ್ನು ಮತ್ತೊಮ್ಮೆ ಕಾಂಗ್ರೆಸ್‌ನಿಂದ ಮಗ್ಗುಲುಬದಲಿಸಿ ಶ್ರೀರಾಮುಲುವಿನ ಬಿಎಸ್‌ಆರ್ ಕಾಂಗ್ರೆಸ್‌ನತ್ತ ಹೊರಳಿಸಿದ್ದ. ತನ್ನೊಟ್ಟಿಗೆ ನಾಲ್ವರು ಕಾಂಗ್ರೆಸ್ ಸದಸ್ಯರನ್ನೂ ಸೇರಿಸಿಕೊಂಡು ಕೈಗೇ ಕೈಕೊಟ್ಟು ಶ್ರೀರಾಮುಲು ಪಾರ್ಟಿಗೆ ಅಡ್ಡಮತ ಹಾಕಿದ್ದರಿಂದ ಜಿಪಂ ಅಧ್ಯಕ್ಷಗಿರಿ ಕಾಂಗ್ರೆಸ್ ಪಾರ್ಟಿಯ ಕೈತಪ್ಪಿ ಬಿಎಸ್‌ಆರ್ ಪಾರ್ಟಿಗೆ ಒದಗಿಹೋಗಿತ್ತು. ಮುಂದೊಂದು ದಿನ ಶ್ರೀರಾಮುಲು ಪಾರ್ಟಿಯಿಂದ ಎಂಎಲ್‌ಎ ಟಿಕೆಟ್ ಗಿಟ್ಟಿಸುವ ಆಶೆ ಆತನ ಮನದಲ್ಲಿತ್ತು. ಈ ನಡುವೆ ನಗರಸಭಾ ಚುನಾವಣೆಯಲ್ಲಿ ಬಳ್ಳಾರಿ ಮತದಾರರೇ ಬಿ.ಎಸ್.ಆರ್. ಪಾರ್ಟಿಯನ್ನು ಧೂಳಿಪಟ ಮಾಡಿ ಮನೆಗಟ್ಟಿದ ವಿದ್ಯಮಾನವೂ ನಡೆದುಹೋಯ್ತು. ಆ ಪಕ್ಷಕ್ಕೆ ರಾಜಕೀಯ ಭವಿಷ್ಯವಿಲ್ಲ ಎಂಬುದನ್ನು ಲೆಕ್ಕ ಹಾಕಿದ ಭೀಮಾನಾಯ್ಕ ಕಾಂಗ್ರೆಸ್‌ನಲ್ಲೇ ಉಳಿಯಲು ನಿರ್ಧರಿಸಿದ್ದ.



2013ರ ವಿಧಾನಸಭಾ ಚುನಾವಣೆಗೆ ಮತ್ತೆ ಕೈ ಪಾರ್ಟಿಯ ಟಿಕೆಟ್‌ಗೆ ಭೀಮಾನಾಯ್ಕ ಕಸರತ್ತು ನಡೆಸಿದನಾದರು ಈ ಹಿಂದೆ ಆತನ ನವರಂಗಿ ಬಣ್ಣವನ್ನು ಕಂಡಿದ್ದ ಪಕ್ಷ ಅವನನ್ನು ಕ್ಯಾರೇ ಎನ್ನದೆ ಅಲ್ಲಂ ವೀರಭದ್ರಪ್ಪನ ಶಿಷ್ಯ ಎಲ್. ಮಾರಣ್ಣನಿಗೆ ಟಿಕೆಟು ನೀಡಿತ್ತು. ತಡಮಾಡದ ಭೀಮಾನಾಯ್ಕ ತನ್ನ ಮಾತೃಪಕ್ಷ ಜೆಡಿಎಸ್‌ಗೆ ಲಂಗರು ಹಾಕಿ ಟಿಕೆಟ್ ಗಿಟ್ಟಿಸಿ ಬಂದಿದ್ದ.

ಇಬ್ಬರ ಜಗಳದ ಲಾಭ

ಅಷ್ಟಾದರು ಭೀಮಾನಾಯ್ಕ ಗೆಲ್ಲುವ ಯಾವ ಲಕ್ಷಣವೂ ಇರಲಿಲ್ಲ. ಗಣಿ ರೆಡ್ಡಿ ಪಟಾಲಂನ ಬಿಜೆಪಿಯ ನೇಮರಾಜನಾಯ್ಕ ಮತ್ತು ಕಾಂಗ್ರೆಸ್‌ನ ಮಾರಣ್ಣನ ನಡುವೆಯೇ ಭರ್ಜರಿ ಕದನವಿತ್ತು. ಹಾಗೆ ನೋಡಿದರೆ ಭ್ರಷ್ಟತೆ ಮಣ್ಣು ಮೆತ್ತಿಸಿಕೊಂಡಿದ್ದ ಬಿಜೆಪಿ ಸರ್ಕಾರದಿಂದಾಗಿ ಕಾಂಗ್ರೆಸ್‌ನ ಎಲ್. ಮಾರಣ್ಣನೇ ಗೆಲ್ಲುವ ಕ್ಯಾಂಡಿಡೇಟು ಎಂದು ಅಂದಾಜಿಸಲಾಗಿತ್ತು. ದುರಾದೃಷ್ಟವೆಂಬಂತೆ ಕೈ ಪಾರ್ಟಿಯೊಳಗೆ ಬಂಡಾಯದ ಹೊಗೆ ಭುಗಿಲೇಳಲು ಶುರುವಾಗಿತ್ತು. ಅಲ್ಲಂ ಶಿಷ್ಯನಿಗೆ ಟಿಕೆಟ್ ದಕ್ಕಿದ್ದರಿಂದ ಸಿಟ್ಟಿಗೆದ್ದ ಒಂದಷ್ಟು ಕಾಣದ ಕೈಗಳು ಕೆಲಸ ಮಾಡಲು ಆರಂಭಿಸಿದ್ದರೆ ಅತ್ತ ಯಡ್ಡಿಯನ್ನು ಹೀನಾಯವಾಗಿ ಹೊರಗಟ್ಟಿದ್ದ ಬಿಜೆಪಿಗೆ ತಕ್ಕ ಪಾಠ ಕಲಿಸಲೆಂದು ಲಿಂಗಾಯತ ಸಮುದಾಯದ 8 ಜನ ಸ್ವಾಮಿಗಳು ನೇಮಿರಾಜ ನಾಯ್ಕನ ವಿರುದ್ಧ ಕತ್ತಿ ಮಸೆದಿದ್ದರು. ಶ್ರೀರಾಮುಲು ಕಾರಣಕ್ಕೆ ವಾಲ್ಮೀಕಿ ಸಮುದಾಯದ ಮತಗಳೂ ಬಿಜೆಪಿಯಿಂದ ವಿಮುಖಗೊಂಡಿದ್ದವು. ಈ ಇಬ್ಬರು ಪ್ರಬಲ ಸ್ಪರ್ಧಿಗಳ ನಡುವೆ ಮತಗಳಿಕೆ ಹೀಗೆ ಹರಿದು ಹಂಚಿಹೋಗಿದ್ದರಿಂದ ಲಾಭ ಆದದ್ದು ಭೀಮಾನಾಯ್ಕನಿಗೆ. ಭೀಮಾನಾಯ್ಕ ಗೆದ್ದದ್ದು ಕೇವಲ 125 ಮತಗಳ ಅಂತರದಲ್ಲಿ ಎನ್ನುವ ವಾಸ್ತವವೇ ಆತನ ಗೆಲುವಿನ ಹಿಂದಿರುವ ಹಂಚಿಕೆ ರಾಜಕಾರಣದ ಅಸಲಿಯತ್ತನ್ನು ಬಿಚ್ಚಿಡುತ್ತದೆ.

ಹೀಗೆ ಒಲಿದುಬಂದ ಅದೃಷ್ಟ ಭೀಮಾನಾಯ್ಕನ ದುರಾಡಳಿತದೆದುರು ಪತರುಗುಟ್ಟಿ ಹೋಯಿತು. ಕೇವಲ ಎರಡೂವರೆ ವರ್ಷಗಳಲ್ಲಿಯೇ ಭೀಮಾನಾಯ್ಕ ಶಾಸಕತ್ವವನ್ನು ದುರುಪಯೋಗಪಡಿಸಿಕೊಂಡು ದಾಖಲೆ ನಿರ್ಮಿಸಿದ್ದಾನೆ. ಕ್ಷೇತ್ರದ ಪ್ರಗತಿಯಕಡೆ ಗಮನ ಹರಿಸದೆ ತನ್ನ ಉದ್ಧಾರದ ಕಡೆಯೇ ಗಮನಹರಿಸಿದ. ಸ್ವಜಾತಿ ಪ್ರೀತಿಗೆ ಗಂಟುಬಿದ್ದು ಕ್ಷೇತ್ರವನ್ನೇ ಗಬ್ಬೆಬ್ಬಿಸಿದ್ದಾನೆ. ಕಮೀಶನ್ ದಂಧೆಗಿಳಿದಿರುವ ನಾಯ್ಕ ಪ್ರತೀ ಇಲಾಖೆಯ ಆಯಕಟ್ಟಿನ ಜಾಗಗಳಿಗೆ ಸ್ವಜಾತಿ ಅಧಿಕಾರಿಗಳನ್ನು ತಂದು ಕೂರಿಸಿ ಆರ್ಥಿಕವಾಗಿ ದುಂಡಗಾಗುತ್ತಿದ್ದಾನೆ.

ಜೆಡಿಎಸ್ ತಾಲ್ಲೂಕಾಧ್ಯಕ್ಷ ಅಕ್ಕಿ ತೋಟೇಶ, ಎ.ಪಿ.ಎಂ.ಸಿ. ಅಧ್ಯಕ್ಷ ಹೂಗಾರ ಮಲ್ಲಿಕಾರ್ಜುನ, ತಾ.ಪಂ. ಸದಸ್ಯ ಉಪ್ಪಾರ ಬಾಲು, ಉಡೇದ ಬಸವರಾಜರಂತಾ ನಟೋರಿಯಸ್‌ಗಳು ಶಾಸಕ ಭೀಮಾನಾಯ್ಕನ ಪರವಾಗಿ ವಸೂಲಿಗೆ ನಿಂತಿದ್ದಾರೆ. ಪಿ.ಎಸ್.ಐ. ವಿಜಯಕುಮಾರ್ ನಂಥವರ ಸಾಥ್ ಕೂಡಾ ಈ ದಂಧೆಗಿದೆ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿಗೆಂದು ಬಂದಿರುವ 100 ಕೋಟಿ ವಿಶೇಷಾನುದಾನದ ಕಾಮಗಾರಿಯನ್ನು ಲ್ಯಾಂಡ್ ಆರ್ಮಿಯ ಕಳ್ಳರ ಕೈಗಿಡುವ ಮೂಲಕ ಕಳಪೆ ಕಾಮಗಾರಿಗೆ ಕೈಹಾಕಿ ಕೈ ಬೆಚ್ಚಗಾಗಿದ್ದಾನೆ ಎಂಬ ಕೂಗುಗಳು ಸಾರ್ವಜನಿಕರ ನಡುವೆ ಕೇಳಿಬರುತ್ತಿವೆ. ಸಂಡೂರು–ಮರಿಯಮ್ಮನಹಳ್ಳಿಯಲ್ಲಿನ ಎಸ್.ಎಲ್.ಆರ್, ಬಿ.ಎನ್.ಎಂ., ಹೆಚ್.ಕೆ.ಟಿ. ಗಣಿಗಾರಿಕೆಯ ಪರವಾನಗಿ ಕಸರತ್ತಿನ ಹಿಂದೆ ಕೋಟ್ಯಾಂತರ ಲಾಭ ಮಾಡಿಕೊಂಡಿರುವ ಭೀಮಾನಾಯ್ಕ ತನ್ನ ಕರ್ತವ್ಯವನ್ನೇ ಮರೆತಿದ್ದಾನೆ. ಇನ್ನುಳಿದ ಎರಡೂವರೆ ವರ್ಷದಲ್ಲಿ ಕ್ಷೇತ್ರದ ಅಭಿವೃದ್ಧಿಯತ್ತ ಆತ ಮಗ್ಗುಲು ಬದಲಿಸದಿದ್ದರೆ ಮುಂದಿನ ಚುನಾವಣೆಯಲ್ಲಿ ಜನ ಆತನಿಗೆ ತಕ್ಕ ಪಾಠ ಕಲಿಸುವುದು ಸುಳ್ಳಲ್ಲ.

■ ಟಿ.ಎನ್.ಷಣ್ಮುಖ

ಸಿಎಂಗೆ ಪತ್ರ

ಗತ್ಯವಿರುತ್ತದೆ. (ಎ) ಬೆಳೆಗಳು ಸಂಪೂರ್ಣ ವ ಅಥವ ಬಹುತೇಕ ನಾಶವಾಗಿರುವ ಬೆಳೆ ಸಾಲಗಳನ್ನು ಸಂಪೂರ್ಣವಾಗಿ ಮನ್ನಾ , ಒಂದುವೇಳೆ ಸಾಧ್ಯವಿಲ್ಲ ಎನ್ನುವುದಾದರೆ ಮಾದರೂ ಮನ್ನಾ ಮಾಡುವುದು (ಬಿ) ಹಿಂದಿನ ಳನ್ನು ಒಳಗೊಂಡು ಎಲ್ಲ ಸಾಲಗಳ ಬಡ್ಡಿ ವುದು (ಸಿ) ಬಾಕಿಯಿರುವ ಸಾಲದ ಮೊತ್ತಗಳ ಅವಧಿಯನ್ನು ಪುನರ್‌ರೂಪಿಸುವುದು (ಡಿ) ಬ್ಯಾಂಕುಗಳು ಕೂಡ ರೈತರ ಸಾಲಗಳನ್ನು ರ್‌ರಚನೆಗೊಳಪಡಿಸುವಂತೆ ಕೇಂದ್ರ ಸರ್ಕಾರ ಬ್ಯಾಂಕ್‌ಗಳನ್ನು ಆಗ್ರಹಿಸುವುದು. (ಇ) ಲೇವಾದೇವಿದಾರರ ವಿಪರೀತ ಬಡ್ಡಿದರವನ್ನು ರೈತರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡಲು ಒಂದು ಕ್ರಿಯಾಶೀಲವಾದ ಪರ್ಯಾಯ ರೂಪಿಸುವುದು.

GNREGA ಯೋಜನೆಯ ಘೋಷಿತ ತ ಅಕ್ಷರಶಃ ಜಾರಿಗೆ ತರುವುದು.

ಕೇಂದ್ರ ಸರ್ಕಾರವು ಈ ಯೋಜನೆಯಡಿ ಮಿತಿಯನ್ನು 100ರಿಂದ 150 ದಿನಗಳಿಗೆ ಸಿದೆ. ಆದರೆ ಈ ಯೋಜನೆ ಇನ್ನೂ ದೆ. ಈಗ ಅಸ್ತಿತ್ವದಲ್ಲಿರುವ 100 ದಿನಗಳ ಯೂ ಕೇವಲ ಶೇಕಡ 15ರಷ್ಟು ಮಾತ್ರ ನೆ. ಆದ್ದರಿಂದ ನಮ್ಮ ಸಲಹೆಗಳು ಹೀಗಿವೆ. REGA ಯೋಜನೆಯಡಿಯಲ್ಲಿ ಲಭ್ಯವಿರುವ ದೊಡ್ಡ ಪ್ರಮಾಣದಲ್ಲಿ ವಿಸ್ತರಿಸಬೇಕು. (ಬಿ) ಕೆರೆಗಳ ನಿರ್ಮಾಣ, ಮತ್ತು ಕೆರೆಗಳ ಶುದ್ಧೀಕರಣದಂತಹ ಸಾಮೂಹಿಕ ಕಾರ್ಯಗಳ ಮೇಲೆ ಈ ಯೋಜನೆಯ ಕೆಲಸಗಳು ಕೇಂದ್ರೀಕೃತವಾಗಬೇಕು. ಆ ಮೂಲಕ ಬರ ಪರಿಹಾರದ ಕಾರ್ಯಗಳು ದೀರ್ಘಕಾಲಿಕವಾಗಿ ಬರಗಳನ್ನು ನಿವಾರಿಸಲು ಅನುವು ಮಾಡುತ್ತವೆ. (ಸಿ) ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ 15 ದಿನಗಳೊಳಗಾಗಿ ಕೆಲಸ ಒದಗಿಸಬೇಕೆಂಬ ಕಾನೂನನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು; ಬರಗಾಲ ಪರಿಸ್ಥಿತಿಯಲ್ಲಿ ಈ ಕಾನೂನನ್ನು ಉಲ್ಲಂಘನೆ ಮಾಡುವವರನ್ನು ಶಿಕ್ಷೆಗೊಳಪಡಿಸಬೇಕು (ಡಿ) ಕೆಲಸಗಳು ಪೂರ್ಣಗೊಂಡ ಕೂಡಲೆ ಅವುಗಳ ಮಾಪನ ಮಾಡಬೇಕು ಮತ್ತು ಮಳೆಯಾದಾಗ ಕೆಲಸಗಳು ಅಸ್ತವ್ಯಸ್ತಗೊಂಡ ನಂತರ ಮಾಪನ ಮಾಡುವ ಪರಿಪಾಠ ಕೈಬಿಡಬೇಕು. (ಇ) ಕೆಲಸಗಳು ಪೂರ್ಣಗೊಂಡ 15 ದಿನಗಳೊಳಗಾಗಿ ಹಣ ಪಾವತಿ ಮಾಡಬೇಕು; ಬರಗಾಲದ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು 7 ದಿನಗಳೊಳಗಾಗಿ ಹಣ ಪಾವತಿ ಮಾಡಲು ಪ್ರಯತ್ನಿಸಬೇಕು.

4. ಪಿಡಿಎಸ್ ಮೂಲಕ ಕೊಡುತ್ತಿರುವ ಅಕ್ಕಿಯ ಪ್ರಮಾಣವನ್ನು ಹೆಚ್ಚಿಸುವುದು.

ನಿಮ್ಮ ಸರ್ಕಾರದ ಮಾದರಿ ಯೋಜನೆಯಾದ ಅನ್ನಭಾಗ್ಯ ಯೋಜನೆ ಮೂಲಕ ಪ್ರತಿ ವ್ಯಕ್ತಿಗೆ ತಿಂಗಳಿಗೆ 3 ಕೆಜಿ ಅಕ್ಕಿ (ಹೆಚ್ಚುವರಿಯಾಗಿ 2 ಕೆಜಿ ಗೋಧಿ)ಯನ್ನು ಉಚಿತವಾಗಿ ಒದಗಿಸುತ್ತಿದ್ದೀರಿ. ಆದರೆ ಆಹಾರ ಭದ್ರತಾ ಕಾಯ್ದೆ ನಿಗದಿಗೊಳಿಸಿರುವ 7 ಕೆಜಿ ಮಿತಿಯ ದೃಷ್ಟಿಯಿಂದಲೂ ಅಥವ ಗ್ರಾಮೀಣ ಬಡಜನರ ಅಗತ್ಯದ ದೃಷ್ಟಿಯಿಂದ ನೋಡಿದರೂ ಈ ಪರಿತರ ತೀರಾ ಕಡಿಮೆ ಎಂಬುದು ವಿವಾದಾತೀತ ಸಂಗತಿ. ಇಂದಿನ ಬರಗಾಲದ ಸ್ಥಿತಿಯಲ್ಲಿ ಕೆಲಸ ಸಿಗುವ ಅವಕಾಶಗಳು ಬಹಳ ಕಡಿಮೆಯಾಗಿದ್ದು ಗ್ರಾಮೀಣ ಬಡಜನತೆ ತಮಗೆ ಅಗತ್ಯವಿರುವ ಆಹಾರವನ್ನು ಮಾರುಕಟ್ಟೆ ಬೆಲೆಯಲ್ಲಿ ಖರೀದಿ ಮಾಡಲು ಅಶಕ್ತರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಅನ್ನಭಾಗ್ಯ ಯೋಜನೆಯಡಿ, ಬರಪೀಡಿತ ತಾಲೂಕುಗಳಲ್ಲಿ ತಿಂಗಳಿಗೆ ಹೆಚ್ಚುವರಿಯಾಗಿ 4 ಕೆಜಿ ಅಕ್ಕಿ ಒದಗಿಸಲು ಕ್ರಮ ಕೈಗೊಳ್ಳಬೇಕು. ಈ ಕ್ರಮವು ಬರದಿಂದ ತತ್ತರಿಸಿರುವ ಜನರಿಗೆ ತಾತ್ಕಾಲಿಕ ಉಪಶಮನ ಒದಗಿಸಬಲ್ಲುದು. ಆಹಾರ ಧಾನ್ಯಗಳ ಜೊತೆಗೆ ಬೇಳೆಕಾಳುಗಳನ್ನು ಪಿಡಿಎಸ್ ಮೂಲಕ ಸರಬರಾಜು ಮಾಡಿ ಗ್ರಾಮೀಣ ಬಡಜನರಿಗೆ ಪೌಷ್ಟಿಕ ಆಹಾರವನ್ನು ಒದಗಿಸಿ ಇಡೀ ರಾಷ್ಟ್ರಕ್ಕೇ ಮಾದರಿಯಾಗಬಲ್ಲ ಯೋಜನೆ ಜಾರಿಮಾಡಲು ತಮ್ಮ ಸರ್ಕಾರ ಕ್ರಮ ಕೈಗೊಳ್ಳಬೇಕು. ಬರಪೀಡಿತ ತಾಲೂಕುಗಳ ಬಡಜನರ ಸಂಕಷ್ಟವನ್ನು ಸ್ವಲ್ಪವಾದರೂ ಉಪಶಮನ ಮಾಡಲು ಎಲ್ಲ ಬಿಪಿಎಲ್ ಕಾರ್ಡು ಅರ್ಜಿದಾರರಿಗೆ ಈ ಕೂಡಲೇ ಕಾರ್ಡು ವಿತರಣೆ ಮಾಡುವುದು.

5. ಆತ್ಮಹತ್ಯೆ ಮಾಡಿಕೊಂಡ ರೈತರಿಗೆ ಪರಿಹಾರ ಒದಗಿಸಲು ಸರ್ಕಾರಿ ಆದೇಶ.

ಇತ್ತೀಚೆಗೆ ತೆಲಂಗಾಣ ಸರ್ಕಾರ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳನ್ನು ನಿಖರವಾಗಿ ಗುರುತಿಸಲು ಮತ್ತು ಅವರಿಗೆ ಸಮಗ್ರ ಪರಿಹಾರ ಪ್ಯಾಕೇಜು ಒದಗಿಸುವ ದೃಷ್ಟಿಯಿಂದ ಒಂದು ಅಧಿಕೃತ ಸರ್ಕಾರಿ ಆದೇಶವನ್ನು ಹೊರಡಿಸಿದೆ. ಇದೇ 2015ರ ಸೆಪ್ಟೆಂಬರ್ 19 ರಂದು ನಡೆದ ಈ ವಿಷಯದ ಪತ್ರಿಕಾಗೋಷ್ಠಿ ಕೂಡ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಪ್ರಚಾರ ಪಡೆದುಕೊಂಡಿದೆ. ನಿಮ್ಮ ಸರ್ಕಾರ ಇಂಥದೇ ಒಂದು ಸರ್ಕಾರಿ ಆದೇಶ (ಜಿ.ಒ) ಹೊರಡಿಸಿದರೆ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಪರಿಹಾರ ಒದಗಿಸುವ ವಿಷಯದಲ್ಲಿ ಕರ್ನಾಟಕ ಮಾತ್ರವಲ್ಲದೆ ಇಡೀ ದೇಶದಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ಗೊಂದಲ ಹಾಗೂ ಅನಿಶ್ಚಿತತೆಗಳನ್ನು ನಿವಾರಿಸಿದಂತಾಗುತ್ತದೆ. ಈ ಹೊಸ ಯೋಜನೆಯು ಈ ಕೆಳಕಂಡ ಅಂಶಗಳನ್ನು ಒಳಗೊಂಡಿರಬೇಕು. (ಎ) ರೈತರ ಆತ್ಮಹತ್ಯೆಗಳಿಗೆ ಸಂಬಂಧಿಸಿದ ಅಧಿಕಾರಶಾಹಿ ತೊಡಕುಗಳನ್ನು ನಿವಾರಿಸಬೇಕು; ಭೂಮಿಯ ಒಡೆತನ ಹಾಗೂ ಸಾಲ ಪಡೆದುದಕ್ಕೆ ದಾಖಲಾತಿಗಳನ್ನು ಒದಗಿಸಬೇಕೆಂಬ ನಿಬಂಧನೆಗಳನ್ನು ರದ್ದುಪಡಿಸಬೇಕು. (ಬಿ) ಇತರ ರೈತರಿಂದ ಭೂಮಿಯನ್ನು ಗುತ್ತಿಗೆ ಪಡೆದು ಕೃಷಿ ಮಾಡಿದ್ದ ಭೂಹೀನ ರೈತರನ್ನು ಕೂಡ ರೈತರೆಂದೇ ಪರಿಗಣಿಸಬೇಕು. (ಸಿ) ಆ ಕುಟುಂಬಗಳಿಗೆ ನೀಡುವ ಪರಿಹಾರ ಪ್ಯಾಕೇಜು ಈ ಕೆಳಕಂಡ ಅಂಶಗಳನ್ನು ಒಳಗೊಂಡಿರಬೇಕು. ಬಾಕಿಯಿರುವ ಸಾಲಗಳನ್ನು ಸಂಪೂರ್ಣ ಮನ್ನಾ ಮಾಡುವುದು, ಕುಟುಂಬಕ್ಕೆ ಪರಿಹಾರ ಮೊತ್ತದ ಪಾವತಿ, ಮೃತರ ಮಕ್ಕಳಿಗೆ ಶಿಕ್ಷಣ ನೀಡಲು ನೆರವಾಗುವುದು ಇತ್ಯಾದಿ.

ಕರ್ನಾಟಕದ ಗ್ರಾಮೀಣ ಬಡಜನತೆಯ ದೈನಂದಿನ ಬದುಕೇ ಒಂದು ದೊಡ್ಡ ಹೊರೆಯಾಗಿ, ಅವರ ಅಸ್ತಿತ್ವವೇ ಪ್ರಶ್ನೆಗೊಳಗಾಗಿರುವ ಇಂದಿನ ಕರಾಳ ಸಂದರ್ಭದಲ್ಲಿ ನಿಮ್ಮ ಸರ್ಕಾರ ಈ ಬಡಜನರ ಜೊತೆಗೆ ನಿಲ್ಲುತ್ತದೆ ಎಂಬ ಭರವಸೆ ನನಗಿದೆ. ಜನರ ಪ್ರತಿನಿಧಿಯಾಗಿ ಪ್ರಜಾತಾಂತ್ರಿಕವಾಗಿ ಆರಿಸಿ ಬಂದಿರುವ ಸರ್ಕಾರದಿಂದ ಉತ್ತಮ ಸ್ಪಂದನೆಯನ್ನು ಕರ್ನಾಟಕದ ಜನತೆ ನಿರೀಕ್ಷಿಸುತ್ತಿರುವುದು ನ್ಯಾಯೋಚಿತವಾಗಿದೆ. ತಾವು ಈ ನಿರೀಕ್ಷೆಯನ್ನು ಈಡೇರಿಸುತ್ತೀರೆಂದು ಆಶಿಸುತ್ತೇನೆ.

ನಿಮ್ಮ ವಿಶ್ವಾಸಿ
ಯೋಗೇಂದ್ರ ಯಾದವ್
ರಾಷ್ಟ್ರೀಯ ಸಂಚಾಲಕ
ಜೈ ಕಿಸಾನ್ ಆಂದೋಲನ
(ಇವರ ಪರವಾಗಿ)

ಬೇಲಿಯೇ ಹೊಲವ ಮೇಯ್ದರೆ ಕಾಯುವವರಾರ

2013ರ ಚುನಾವಣೆಗಳಲ್ಲಿ ಕೋಮುವಾದಿ ಬಿಜೆಪಿ ಸರಕಾರವನ್ನು ಕೆಳಗಿಳಿಸಿ ಜಾತ್ಯತೀತವೆಂದು ಕರೆದುಕೊಳ್ಳುವ ಕಾಂಗ್ರೆಸ್ ಸರಕಾರವನ್ನು ಅಧಿಕಾರಕ್ಕೆ ತಂದ ಕರ್ನಾಟಕದ ಮತದಾರರು ಇನ್ನು ಮುಂದೆ ರಾಜ್ಯದಲ್ಲಿ ಕೋಮುವಾರು ಘಟನೆಗಳ ಪ್ರಮಾಣ ಇಳಿಮುಖವಾಗಲಿದೆ, ಶಾಂತಿ ಸೌಹಾರ್ದದ ವಾತಾವರಣ ನೆಲಸಲಿದೆ ಎಂಬ ಬಲವಾದ ನಂಬಿಕೆಯನ್ನು ಇಟ್ಟುಕೊಂಡಿದ್ದರು. ಆದರೆ ದಿನಗಳೆದಂತೆ ಜನರ ನಿರೀಕ್ಷೆಗಳೆಲ್ಲವೂ ಹುಸಿಯಾಗುತ್ತಿವೆ. ಅವರಲ್ಲಿ ಇಂದು ಯಾವುದೇ ಸರಕಾರ ಬಂದರೂ ಇಲ್ಲಿನ ಪರಿಸ್ಥಿತಿಯನ್ನು ಬದಲಾಯಿಸಲಾಗದು ಎಂಬ ಹತಾಶೆಯ ಮನೋಭಾವ ಬೇರೂರತೊಡಗಿದೆ. ಹಿಂದೂ ರಾಷ್ಟ್ರೀಯವಾದಿಗಳ ಪ್ರಯೋಗಶಾಲೆ ಎಂದೇ ಪರಿಗಣಿಸಲ್ಪಟ್ಟಿರುವ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯನ್ನೆ ತೆಗೆದುಕೊಂಡರೆ ಇತ್ತೀಚಿನ ಮೂರು ವರ್ಷಗಳ ಅಂಕಿಅಂಶಗಳನ್ನು ಹೋಲಿಸಿದಾಗ ಕೋಮುವಾರು ಘಟನೆಗಳು ಅವ್ಯಾಹತವಾಗಿ ನಡೆಯುತ್ತಲೇ ಇರುವುದನ್ನು ಗಮನಿಸಬಹುದು (2013ರಲ್ಲಿ 121, 2014ರಲ್ಲಿ 173 ಮತ್ತು 2015ರಲ್ಲಿ ಇದುವರೆಗೆ 142). ಹಾಗೆ ನೋಡಿದರೆ ಜಿಲ್ಲೆಯ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸುವವರಿಗೆ ಸಂಘ ಪರಿವಾರದ ಸಂಘಟನೆ/ವ್ಯಕ್ತಿಗಳನ್ನು ಒಳಗೊಂಡಂತಹ ಹೆಚ್ಚುಕಡಿಮೆ ಎಲ್ಲ ಪ್ರಕರಣಗಳಲ್ಲೂ ಇಲ್ಲಿನ ಕಾನೂನು ಪರಿಪಾಲಕರ ನಡೆ ಸಾಕಷ್ಟು ಅನುಮಾನಗಳನ್ನು ಹುಟ್ಟುಹಾಕಿತ್ತು, ಉದಾಹರಣೆಯಾಗಿ ಕೆಲವು ಘಟನೆಗಳನ್ನು ಉಲ್ಲೇಖಿಸಬಹುದು.

- 2008ರ ಮಾಲೆಗಾಂವ್ ಸ್ಫೋಟಗಳ ನಂತರ 2009ರ ಜನವರಿ 17ರಂದು ಉಡುಪಿಯಲ್ಲಿ ಹಿಂದೂ ಜನಜಾಗೃತಿ ಸಮಿತಿ ಆಯೋಜಿಸಿದ್ದ ಹಿಂದೂ ಧರ್ಮ ಜಾಗೃತಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಶ್ರೀರಾಮ ಸೇನೆಯ ಮುಖ್ಯಸ್ಥ ಪ್ರಮೋದ್ ಮುತಾಲಿಕ್ "ಮಾಲೆಗಾಂವ್ ಘಟನೆ ಮುಂಬರಲಿರುವ ಘಟನೆಗಳ ಒಂದು ಝಲಕ್ ಮಾತ್ರ........ ಅತಿ ಶೀಘ್ರದಲ್ಲಿ ಪ್ರತಿಯೊಂದು ಹಿಂದೂ ಮನೆಯಲ್ಲಿಯೂ ಓರ್ವ ಪ್ರಜ್ಞಾ ಸಿಂಗ್ ತಲೆ ಎತ್ತಲಿದ್ದಾಳೆ" ಎಂದು ಹೇಳಿದ್ದ (ದ ಹಿಂದು, 30.1.2009). ಜಿಲ್ಲೆಯಾದ್ಯಂತ ಇಂತಹ ಪ್ರಚೋದನಕಾರಿ ಭಾಷಣಗಳನ್ನು ಮಾಡುತ್ತಲೇ ಇರುವ ದೊಡ್ಡದೊಂದು ಪಡೆಯೇ ಇದೆ. ಆದರೆ ಪೊಲೀಸರು ಇದುವರೆಗೆ ಯಾರೊಬ್ಬನ ವಿರುದ್ಧವಾದರೂ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡ ನಿದರ್ಶನಗಳಿಲ್ಲ, ಒಂದು ವೇಳೆ ಸಾರ್ವಜನಿಕರು ದೂರು ನೀಡಿದರೂ ಪರಿಣಾಮ ಶೂನ್ಯ. ದೂರಿನ ನಂತರದ ಆಮೆಗತಿಯ ಪ್ರಕ್ರಿಯೆ ಒಂದು ಹಂತಕ್ಕೆ ತಲುಪಿದ ನಂತರ ಎಲ್ಲವೂ ಹೆಚ್ಚುಕಡಿಮೆ ಸ್ಥಗಿತಗೊಳ್ಳುತ್ತದೆ ಅಥವಾ ಸಚಿವಸಂಪುಟ ಕೇಸುಗಳನ್ನು ವಾಪಾಸು ಪಡೆದುಕೊಳ್ಳುತ್ತದೆ.
- ಜುಲೈ 2009ರಲ್ಲಿ ಶ್ರೀರಾಮ ಸೇನೆಯ ಸದಸ್ಯರಿಗಾಗಿ ಉಡುಪಿ ಜಿಲ್ಲೆಯ ಬಾರಕೂರಿನಲ್ಲಿ ಮೂರು ದಿನಗಳ ತರಬೇತಿ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು, ಶಿಬಿರ ಅಂತ್ಯಗೊಂಡ ಬಳಿಕ ಜುಲೈ 19ರಂದು ಸುದ್ದಿಗಾರರೊಂದಿಗೆ ಮಾತನಾಡಿದ ಮುತಾಲಿಕ್ ಭಯೋತ್ಪಾದಕರಿಂದ ಬೆದರಿಕೆಗಳನ್ನೂ ಮತಾಂತರದ ಅಪಾಯಗಳನ್ನೂ ಎದುರಿಸಲು ಹಾಗೂ ದಾಳಿಗಳನ್ನು ನಡೆಸಲು 158 ಮಂದಿಯ ಒಂದು ಹೋರಾಟದ ಪಡೆ ಸಜ್ಜುಗೊಂಡಿದೆ ಎಂದಿದ್ದ (ವಾರ್ತಾಭಾರತಿ, 20.1.2009). ಉಗ್ರ ಬಲಪಂಥೀಯ ಸಂಘಟನೆಗಳು ಆಯೋಜಿಸುವ ಇಂತಹ ಆಯುಧ ತರಬೇತಿ ಕಾರ್ಯಕ್ರಮಗಳು ಮತ್ತು "ಹೋರಾಟದ ಪಡೆ"ಗಳ ಬಗ್ಗೆ ಯಾವುದೇ ವಿಧದ ಪೊಲೀಸ್ ತನಿಖೆ ನಡೆದಂತಿಲ್ಲ.
- ಪೊಲೀಸರಿಗೆ ಜಾನುವಾರು ಸಾಗಾಟ ವಾಹನಗಳ ವಿರುದ್ಧದ ಕಾರ್ಯಾಚರಣೆಯಲ್ಲಿ ಇರುವಷ್ಟು ಅತೀವ ಆಸಕ್ತಿ ಪ್ರಯಾಣಿಕರನ್ನು ಜಾನುವಾರುಗಳಿಗಿಂತಲೂ ಕೆಟ್ಟದಾಗಿ ತುಂಬಿ ಸಾಗಿಸುವ ಬಸ್ಸುಗಳ ಬಗ್ಗೆ ಇಲ್ಲ.
- ಅನೈತಿಕ ರೌಡಿಗಿರಿ ಪ್ರಕರಣಗಳಲ್ಲಿ ಕಾನೂನು ಕೈಗೆತ್ತಿಕೊಳ್ಳುವ ಸಂಘಟನೆಗಳ ಮೇಲೆ ಕ್ರಮ ಜರುಗಿಸುವ ಬದಲು ಸಂತ್ರಸ್ತರಿಗೆ, ಅವರ ಅಪ್ಪಅಮ್ಮಂದಿರಿಗೆ ಬುದ್ಧಿವಾದ ಹೇಳಲಾಗುತ್ತದೆ.
- 2006ರ ಕೋಮು ದಾಳಿ, 2008ರ ಚರ್ಚ್ ದಾಳಿಗಳನ್ನೂ ಒಳಗೊಂಡಂತೆ ಹೆಚ್ಚುಕಡಿಮೆ ಪ್ರತಿಯೊಂದು ಕೋಮು ದುರ್ಘಟನೆಯ ಸಂದರ್ಭದಲ್ಲಿ ಪೊಲೀಸರ ಪಕ್ಷಪಾತೀಯ ವರ್ತನೆಯನ್ನು ಹಲವಾರು ಸ್ವತಂತ್ರ ತನಿಖೆಗಳು ದೃಢಪಡಿಸಿವೆ.
- 2011ರ ದಸರಾ ಹಬ್ಬದ ವೇಳೆ ಶಂಕಿತ ಭಯೋತ್ಪಾದಕಿ ಸಾಧ್ವಿ ಪ್ರಜ್ಞಾಸಿಂಗ್ ಠಾಕೂರಳ ಬೃಹತ್ ಕಟೌಟೊಂದು ಉಳ್ಳಾಲದಲ್ಲಿ ಮೂರು ದಿನಗಳ ಕಾಲ ಅನಿರ್ಬಂಧಿತವಾಗಿ ರಾರಾಜಿಸುತ್ತಿತ್ತು.





- ರಾಜ್ಯದಲ್ಲಿ ಬಿಜೆಪಿ ಆಡಳಿತ ಇದ್ದಾಗ ಕ್ರೈಸ್ತ ಪಾಸ್ಟರ್‌ಗಳನ್ನು ಪೊಲೀಸ್ ಠಾಣೆಗಳಿಗೆ, ಕೇಂದ್ರ ಕಚೇರಿಗೆ ಕರೆಸಿ ಅವರು ಮನೆಗಳಲ್ಲಿ ಮತ್ತು ಹಾಲ್‌ಗಳಲ್ಲಿ ಪ್ರಾರ್ಥನೆ ಮಾಡಬಾರದು ಎಂದು ಧಮಕಿ ಹಾಕಲಾಗುತ್ತಿತ್ತು.
- ಸನಾತನ ಸಂಸ್ಥೆ ಎಂಬ ಶಂಕಿತ ಭಯೋತ್ಪಾದಕ ಸಂಘಟನೆ ಸಂಚಾರಿ ಮಳಿಗೆಗಳ ಮೂಲಕ ಲವ್ ಜಿಹಾದ್, ಮತಾಂತರ ಬಗ್ಗೆ ಕಪೋಲಕಲ್ಪಿತ ಮಾಹಿತಿಗಳಿರುವ ಪುಸ್ತಕಗಳು, ಹಿಂದೂ ರಾಷ್ಟ್ರ ಕ್ಯಾಲೆಂಡರ್ ಇತ್ಯಾದಿಗಳನ್ನು ರಾಜಾರೋಷವಾಗಿ ಮಾರಾಟ ಮಾಡುತ್ತಿದ್ದರೂ ಪೊಲೀಸರು ಯಾವುದೇ ಕ್ರಮ ಕೈಗೊಂಡಿರಲಿಲ್ಲ.
- 2011ರಲ್ಲಿ ಆರೆಸ್ಸೆಸ್ ಜೊತೆ ನಿಕಟ ಸಂಬಂಧವುಳ್ಳ ಕಲ್ಲಡ್ಕದ ಶಾಲೆಯೊಂದರ ಕಾರ್ಯಕ್ರಮದಲ್ಲಿ ಭಾಗವಹಿಸಿದ ಜಿಲ್ಲಾಧಿಕಾರಿ ಮತ್ತು ಪೊಲೀಸ್ ಆಯುಕ್ತರು ಕೇಸರಿ ಶಾಲು ಹೊದ್ದು ಸ್ಥಾನೀಯ ಆರೆಸ್ಸೆಸ್ ನಾಯಕ ಕಲ್ಲಡ್ಕ ಪ್ರಭಾಕರ ಭಟ್ ಜೊತೆ ವೇದಿಕೆಯಲ್ಲಿ ಕುಳಿತಿದ್ದರು.
- ಆರೆಸ್ಸೆಸ್ ಈಶಾನ್ಯ ರಾಜ್ಯಗಳಿಂದ ಮಕ್ಕಳನ್ನು ಕರ್ನಾಟಕಕ್ಕೆ ಅನಧಿಕೃತವಾಗಿ ಸಾಗಿಸಿ ತನ್ನ ಸರಸ್ವತಿ ಶಿಶುಮಂದಿರ ಮತ್ತಿತರ ಶಾಲೆಗಳಲ್ಲಿ ವೈದಿಕೀಕರಣಕ್ಕೆ ಒಳಪಡಿಸುವ ವಿಚಾರ ಹಲವಾರು ಸ್ವತಂತ್ರ ತನಿಖೆಗಳಿಂದ ದೃಢಪಟ್ಟಿದೆ. ಆದರೂ ಇದುವರೆಗೆ ಯಾವುದೇ ಕಾನೂನು ಕ್ರಮ ಜರುಗಿಲ್ಲ.
- ಬಿಜೆಪಿ ಸರಕಾರದ ಕಾಲದಲ್ಲಿ ಜಿಲ್ಲೆಯ ಪೊಲೀಸ್ ಇಲಾಖೆಯ ಅಧಿಕೃತ ಜಾಲತಾಣದಲ್ಲಿ ಪೂರ್ತಿ ಒಂದು ವರ್ಷ ಕಾಲ (2011 ಮತ್ತು 2012) ಆರೆಸ್ಸೆಸ್ ಜಾಹೀರಾತು ಪ್ರದರ್ಶಿತವಾಗಿತ್ತು.

ಇದೀಗ ಕೋಬ್ರಾಪೋಸ್ಟ್‌ನ "ಆಪರೇಷನ್ ಜೂಲಿಯೆಟ್" ಹೆಸರಿನ ಕುಟುಕು ಕಾರ್ಯಾಚರಣೆ ಹೊರಹಾಕಿರುವ ಸತ್ಯಾಂಶಗಳು ಇದ್ದಬದ್ದ ಅನುಮಾನಗಳನ್ನೆಲ್ಲ ನಿವಾರಿಸಿ ಪೊಲೀಸ್ ವ್ಯವಸ್ಥೆ ಕೇಸರೀಕರಣಕ್ಕೆ ತುತ್ತಾಗಿರುವ ವಿಷಯವನ್ನು ಸಾಬೀತುಪಡಿಸಿವೆ. ಜಿಲ್ಲೆಯ ಸುಮಾರು 60% ಪೊಲೀಸರು ಆರೆಸ್ಸೆಸ್ ಹಿನ್ನೆಲೆ ಉಳ್ಳವರೆಂದಾದರೆ ಇದು ನಿಜಕ್ಕೂ ಸಂಘ ಪರಿವಾರದ ಪ್ರಯೋಗಶಾಲೆಯೇ ಆಗಿದೆ ಎನ್ನುವುದರಲ್ಲಿ ಎಳ್ಳಷ್ಟೂ ಸಂಶಯಕ್ಕೆ ಆಸ್ಪದವಿಲ್ಲ, ಹೀಗಿರುವಾಗ ಇಲ್ಲಿ ಅಂತರ್ಧರ್ಮೀಯ ಜೋಡಿಗಳಿಗೆ ಅನೈತಿಕ ಗೂಂಡಾಗಿರಿ, ಜಾನುವಾರು ಸಾಗಾಟಗಾರರಿಗೆ ಹಲ್ಲೆ, ಮತ ಪ್ರಚಾರಕರಿಗೆ ಕಿರುಕುಳ, ಚರ್ಚ್ ದಾಳಿ, ಕೋಮು ಸಂಘರ್ಷಗಳಂತಹ ಭಯಾನಕ ಘಟನೆಗಳು ಎಗ್ಗಿಲ್ಲದೆ ನಡೆಯುತ್ತಿರುವುದರಲ್ಲಿ ಆಶ್ಚರ್ಯವೇನು ಬಂತು? "ಆಪರೇಷನ್ ಜೂಲಿಯೆಟ್" ಕಾನೂನು ಸುವ್ಯವಸ್ಥೆಯ ಜವಾಬ್ದಾರಿ ಹೊತ್ತಿರುವ ರಾಜ್ಯ ಸರಕಾರದ ಅಸಹಾಯಕ ಸ್ಥಿತಿಯನ್ನು ತೆರೆದಿಟ್ಟಿದೆ ಎನ್ನಬಹುದು.

ರಾಜ್ಯದ ಇತರ ಜಿಲ್ಲೆಗಳ ಪರಿಸ್ಥಿತಿ

ಮೊದಲು ಬಜರಂಗ ದಳದ ಸದಸ್ಯನಾಗಿದ್ದ ಪ್ರಮೋದ್ ಮುತಾಲಿಕ್ ನಂತರ 2005ರಲ್ಲಿ ಶಿವ ಸೇನೆಗೆ ಸೇರಿ ಕರ್ನಾಟಕದಲ್ಲಿ ಅದರದೊಂದು ಘಟಕವನ್ನು ಪ್ರಾರಂಭಿಸಿದ. 2006ರಲ್ಲಿ ಬೆಳಗಾವಿ ವಿವಾದ ಭುಗಿಲೆದ್ದಾಗ ಶಿವಸೇನೆಯನ್ನು ತ್ಯಜಿಸಿ ತನ್ನದೇ ಆದ ರಾಷ್ಟ್ರೀಯ ಹಿಂದೂ ಸೇನೆಯನ್ನು ಸ್ಥಾಪಿಸಿದ. ಮುಂದೊಂದು ದಿನ ಅದರ ಹೆಸರು ಶ್ರೀರಾಮ ಸೇನೆ ಎಂದಾಯಿತು. 2008ರಲ್ಲಿ ರಾಮ ಸೇತು ವಿಷಯದಲ್ಲಿ ಮಂಗಳೂರು ಬಂದ್, 2009ರ ಪಬ್ ದಾಳಿ, ಹುಬ್ಬಳ್ಳಿ ನ್ಯಾಯಾಲಯ ಸ್ಫೋಟ, ಸಿಂಧಗಿಯ ಪಾಕ್ ಧ್ವಜ ಹಾರಾಟ ಮುಂತಾದ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಗಿರುವಂತಹ ಘಟನೆಗಳಲ್ಲಿ ಇದೇ ಶ್ರೀರಾಮ ಸೇನೆಯ ಹೆಸರು ಕೇಳಿಬಂದಿದೆ. ಆದರೂ ಇದುವರೆಗೆ ಮುತಾಲಿಕ್‌ನದಾಗಲಿ ಶ್ರೀರಾಮ ಸೇನೆಯದಾಗಲಿ ಒಂದೇ ಒಂದು ಕೂದಲು ಕೂಡಾ ಕೊಂಕದೆ ಇರುವುದನ್ನು ಗಮನಿಸಬೇಕು. ಸಂಘ ಪರಿವಾರದ ಇತರ ಸಂಘಟನೆಗಳಾದ ವಿಹಿಂಪ, ಬಜರಂಗ ದಳ, ಸನಾತನ ಸಂಸ್ಥೆ, ಧರ್ಮ ಜನಜಾಗೃತಿ ಸಮಿತಿ ಮುಂತಾದವುಗಳ ಕಥೆಯೂ ಹೆಚ್ಚುಕಡಿಮೆ ಇದೇ ರೀತಿಯಲ್ಲಿದೆ. ಇದು ಹಿಂದಿನ ಸಮಾಚಾರ.

ಆದರೆ ಇತ್ತೀಚೆಗೆ ನಡೆದಿರುವ ಕೆಲವೊಂದು ಘಟನೆಗಳೂ ಇದೇ ಮಾದರಿಯಲ್ಲಿದ್ದು ಪ್ರಸಕ್ತ ಕಾಂಗ್ರೆಸ್ ಸರಕಾರಕ್ಕೆ ಪೊಲೀಸ್ ವ್ಯವಸ್ಥೆಯ ಮೇಲೆ ನಿಯಂತ್ರಣ ಇಲ್ಲ ಎಂಬುದನ್ನು ಸಾಬೀತುಪಡಿಸುವಂತಿವೆ. ಇದೇ ವರ್ಷದ ಮೇ 9ರಂದು ರಾಜ್ಯ ಪೊಲೀಸ್ ಮಹಾನಿರ್ದೇಶಕರ ಕಚೇರಿಯಲ್ಲಿ ವಾರ್ಷಿಕ ಅಪರಾಧ ಪರಿಶೀಲನಾ ಸಭೆ ನಡೆದಿದೆ. ಅಂದು ಮಂಗಳೂರು ಪೊಲೀಸ್ ಆಯುಕ್ತರ ಮೇಲೆ ಸಿಟ್ಟಿಗೆದ್ದ ಮುಖ್ಯಮಂತ್ರಿಯವರು "ಗೂಂಡಾ ಕಾಯ್ದೆಯಡಿ ಬಂಧಿತನಾಗಿದ್ದ ಕುಖ್ಯಾತ ಪಾತಕಿ ಮನೋಜ್ ಕುಲಾಲ್ ಇತ್ತೀಚೆಗೆ ಜೈಲಿನಿಂದ ಬಿಡುಗಡೆಯಾದಾಗ ಕೆಲವರು ಪಟಾಕಿ ಸಿಡಿಸಿ ಮೆರವಣಿಗೆ ಮೂಲಕ ಆತನನ್ನು ಕರೆದುಕೊಂಡು ಹೋದರು. ಇಂಥ ಪರಿಸ್ಥಿತಿ ನಿರ್ಮಾಣವಾಗಲು ಏಕೆ ಅವಕಾಶ ಮಾಡಿಕೊಟ್ಟರಿ?....... ಅಂಥಾ ವ್ಯಕ್ತಿ ಬಿಡುಗಡೆ ಆಗುವಾಗ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕಿತ್ತು......." ಎಂದು ಹೇಳಿದರೆಂದು ವರದಿಯಾಗಿದೆ. ನಂತರ ಬೆಳಗಾವಿ ಕಮಿಷನರ್ ರವಿಯವರ



ಸರದಿ. "ಬೆಂಗಳೂರಿನಲ್ಲಿ ನಡೆ
ಸಮಾಜೋತ್ಸವದಲ್ಲಿ ಕಾನೂನು ಉಲ್ಲಂ
ಸಂಘಟನೆಯೊಂದರ ಕಾರ್ಯದರ್ಶಿ........ ಕೆ
ಪೊಲೀಸರಿಗೆ ಬೇಕಾಗಿದ್ದ........ ಆತನನ್ನು
ಇಲ್ಲಿನ ಪೊಲೀಸರು ಬೆಳಗಾವಿಗೆ ಬಂ
ಸಹಕಾರ ನೀಡಬೇಕಿತ್ತು, ಅದನ್ನು ಬಿ
ಸಂಸದರೊಬ್ಬರ ಮಾತು ಕೇಳಿ ಅರ
ಕಳುಹಿಸಿದಿರಿ" ಎಂದು ಅವರನ
ತೆಗೆದುಕೊಂಡಿದ್ದಾರೆ. ಇತ್ತೀಚಿಗಿನ ಮುಧೋ
ಗಲಭೆಗೆ ಸಂಬಂಧಿಸಿದಂತೆ ಆರೋಪಿ
ಜಾಮೀನುರಹಿತ ಸೆಕ್ಷನ್ ಹಾಕುವ ಬದಲು
ಹಾಕಿ ಜಾಮೀನು ಪಡೆಯಲು ಅವಕಾಶ
ಪೊಲೀಸ್ ಅಧಿಕಾರಿಯ ಮೇಲೂ ಹ
ಇವೆಲ್ಲವೂ ಏನನ್ನು ಸೂಚಿಸುತ್ತವೆ? ಪೊಲೀ
ಆದೇಶಗಳನ್ನು ಪರಿಪಾಲಿಸುತ್ತಿಲ್ಲವೆಂದಾದರೆ
ಆದೇಶಗಳಿಗೆ ಅನುಸಾರವಾಗಿ ನಡೆದು
ಎನ್ನುವುದು ಸ್ಫಟಿಕದಷ್ಟೆ ಸ್ಪಷ್ಟವಿದೆ. ಕರ್ನಾ
ಅಲ್ಲ, ಭಾರತದಾದ್ಯಂತ ಹೆಚ್ಚುಕಡಿಮೆ
ಇದೆ ಎಂದು ನಂಬಲು ಬಲವತ್ತರ ಕಾರಣಗ
ಸಾಂದರ್ಭಿಕ ಸಾಕ್ಷ್ಯಗಳೂ ಇವೆ.

ಗುಪ್ತಚರ ಮತ್ತು ಪೊಲೀ ಇಲಾಖೆಗಳ ಅಸಲಿ ಚ

ದಾಭೋಲ್ಕರ್, ಪನ್ಸಾರೆ ಮತ್ತು
ಸಂಭವಿಸಿದ ಕಲಬುರ್ಗಿಯವರ ಭೀಕರ ಹ
ಕೆಲವೊಂದು ಕಟುಸತ್ಯಗಳು ಬ
ಹೊರಬೀಳುತ್ತಿವೆ. ಇತ್ತೀಚೆಗೆ ಬಹಿರಂಗ
ಹಿಂದು, 3.10.2015) ಮಾಹಿತಿಗಳು
ಗುಪ್ತಚರ ಇಲಾಖೆ ಹಿಂದಿನಿಂದಲೂ ಉಗ್ರ
ಸಂಘಟನೆಗಳ ಚಟುವಟಿಕೆಗಳ ಬಗ್ಗೆ ನಿರ್ಲ
ತಾಳಿಕೊಂಡು ಬಂದಿದೆ; ಇಲಾಖೆಯ
ಘಟನೆಗಳ ವಿಭಾಗದ ಗಮನವೆಲ್ಲ ಕೇವ
ಮುಸ್ಲಿಂ ಸಂಘಟನೆಗಳ ಮೇಲಷ್ಟೆ ಕೇಂ
ಗುಪ್ತಚರ ಇಲಾಖೆ ಮತ್ತು ಪೊಲೀಸ್ ಇ
ರೀತಿಯಾಗಿ ಸಂಘ ಪರಿವಾರದ ಸಂಘಟನೆ
ಬಗ್ಗೆ ಉದಾಸೀನ ಭಾವ ತಾಳಲು ಆ ಇಲ
ಸ್ಥಾನಗಳಲ್ಲಿ ಸಾಕಷ್ಟು ಹಿಂದೂ ರಾಷ್ಟ್ರ
ತೂರಿಕೊಂಡಿರುವುದೇ ಮುಖ್ಯ ಕ
ಮಹಾರಾಷ್ಟ್ರದ ನಿವೃತ್ತ ಐಜಿಪಿ ಎಸ್.
ಎಂಬವರು ಗುಪ್ತಚರ ಇಲಾಖೆ ಕೇಸರೀಕರಣ
ಬಗ್ಗೆ 2009ರಷ್ಟು ಹಿಂದೆಯೆ ("ಕರ್ಕರೆಯ
ಯಾರು?") ಸವಿಸ್ತಾರವಾಗಿ ಬರೆದಿದ್ದಾರೆ. ಗು
ಮಾಜಿ ಮುಖ್ಯಸ್ಥರೂ ನಿವೃತ್ತಿಯ ನಂತರ
ಚುಚ್ಚುವಿಕೆಯನ್ನು ತಾಳಲಾರದೆ ಪುಸ್ತಕ
ಇಲಾಖೆಯ ಸ್ವೇಚ್ಛಾಚಾರಿ, ಸರ್ವಾಧಿಕಾ
ವರ್ತನೆಗಳನ್ನು ಬಯಲಿಗೆಳೆದಿದ್ದಾರೆ. ಅದೇ
ಇಲಾಖೆಯ ಕೇಸರೀಕರಣದ ವಿಚಾರವನ್ನು
ವಿಜೇತ ಪೊಲೀಸ್ ಡಿಜಿಪಿ ವಿಭೂತಿ ನಾರ
ಹೊರಗೆಡವಿದ್ದಾರೆ (ಶಹರ್ ಮೆ ಕರ್ಫ್ಯೂ;
Conflicts: Perception
Neutrality During Hindu-M
in India). 2013ರಲ್ಲಿ ನವದೆಹಲಿ
ಡಿಜಿಪಿಗಳ ಸಭೆಯಲ್ಲಿಯೂ ದೇಶದ
ಕೋಮು ಗಲಭೆಗಳ ವೇಳೆ ಕೆಲವು
ಅಲ್ಪಸಂಖ್ಯಾತರ ವಿರುದ್ಧ ಪಕ್ಷಪಾತೀಯವಾಗಿ
ವಾಸ್ತವವನ್ನು ಒಪ್ಪಲಾಗಿದೆ. ಜೊತೆಗೆ ಕ
ಮಿದು ಹಿಂದುತ್ವ ಧೋರಣೆಯಿಂದ
ಕುರುಡು ಕೂಡಾ ಇದಕ್ಕೆ ಪೂರಕವಾದ ವ
ನಿರ್ಮಿಸಿದೆ.

ಮುಶ್ರಿಫ್ ಅಭಿಪ್ರಾಯದಲ್ಲಿ ಮಾಧ್ಯ
ಶತಮಾನದ ಆರಂಭದಲ್ಲಿ ದೇಶಾದ್ಯಂತ
ಸ್ಫೋಟಗಳ ಬಗ್ಗೆ ತಪ್ಪುತಪ್ಪಾಗಿ, ಉತ್ಪ್ರೇ
ಮಾಡಿರುವುದು ಗುಪ್ತಚರ ಇಲಾಖೆಯ ಸೂ
ಪ್ರತಿಯೊಂದು ಸ್ಫೋಟದ ಬಳಿಕ ನೂ
ಯುವಕರನ್ನು ಬಂಧಿಸಲಾಗುತ್ತಿತ್ತಾದರೂ ಸ್ಫೋ
ನಿಂತಿರಲಿಲ್ಲ; ಆದರೆ ಹೇಮಂತ ಕ
ಮಾಲೆಗಾಂವ್ ಪ್ರಕರಣದ ನೈಜ ಉಗ್ರ
ನಂತರದಲ್ಲಿ ಸ್ಫೋಟಗಳು ಹೆಚ್ಚುಕಮ್ಮಿ
ನಿಂತುಹೋಗಿವೆ ಎಂಬುದರತ್ತ ಅವರು ಬೆ
ಗುಪ್ತದಳಕ್ಕೆ ದೊರೆತಿದ್ದ ಅತ್ಯಂತ ನಿರ್ದಿಷ್ಟ
ಬೇಹುಗಾರಿಕಾ ಮಾಹಿತಿಯನ್ನು ಅ
ಪರಿಣಾಮವಾಗಿ 26/11ರ ಮುಂ
ಸಂಭವಿಸಿತೆಂದು ಅವರು ಹೇಳುತ್ತಾರೆ. ಗು
ವಿರುದ್ಧ ಮುಶ್ರಿಫ್ ಮಾಡಿರ

ಚಾಕ ಪೈಕಿ ಕೆಲವು ಹೀಗಿವೆ:
ಕೋಮುವಾದಿ ಚಟುವಟಿಕೆಗಳನ್ನು
ಗಮನಕ್ಕೆ ತರದಿರುವುದು
ದು ರಾಷ್ಟ್ರೀಯವಾದಿ ಹಾಗೂ ಸಾಮಾಜಿಕ
ಯೆಂದು ಬಿಂಬಿಸುತ್ತಿರುವುದು
ಯ ಮತ್ತು ಜಾತ್ಯತೀತ ಸಂಘಟನೆಗಳ
ಭಿನ್ನ ನೀತಿಯನ್ನು ಅನುಸರಿಸುತ್ತಿರುವುದು
ಯ ಪ್ರಕರಣದಲ್ಲಿ ಕಂಡೂಕಾಣದವರಂತೆ
ದು
ದಂಗೆಗಳನ್ನು ಅನಿರ್ಬಂಧಿತವಾಗಿ
ತ್ತಿರುವುದು
ಟರ್' ಎಂಬ ಕಾನೂನುಬಾಹಿರ
ಸಮರ್ಥನೆ
ರಾಕ್ಷಸರೆಂದು ಚಿತ್ರಿಸುವುದಕ್ಕೋಸ್ಕರ
ಕೆಯ ಹೆಸರಲ್ಲಿ ವದಂತಿಗಳನ್ನು
ಮ
ವಾರದ ಸಂಘಟನೆಗಳ ಭಯೋತ್ಪಾದಕ
ಗಳ ಬಗ್ಗೆ ಉದ್ದೇಶಪೂರ್ವಕ ಉಪೇಕ್ಷೆ
ಭಾರತ್‌ನ ಸ್ಥಾಪನೆ ಮತ್ತು ಅದರ
ಧಿ ಚಟುವಟಿಕೆಗಳನ್ನು ಸರಕಾರದ ಗಮನಕ್ಕೆ
ದು
ಉದ್ದೇಶಗಳಿಗಾಗಿ ಬಾಂಬುಸ್ಫೋಟ
ಅನಗತ್ಯ ಮಧ್ಯಪ್ರವೇಶ
ವ್ ಮತ್ತಿತರ ಸ್ಫೋಟ ಪ್ರಕರಣಗಳಲ್ಲಿ
ಮಾಗಿರುವ ಲೆ। ಕ। ಪುರೋಹಿತ್
ನ ತರಬೇತಿ ಕಾರ್ಯಕ್ರಮದಲ್ಲಿ



ನಾಗಿರುವುದು
ರೋಹಿತ್ ಸ್ಫೋಟಕ ಸಾಗಾಣಿಕೆ ಪ್ರಕರಣದ
ಡುವುದಕ್ಕೆ ಆಕ್ಷೇಪ ಎತ್ತದಿರುವುದು
ಬಾದ್ ಸ್ಫೋಟಕೃತ್ಯಕ್ಕೆ ಮುಂಚಿತವಾದ
ಗಳು ಅಮೆರಿಕಾ ಪ್ರಜೆ ಹೇವುಡ್‌ನ
ನಿಂದ ಬಂದಿದ್ದ ಹೊರತಾಗಿಯೂ
ಶದಿಂದ ಹೊರಹೋಗಲು ಬಿಟ್ಟಿರುವುದು
ವಾರದ ಗುಂಪುಗಳು ಭಾಗಿಯಾಗಿರುವ
ಪ್ರಕರಣಗಳನ್ನೆಲ್ಲ ಒಂದೇ ಭಯೋತ್ಪಾದಕ
ಗಿ ಪರಿಗಣಿಸದಿರುವುದು
ಇದುವರೆಗಿನ ಕೇಂದ್ರ ಸರ್ಕಾರಗಳು
ಯ ಮೇಲೆ ಸಂಪೂರ್ಣ ಹತೋಟಿ
ಉಗ್ರ ಹಿಂದೂತ್ವವಾದಿ ಸಂಘಟನೆಗಳ
ಮೇಲೂ ಗಮನ ಇರಿಸುವಂತೆ ತಾಕೀತು
ಲೀಸ್ ಇಲಾಖೆಯ ಮೇಲೆ ಹದ್ದಿನ
ಹಿಂದೂತ್ವ ಧೋರಣೆಯನ್ನು
ಕೋಮು ಗಲಭೆಗಳಲ್ಲಿ ಸಂಘ ಪರಿವಾರದ
ಪಾಲ್ಗೊಳ್ಳುವಿಕೆಯನ್ನು ಸಾಬೀತುಪಡಿಸಿರು
ಆಯೋಗಗಳ ವರದಿಗಳಿಗೆ ದೂಳು
ಅವನ್ನು ಅನುಷ್ಠಾನಗೊಳಿಸುತ್ತಿದ್ದರೆ
ಚಿತ್ರಣ ಒಪ್ಪೊಂದು ಭಿನ್ನವಾಗಿರುತ್ತಿತ್ತು
ನಿರ್ಲಕ್ಷ್ಯ ಮತ್ತು ವೈಫಲ್ಯಗಳೇ ಸಮಸ್ಯೆ
ಗೆ ತಂದಿಟ್ಟಿವೆ. ಅಂದು ಸುಲಭದಲ್ಲಿ
ಸಾಧ್ಯವಾಗಿದ್ದ ವಿಷಜಂತು ಇಂದು
ಬೆಳೆದಿದೆ. ಅದರ ಕಬಂಧಬಾಹುಗಳು
ಪೊಲೀಸ್ ಇಲಾಖೆ, ಸೇನಾಪಡೆಗಳು,
ಗಳನ್ನು ಒಳಗೊಂಡಂತೆ ಸಮಾಜದ
ಕ್ಷೇತ್ರಕ್ಕೂ ಚಾಚಿವೆ. ಹೀಗೆ ಬೆಳೆಯೇ
ಪರಿಸ್ಥಿತಿ
2014ರ ನಂತರ ಸಂಘ
ರಾಷ್ಟ್ರ ನಿರ್ಮಾಣದ ಅಪಾಯಕಾರಿ
ರಥದಂತೆ ಅಡೆತಡೆಗಳಿಲ್ಲದೆ
ಮುನ್ನುಗ್ಗುತ್ತಿದೆ.

ಶ್ ಭಟ್ ಬಾಕ್ರಬೈಲ್

'ಸ್ವಚ್ಛ ಭಾರತ ಅಭಿಯಾನ' ಎಂಬ ಒಂದು ವರ್ಷದ ಪ್ರಹಸನ!

2014ರ ಅಕ್ಟೋಬರ್ 2ರ ರಿಂದ ಭಾರತವನ್ನು ಸ್ವಚ್ಛ ಮಾಡಿಬಿಡೋಣ ಎಂದು ಪ್ರಧಾನಿ ನರೇಂದ್ರ ಮೋದಿ ಹೂಂಕರಿಸಿದರು. ಕಸಬರಿಗೆ ಹಿಡಿದು ರಸ್ತೆ ಗುಡಿಸಿದ ನಾಟಕವಾಡಿ ದೇಶವಿದೇಶಗಳಲ್ಲಿ ಪ್ರಚಾರ ಗಿಟ್ಟಿಸಿಕೊಂಡರು. ಮೋದಿಯ ಹೂಂಕಾರದಿಂದ ಆವೇಶಗೊಂಡವರಂತೆ ದೇಶದ ಅನೇಕಾನೇಕ ಪ್ರಜೆಗಳೂ ಪೊರಕೆ ಹಿಡಿದು ರಸ್ತೆ ಗುಡಿಸಿದರು. ಕಸ ಎತ್ತಿ ಲಾರಿಗಳಿಗೆ ತುಂಬಿದರು. ಫುಟ್‌ಪಾತ್‌ಗಳಿಗೆ ಮತ್ತು ಬೀದಿಬದಿಯ ಗೋಡೆಗಳಿಗೆ ಸುಣ್ಣ ಬಣ್ಣ ಬಳಿದು ಸಿಂಗಾರಗೊಳಿಸಿದರು. ಭಾರತವು ಸ್ವಚ್ಛವಾಗತೊಡಗಿತು.

2014ರ ಅಕ್ಟೋಬರ್ 2ರ ನಂತರ ಪ್ರಧಾನಿ ಮೋದಿ ಪ್ರತಿನಿತ್ಯ ರಸ್ತೆ ಗುಡಿಸಲಿಲ್ಲ. ಪ್ರಧಾನಿಗೆ ತನ್ನ ಮನೆ ಗುಡಿಸಲಿಕ್ಕೇ ವ್ಯವಧಾನವಿಲ್ಲದಿರುವಾಗ ಇನ್ನು ರಸ್ತೆ ಗುಡಿಸಲಿಕ್ಕೆ ಸಮಯವೆಲ್ಲಿರುತ್ತದೆ? ಆದರೆ, 'ಸ್ವಚ್ಛ ಭಾರತ ಅಭಿಯಾನ' ಎಂಬ ಯೋಜನೆಯ ಮೂಲಕ ತಾನು ಇಡೀ ಭಾರತವನ್ನು ಕಸಮುಕ್ತ ಮಾಡಿಬಿಡುತ್ತೇನೆಂದು ದೇಶವಿದೇಶಗಳಲ್ಲಿ ಕೊಚ್ಚಿಕೊಳ್ಳಲು ಮತ್ತು ಈ ಕುರಿತು ತನ್ನ ಪ್ರಜೆಗಳಿಗೆ ಉಪದೇಶ ಮಾಡಲು ಒಂದಿಡೀ ವರ್ಷದಲ್ಲಿ ಸಾಕಷ್ಟು ಸಮಯವನ್ನು ಮೋದಿ ವಿನಿಯೋಗಿಸಿದರು. ಇಡೀ ವರ್ಷ ಪ್ರಚಾರ ಪಡೆದರು.

ಇಡೀ ವರ್ಷ ರೇಡಿಯೋದಲ್ಲಿ, ಟಿ.ವಿ.ಯಲ್ಲಿ, ಸಿನಿಮಾಮಂದಿರಗಳಲ್ಲಿ, ಸರ್ಕಾರಿ ಕಚೇರಿಗಳಲ್ಲಿ, ವೃತ್ತಪತ್ರಿಕೆಗಳಲ್ಲಿ, ಹಾದಿಬೀದಿಗಳಲ್ಲಿ, ಎಲ್ಲಿ ನೋಡಿದರಲ್ಲಿ, ಯಾವಾಗೆಂದರಾವಾಗ, 'ಸ್ವಚ್ಛ ಭಾರತ ಅಭಿಯಾನ'ದ್ದೇ ತುತ್ತೂರಿ, ನಗಾರಿ, ಟಾಂಟಾಂ. 'ಭೂಮಿಗಿಳಿದ-ಕ್ಲೀನಿಂಗ್-ಭಗವಂತ' ಎಂಬಂತೆ ನರೇಂದ್ರ ಮೋದಿಯ ವೈಭವೀಕರಣ. ಪ್ರಜೆಗಳ ನೂರಾರು ಕೋಟಿ ರೂಪಾಯಿಗಳು ಯಾರ್‍ಯಾರದೋ ಕಿಸೆ ಸೇರಿದವು. ಭಾರತ ಸ್ವಚ್ಛವಾಯಿತೇ?

ಇಲ್ಲ, ಖಂಡಿತ ಇಲ್ಲ. ದೆಹಲಿಯಿಂದ ಕನ್ಯಾಕುಮಾರಿಯವರೆಗೂ, ಗುಜರಾತ್‌ನಿಂದ ಬಂಗಾಳದವರೆಗೂ, ಬೆಂಗಳೂರಿನಿಂದ ಬೀದರ್‌ವರೆಗೂ ಕಸ, ಕಡ್ಡಿ, ಕೊಳಕು, ತ್ಯಾಜ್ಯ, ಪ್ಲಾಸ್ಟಿಕ್, ಕೆಮಿಕಲ್, ತಿಪ್ಪೆರಾಶಿಗಳು ಎಂದಿನಂತೆಯೇ ಶೋಭಿಸುತ್ತಿವೆ! ಪಬ್ಲಿಕ್ ಷೋ ಬಿಟ್ಟರೆ ಸ್ವಚ್ಛ ಭಾರತಕ್ಕೆ ಪ್ರಾಮಾಣಿಕವಾದ ನಾಂದಿಯನ್ನೂ ಭಾರತವು ಹಾಡಲಿಲ್ಲ.

ಮೋದಿಯ ಹೂಂಕಾರದಿಂದ ಆವೇಶಗೊಂಡು ರಸ್ತೆ ಗುಡಿಸಿದ ಪ್ರಜೆಗಳಲ್ಲಿ ಬಹುತೇಕರು ಎಂಥವರು? ರಸ್ತೆಯ ಮೇಲೆ ಕಾಲಿಟ್ಟರೆ ತಮಗೆ ಅವಮಾನ ಎಂಬಂತೆ ಸದಾ ತಮ್ಮ ಕಾರು-ಬೈಕುಗಳಲ್ಲೇ ಓಡಾಡುವವರು. ಮನೆ ಪಕ್ಕದ ಚೌರದಂಗಡಿಗೆ ಹೋಗಲೂ ಇವರಿಗೆ ಬೈಕು ಬೇಕು. ಜಾಗಿಂಗ್ ಮಾಡಲು ಉದ್ಯಾನವನಕ್ಕೆ ಇವರು ಕಾರಿನಲ್ಲಿ ಬಂದಿಳಿಯುವವರು. ಹೀಗೆ, ಸದಾಕಾಲ ಪೆಟ್ರೋಲ್ ಹೊಗೆಯನ್ನು ಪರಿಸರಕ್ಕೆ ಸೇರಿಸುತ್ತ ಪರಿಸರವನ್ನು ಇವರು ಕಲುಷಿತಗೊಳಿಸುವವರು ಮತ್ತು ಅಮಾಯಕರಿಗೆ ಧೂಳು-ಹೊಗೆ ಕುಡಿಸಿ ಕಾಯಿಲೆಗಳನ್ನು ತಂದಿಕ್ಕುವವರು. ಇವರು ಎಲ್ಲೆಂದರಲ್ಲಿ ಸಿಗರೇಟ್ ಸೇದಿ ಅಕ್ಕಪಕ್ಕದವರ ಮೂತಿಗೆ ಎಂಜಲು ಹೊಗೆಯನ್ನು ಸ್ಟೈಲಾಗಿ ಊದುವವರು. ರಸ್ತೆ ಬದಿಯಲ್ಲಿ ನಿಂತು ತಿಂಡಿ ತಿಂದು ಎಂಜಲು ತ್ಯಾಜ್ಯವನ್ನು ಮತ್ತು ಪ್ಲಾಸ್ಟಿಕ್ ತ್ಯಾಜ್ಯವನ್ನು ಅಲ್ಲೇ ಎಸೆದು ಕಾರು ಹತ್ತುವವರು. ತಮ್ಮ ಕಂಪ್ಯೂಟರ್ ತ್ಯಾಜ್ಯವನ್ನು, ಕಾರಿನಲ್ಲಿ ಅಥವಾ ಬೈಕಿನಲ್ಲಿ ಹೋಗುವಾಗ, ಯಾವುದಾದರೂ ನಿರ್ಜನ ಪ್ರದೇಶದಲ್ಲಿ ಎಸೆದು ಘನಗಾಂಭೀರ್ಯದಿಂದ ಮುಂದುವರಿಯುವವರು. ಒಂದು ದಿನ ತಮ್ಮ ರಸ್ತೆಗೆ ನಗರಸಭೆ-ನಗರಪಾಲಿಕೆಯ ಕಸದಗಾಡಿ ಬರಲಿಲ್ಲವೆಂದರೆ ಅಥವಾ ಗಾಡಿ ಬಂದಾಗ ತಾವಿನ್ನೂ ಹಾಸಿಗೆ ಬಿಟ್ಟು ಎದ್ದಿರಲಿಲ್ಲವೆಂದರೆ, ಆ ದಿನದ ಕಸವನ್ನು, ವಾಹನದಲ್ಲಿ ಆಫೀಸಿಗೆ ಹೋಗುವಾಗ ಮಾರ್ಗಮಧ್ಯೆ ರಸ್ತೆಬದಿಗೆ ಎಸೆದುಹೋಗುವವರು. ಹೋಟೆಲುಗಳಲ್ಲಿ ಮತ್ತು ಅಂಗಡಿಗಳಲ್ಲಿ ವಸ್ತುಗಳನ್ನು ಕೊಂಡಾಗ ವಿವಿಧ ಬಗೆಯ ಪ್ಲಾಸ್ಟಿಕ್ ಬ್ಯಾಗು, ಕಂಟೈನರು ಇತ್ಯಾದಿಗಳಲ್ಲಿ ಆ ವಸ್ತುಗಳನ್ನು ಷೋಕಿಯಾಗಿ ಎತ್ತಿಕೊಂಡು ಹೋಗುವವರು ಇವರೆಲ್ಲ ವಿದ್ಯಾವಂತರು, ನಾಗರಿಕರು. ಇಂಥ ಬಳ ಕಾಲಿಗೆ ಮಾವಿ ಮೋದಿಯ



ಹೂಂಕಾರದ ಲಾಭ ಪಡೆದು ಒಂದು ದಿನದ ಮಟ್ಟಿಗೆ ಪೊರಕೆ ಹಿಡಿದು ರಸ್ತೆಗಿಳಿದು ಫೋಟೋ ತೆಗೆಸಿಕೊಂಡರು. ವಿಡಿಯೋ ತೆಗೆಸಿಕೊಂಡರು. ಈ ಫೋಟೋಗಳೂ ವಿಡಿಯೋಗಳೂ ಅಂತರ್ಜಾಲದಲ್ಲಿ, ಪತ್ರಿಕೆಗಳಲ್ಲಿ, ಕಿರು ತೆರೆಯ ಸುದ್ದಿವಾಹಿನಿಗಳಲ್ಲಿ ಪ್ರಸಾರಗೊಂಡು ಈ ನಾಟಕಕಾರರೆಲ್ಲ ಭಾರೀ ಸಮಾಜಸೇವಕರಂತೆ ಪ್ರಚಾರ ಪಡೆದುಕೊಂಡರು. ಮರುದಿನದಿಂದ ಇವರೆಲ್ಲರೂ ತಮ್ಮ ದೈನಂದಿನ 'ಕೊಳಕು (ಚೆಲ್ಲುವ) ಕೆಲಸ'ವನ್ನು ಮುಂದುವರಿಸಿಕೊಂಡು ಸಾಗಿದರು!

ಭಾರತ ಸ್ವಚ್ಛವಾಯಿತೇ? ಕಿಷ್ಕಿಂಧೆಗೂ ಕಡೆಯಾದ ಇಕ್ಕಟ್ಟಿನ ಸ್ಥಳಗಳಲ್ಲಿ, ಅಭದ್ರ ಮನೆಗಳಲ್ಲಿ ಅಥವಾ ಜೋಪಡಿಗಳಲ್ಲಿ, ಕಸ ವಿಲೇವಾರಿಯ ಮತ್ತು ಒಳಚರಂಡಿಯ ಸೂಕ್ತ ನಿರ್ವಹಣೆಯನ್ನೇ ಆಡಳಿತ ಯಂತ್ರವು ಮಾಡದೆ ಕಡೆಗಣಿಸಿರುವ ಏರಿಯಾಗಳಲ್ಲಿ ವಾಸಿಸುತ್ತಿರುವ ಬಡ ಕುಟುಂಬಗಳು ಪರಿಸರವನ್ನು ಸ್ವಚ್ಛವಾಗಿಡಲು ಅಗತ್ಯವಾಗಿರುವ ನೆರವನ್ನು ಸರ್ಕಾರವು ನೀಡಿದೆಯೇ? ಇಲ್ಲ. 'ಭಾರತವನ್ನು ಸ್ವಚ್ಛಗೊಳಿಸಿರಿ' ಎಂದು ಮಾಧ್ಯಮಗಳ ಜಾಹಿರಾತುಗಳಲ್ಲಿ ಬೊಬ್ಬೆಹಾಕುವ ಸರ್ಕಾರವು ಕನಿಷ್ಠ ಪಕ್ಷ ಈ ಬಡ ಅವಿದ್ಯಾವಂತರಿಗೆ ಮತ್ತು ಗ್ರಾಮೀಣ ನಿರಕ್ಷರಿಗಳಿಗೆ ಪರಿಸರ ಸ್ವಚ್ಛತೆಯ ಕ್ರಮಗಳ ಬಗ್ಗೆ ಅಗತ್ಯ ತಿಳಿವಳಿಕೆಗಳನ್ನು ನೀಡುತ್ತಿದೆಯೆ? ಇಲ್ಲ. ಕಸ ಪರಿಸರ ಮಾಲಿನ್ಯ ತಡೆಗಟ್ಟಲು ಇಂದು ಅಗತ್ಯವಾಗಿರುವ ಉಪಕ್ರಮಗಳಾದ, ಖಾಸಗಿ ವಾಹನಗಳ ಅನುಮತಿಗೆ ಕಡಿವಾಣ, ರಸ್ತೆ ಅಗಲೀಕರಣ ಮತ್ತು ನಿರ್ವಹಣೆ, ಪರ್ಯಾಯ ಸಂಚಾರ ಮಾರ್ಗಗಳ ನಿರ್ಮಾಣ, ನಗರೀಕರಣಕ್ಕೆ ಮಿತಿ, ಗಿಡ-ಮರ-ಅರಣ್ಯಗಳ ನಾಶಕ್ಕೆ ಅಂಕುಶ, ಗಣಿಗಾರಿಕೆಯ ನಿಯಂತ್ರಣ ಮೊದಲಾದವುಗಳನ್ನು ಸೂಕ್ತ ಕಾನೂನು ರಚನೆಯೊಂದಿಗೆ ಯೋಜನಾಬದ್ಧವಾಗಿ ಜಾರಿಗೆ ತರುವ ಎದೆಗಾರಿಕೆಯನ್ನು ಆಡಳಿತ ಯಂತ್ರವು ಹೊಂದಿದೆಯೆ? ಇಲ್ಲ. ಗಂಗೆಯಿಂದ ಮೊದಲ್ಗೊಂಡು ಬೆಂಗಳೂರಿನ ಬೆಳ್ಳಂದೂರು ಕೆರೆಯವರೆಗೆ ಎಲ್ಲೆಲ್ಲೂ ಗೋಚರಿಸುತ್ತಿರುವ ಜಲಮಾಲಿನ್ಯವನ್ನು ತಡೆಗಟ್ಟಲು ವೈಜ್ಞಾನಿಕ ಕ್ರಮಗಳನ್ನೂ ಕಾನೂನು ಕ್ರಮಗಳನ್ನೂ ಕೈಗೊಳ್ಳುವ ಮನಸ್ಸನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೋರುತ್ತಿವೆಯೆ? ಇಲ್ಲ.

ಮಾಡಬೇಕಾದ್ದೇನನ್ನೂ ಮಾಡದೆ, ಬರಿದೆ 'ಸ್ವಚ್ಛ ಭಾರತ, ಸ್ವಚ್ಛ ಭಾರತ' ಎಂದು ಗಂಟಲು ಹರಿದುಕೊಂಡು ಕೂಗಿದಾಕ್ಷಣ ಭಾರತವು ಸ್ವಚ್ಛವಾಗಿಬಿಡುತ್ತದೆಯೇ? ಪ್ಲಾಸ್ಟಿಕ್ ಬಳಕೆಗೆ ಸೂಕ್ತ ನಿಯಂತ್ರಣ ತರುವಂಥ ಕಾನೂನನ್ನು ರಚಿಸದ ಆಡಳಿತಾಂಗಗಳಿಂದ ಯಾವ ಸ್ವಚ್ಛ ಭಾರತವನ್ನು ನಿರೀಕ್ಷಿಸಲು ಸಾಧ್ಯ? ಕಸ ವಿಲೇವಾರಿ ಮಾಡುವ ಪೌರ ಕಾರ್ಮಿಕರಿಗೆ ಸಮಯದೊಳಗೆ ಸಂಬಳವನ್ನೇ ನೀಡದ ಸರ್ಕಾರಗಳಿಂದ ಯಾವ ರೀತಿಯ ಸ್ವಚ್ಛ ನಗರಗಳನ್ನು ನಿರೀಕ್ಷಿಸಲು ಸಾಧ್ಯ? ತಾವು ಸಾಕುವ ಬೆಕ್ಕುನಾಯಿಗಳಿಗೂ ವಾತಾನುಕೂಲ ಆಸನಗಳನ್ನು ನಿರ್ಮಿಸಿ ಅವುಗಳನ್ನು ಬಂಧಿಸಿಡುವ ಮತ್ತು ಕಾರುಗಳಲ್ಲಿ ಅವುಗಳನ್ನು ತಿರುಗಾಡಿಸುವ ಜೀವವಿರೋಧಿ, ಪ್ರಕೃತಿವಿರೋಧಿ ಮತ್ತು ಮಾಲಿನ್ಯಕಾರಿ ಶ್ರೀಮಂತವರ್ಗದಿಂದ ಮತ್ತು ಆ ವರ್ಗಕ್ಕೇ ಸೇರಿದ ಸರ್ಕಾರಿ ಅಧಿಕಾರಿಗಳಿಂದ ಮತ್ತು ರಾಜಕಾರಣಿಗಳಿಂದ ಯಾವ ಬಗೆಯ ಪರಿಸರಸ್ನೇಹಿ ಸ್ವಚ್ಛ ರಾಷ್ಟ್ರವನ್ನು ನಿರೀಕ್ಷಿಸಲು ಸಾಧ್ಯ? ಧೂಮಪಾನ, ಗುಟ್ಕಾ, ಮದ್ಯಪಾನಗಳ ವಿಷಯದಲ್ಲೇ ನಾಟಕವಾಡುತ್ತ ಸಾಗಿರುವ ವಂಚಕ ಸರ್ಕಾರಗಳಿಂದ ಯಾವ ರೀತಿಯ ಸ್ವಚ್ಛ ದೇಶದ ನಿರ್ಮಾಣ ಸಾಧ್ಯ?

ಹೀಗೆ ಎಲ್ಲ ಕೊಳಕುಗಳನ್ನೂ ಹಾಸಿ ಹೊದ್ದಿರುವ ಜನನಾಯಕ ಪ್ರಭುಗಳು ಒಂದು ವರ್ಷ ಕಾಲ 'ಸ್ವಚ್ಛ ಭಾರತ ಅಭಿಯಾನ' ಎಂಬ ಪ್ರಹಸನವನ್ನು ಆಡಿದರು. 2015ರ ಅಕ್ಟೋಬರ್ 2ರಂದು ಈ ಪ್ರಹಸನದ ಒಂದು ಉತ್ತುಂಗವನ್ನೂ ಈ ದೇಶದ ಅಮಾಯಕ ಪ್ರಜೆಗಳೆದುರು ಪ್ರದರ್ಶಿಸಿದರು. 'ಸ್ವಚ್ಛ ಭಾರತ ಅಭಿಯಾನ'ದ ವಾರ್ಷಿಕೋತ್ಸವವನ್ನು ನಿರ್ಲಜ್ಜರಾಗಿ ಆಚರಿಸಿದರು ನಮ್ಮ ಪ್ರಭುಗಳು!

ಒಂದು ವರ್ಷವಿಡೀ ಭಾರತವನ್ನು ಸ್ವಚ್ಛಗೊಳಿಸುವ ಅಭಿಯಾನ ನಡೆಯಿತೆಂದೂ, ಭಾರತವೀಗ ಸ್ವಚ್ಛವಾಗತೊಡಗಿದೆಯೆಂದೂ, ಬಹುತೇಕ 'ಕ್ಲೀನ್' ಆಗಿಬಿಟ್ಟಿದೆಯೆಂದೂ, ಇನ್ನಷ್ಟು ಫಳಫಳಗೊಳಿಸಲಾಗುವುದೆಂದೂ ಬುರುಡೆ ಬಿಟ್ಟರು! 'ಇಂಡಿಯಾ ಶೈನಿಂಗ್' ಎಂದು ಹಿಂದೊಮ್ಮೆ ಭ್ರಮಿಸಿದಂತೆ, 'ವಾಹ್! ಭಾರತವು ಸ್ವಚ್ಛವಾಗಿಬಿಟ್ಟಿದೆ!' ಎಂದು ಸಂಭ್ರಮಿಸಿದರು ಮೋದಿಯ ಹಿಂಬಾಲಕರು. ಮೋದಿಯ ಸಂಭ್ರಮಕ್ಕೂ ಏನೂ ಕೊರತೆಯಿರಲಿಲ್ಲ.


ಭಾರತವು ಸ್ವಚ್ಛವಾಗಬೇಕೆಂದರೆ, ಪ್ರಧಾನಿಯಿಂದ ಮೊದಲ್ಗೊಂಡು ದೇಶದ ಎಲ್ಲ ಮನೋಮಲಿನರ ಮನಸ್ಸುಗಳು ಮೊದಲು ಸ್ವಚ್ಛವಾಗಬೇಕು. ಕೊಳಕು ಮನಸ್ಸುಗಳು ಎಂದಿಗೂ ದೇಶವನ್ನು ಸ್ವಚ್ಛವಾಗಿಡಲಾರವು.


ಸ್ವಚ್ಛತೆಯೆಂದರೆ ಕೇವಲ ಕಸ ವಿಲೇವಾರಿಯೊಂದೇ ಅಲ್ಲ. ಪರಿಸರ ಮಾಲಿನ್ಯ, ಪ್ರಕೃತಿಯ ಮೇಲೆ ಅತ್ಯಾಚಾರ, ಬಡಜನರ ಪೋಷಣೆ ಮತ್ತು ಆರೋಗ್ಯ ರಕ್ಷಣೆಗಳಲ್ಲಿ ವೈಫಲ್ಯ ಇವೂ ದೇಶವೊಂದರ ಸ್ವಚ್ಛತೆಗೆ ಮಾರಕವಾಗುವ ಅಂಶಗಳೇ. ಭೌತಿಕ ಸ್ವಚ್ಛತೆಯ ವಿಷಯ ಇದಾದರೆ, ದೇಶದ ಮಾನಸಿಕ ಸ್ವಚ್ಛತೆಯೆಂಬುದು ಇನ್ನೊಂದು ಅತಿಮುಖ್ಯ ವಿಷಯ. ದೇಶದಲ್ಲಿನ ಮಾನಸಿಕ ಕೊಳಕುಗಳು ನಿರ್ಮೂಲವಾಗದ ಹೊರತು ದೇಶವು ಸ್ವಚ್ಛವೆನಿಸಿಕೊಳ್ಳಲು ಸಾಧ್ಯವಿಲ್ಲ.

ಭಾರತವಿಂದು ಭೌತಿಕವಾಗಿಯೂ ಮಾನಸಿಕವಾಗಿಯೂ ಸ್ವಚ್ಛವಾಗಬೇಕಾಗಿದೆ. ಅದಕ್ಕಾಗಿ, ಎಲ್ಲೆಲ್ಲಿ ಕೊಳಕುಗಳಿವೆಯೋ ಅಲ್ಲೆಲ್ಲ ನೈರ್ಮಲ್ಯಕಾರ್ಯ ನಡೆಯಬೇಕಾಗಿದೆ. ಸುಮ್ಮನೇ ಕಸಬರಿಗೆ ಹಿಡಿದುಕೊಂಡು ಪೋಸು ಕೊಟ್ಟು 'ಸ್ವಚ್ಛ ಭಾರತ ಅಭಿಯಾನ' ಎಂದು ಒದರಿದಾಕ್ಷಣ, ಅಭಿಯಾನದ ವರ್ಷಾಚರಣೆ ಮತ್ತು ವಾರ್ಷಿಕೋತ್ಸವ ಎಂಬ ಪ್ರಹಸನ ನಡೆಸಿದಾಕ್ಷಣ ಭಾರತವು ಸ್ವಚ್ಛವಾಗಿಬಿಡುವುದಿಲ್ಲ.

■ ಎಚ್. ಆನಂದರಾಮ ಶಾಸ್ತ್ರೀ

ಭಗವಾನ್ ಮತ್ತು ಪೇಜಾವರರಲ್ಲಿ ನಿಜವಾದ ಹೇಡಿ ಯಾರ





ನಮ್ಮ ಪೇಜಾವರ ಸ್ವಾಮಿಗಳು ಪ್ರೊ. ಭಗವಾನ್ ಅವರನ್ನು ಮೊನ್ನೆ ಹೇಡಿ ಎಂದು ಮಾಧ್ಯಮಗಳೆದುರು ಕರೆದಿದ್ದಾರೆ. ಸ್ವಾಮಿಗಳು ಹೇಳಿದಂತೆ ಪ್ರೊ. ಭಗವಾನರು ನಿಜಕ್ಕೂ ಹೇಡಿ ಎನ್ನುವುದಾದರೆ ಪ್ರಪಂಚದಲ್ಲಿರುವ ಎಲ್ಲರೂ ಹೇಡಿಗಳೇ ಎಂದೆನ್ನಬೇಕಾಗುತ್ತದೆ. ವೈಚಾರಿಕತೆಯ ಹಿನ್ನೆಲೆಯಲ್ಲಿ ಇತ್ತೀಚೆಗೆ ಕಲ್ಬುರ್ಗಿಯವರ ಹತ್ಯೆ ನಡೆಯಿತು. ಆ ಬಳಿಕ ಮುಂದಿನ ಸರದಿ ಭಗವಾನರದ್ದು ಎಂದು ಅನೇಕ ಸನಾತನವಾದಿಗಳು ಬಹಿರಂಗವಾಗಿಯೇ ಘೋಷಿಸಿಕೊಂಡರು. ಅವರಿಗೆ ಕೊಲೆ ಬೆದರಿಕೆಯ ಕರೆಗಳೂ ಬಂದವು. ಆದರೂ ಇದರ ಬಿಸಿ ಆರುವ ಮೊದಲೇ ಭಗವಾನ್ ಸತ್ಯದ ಬಗ್ಗೆ ಮಾತನ್ನಾಡುವುದನ್ನು ಇನ್ನೂ ಮುಂದುವರೆಸಿಯೇ ಇದ್ದಾರೆ. ನನ್ನನ್ನು ಸುಡುವುದಿದ್ದರೆ ವಿಧಾನಸೌಧದ ಎದುರು ಸುಡಿ ಎಂದು ತಾನು ಅದಕ್ಕೆಲ್ಲ ಅಂಜುವವನಲ್ಲ ಎಂದು ತನ್ನನ್ನು ಸುಡ ಹೊರಟವರಿಗೆ ಅವರು ನೇರವಾಗೇ ಉತ್ತರ ಕೊಟ್ಟರು. ಇಂತವರನ್ನು ಹೇಡಿ ಎನ್ನಬಹುದೇ? ಅಥವ ನನ್ನನ್ನು ವಿರೋಧಿಸಿ ಮಾತನ್ನಾಡುವವರು ರಾಮಾಯಣ, ಗೀತೆ, ಪುರಾಣಗಳನ್ನೇ ಸರಿಯಾಗಿ ಓದಿಕೊಂಡಿಲ್ಲ ಎನ್ನುವ ಭಗವಾನರಿಗೆ ತಕ್ಕ ಉತ್ತರ ನೀಡಲು ಬನ್ನಂಜೆಯಂತವರನ್ನೋ ಇಲ್ಲಾ ಇನ್ನಾವುದೋ ಶಾಸ್ತ್ರ ಕೋವಿದ ವಿದ್ವಾಂಸರನ್ನು ಜತೆಗೆ ಕರೆತರುವುದನ್ನು ಬಿಟ್ಟು ಸೂಲಿಬೆಲೆ -ಗೋ ಮಧುಸೂದನ ರಂತಹ ವಿತಂಡವಾದಿ ವಿಧ್ವಂಸಕರನ್ನು ಭಗವಾನ್ ವಿರುದ್ಧ ಚರ್ಚಿಸಲು ತನ್ನ ಜೊತೆ ಕರೆತರ ಹೊರಟ ಪೇಜಾವರರು ಹೇಡಿಯೋ? ಬಲ್ಲವರೇ ಇಲ್ಲಿ ಹೇಳಬೇಕು.

ಸೆ. 14ರಂದು ಧಾರವಾಡದಲ್ಲಿ ಡಾ ಎಮ್.ಎಮ್. ಕಲ್ಬುರ್ಗಿ ಹತ್ಯಾವಿರೋಧಿ ಹೋರಾಟ ವೇದಿಕೆಯಡಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಜಿಲ್ಲಾಧಿಕಾರಿಗಳ ಮೂಲಕ ಸಲ್ಲಿಸಲಾದ ಮನವಿಯಲ್ಲಿ ಶ್ರೀರಾಮಸೇನೆಯ ಬಗ್ಗೆಯೂ ಉಲ್ಲೇಖವಿತ್ತು, ಆದರೆ ಆ ಮನವಿಗೆ ಸಹಿಹಾಕಿದ್ದ ಹಿರಿಯ ಸಾಹಿತಿಗಳಿಬ್ಬರು ಬಳಿಕ ಶ್ರೀರಾಮಸೇನೆಯವರ ಬೆದರಿಕೆಗೆ ಮಣಿದು ನಾವು ಆ ಪತ್ರವನ್ನು ಓದದೇ ಸಹಿ ಹಾಕಿದ್ದು ತಪ್ಪಾಯಿತು ಎಂದದ್ದು ಮಾಧ್ಯಮಗಳಲ್ಲಿ ಸುದ್ದಿಯಾಗಿತ್ತು, ಇಲ್ಲಿ ಉಲ್ಟಾ ಹೊಡೆದಂತೆ ತೋರುವ ಅವರನ್ನು ಕೂಡಾ ಹೇಡಿ ಎನ್ನಲಾಗದು. ಯಾಕೆಂದರೆ, ಅವರಿಗೆ ನಿಮ್ಮ ಮನೆಯನ್ನು ಧ್ವಂಸ ಮಾಡುವೆವು ಇತ್ಯಾದಿಯಾಗಿ ಬಂದಂತಹ ಬಹಿರಂಗ ಬೆದರಿಕೆಗಳು ಅಲ್ಲದೇ ಇನ್ನೂ ಪ್ರಮುಖವಾಗಿ ವಿಷಯಕ್ಕೆ ಸಂಬಂಧಿಸದಿದ್ದರೂ ತನ್ನನ್ನು ನಂಬಿದವರ ಮೇಲಾಗುವ ಹಲ್ಲೆ ಸಂಭವ ಮತ್ತು ಹಾದಿಯಲ್ಲಿ ಹೋಗುವ ಮಾರಿಯನ್ನು ಮನೆಗೆ ತರುತ್ತಿದ್ದೀರಲ್ಲ?? ಊರು ಉದ್ಧಾರ ಮಾಡೋ ಉಸಾಬರಿಯೆಲ್ಲ ನಿಮಗ್ಯಾಕೆ? ಎನ್ನುವಂತಹ ಮನೆಯವರ ಒತ್ತಡಗಳ ಹಿನ್ನೆಲೆ ಮೊದಲಾದವುಗಳು ಇಂತಹ ಬೆಳವಣಿಗೆಗೆ ಕಾರಣವಿರುತ್ತದೆ. (ಇದು ಬಹುತೇಕ ಎಲ್ಲಾ ಪ್ರಗತಿಪರರು ಎದುರಿಸುವಂತಹ ಸನ್ನಿವೇಶ. ಪರೇಶ್ ರಾವಲ್ ನಟನೆಯ 'ಓಎಮ್‌ಜಿ' ಎನ್ನುವ ಸಿನಿಮಾದಲ್ಲಿ ಸ್ನೇಹಿತರೊಂದಿಗೆ ಟೀವಿಯಲ್ಲಿ ತನ್ನ ತಂದೆಯ ಕ್ರಾಂತಿಕಾರಿ ಮಾತುಗಳನ್ನು ಕೇಳಿ ಸಂತೋಷಪಡುತ್ತಿರುವ ಗೆಳೆಯರ ಮಧ್ಯೆ ಅವರ ಮಗಳು ಕಣ್ಣೀರಿಡುತ್ತಾಳೆ. ಎಲ್ಲರೂ ಅಚ್ಚರಿಯಿಂದ ಅವಳನ್ನು ನೋಡಿದಾಗ ಆಕೆ ಹೆಮ್ಮೆಯಿಂದ "ಅವರು ನನ್ನಪ್ಪ" ಎನ್ನುತ್ತಾಳೆ. ಆದರೆ ಈತನ ರಾಜಿಯಾಗದ ಹೋರಾಟ-ಸಿದ್ಧಾಂತಗಳ ಕಾರಣಕ್ಕೆ ಆತ ಹೆಂಡತಿಮಕ್ಕಳಿಂದ ದೂರವಾಗಿ ಒಂಟಿಯಾಗಿರುತ್ತಾನೆ. ಸಿನಿಮಾ ಆದರೂ ಇದು ವಾಸ್ತವ ಸಂಗತಿ. ಸಿನಿಮಾದಲ್ಲಿ ಪೊಲೀಸರು ಕೊನೆಗೆ ಬರುವಂತೆ ಬೆಂಬಲ ಏನಾದರೂ ಬರುವುದಿದ್ದರೆ ಅದು ಎಲ್ಲಾ ಆದ ಮೇಲಷ್ಟೆ) ಇದು ಸಾಂದರ್ಭಿಕ ಅನಿವಾರ್ಯತೆಯೇ ವಿನಃ ಹೇಡಿತನ ಅಥವ ಸೋಲಾಗಲೀ ಖಂಡಿತಾ ಅಲ್ಲ, ಗೆಲಿಲಿಯೋ ಅಂತವರೇ ಸಂಪ್ರದಾಯವಾದಿಗಳೆದುರು ಸೋಲನ್ನೊಪ್ಪಿ ಶರಣಾಗಿದ್ದರು.

ಪೇಜಾವರರು ಉಲ್ಲೇಖಿಸಿರುವ ಹೇಡಿತನ ಮತ್ತು ಸಂಪ್ರದಾಯವಾದಕ್ಕೆ ದೇಶ ಕಾಲವನ್ನೂ ಮೀರಿದ ಪ್ರಾಚೀನ ನಂಟಿದೆ. ಈ ಸಂಪ್ರದಾಯವಾದಿಗಳು ಸಿದ್ಧಾಂತದ ವಿರುದ್ಧ ಸಿದ್ಧಾಂತದಿಂದಲೇ ಉತ್ತರ ಕೊಡಲಾಗದ ಸಂದರ್ಭಗಳಲ್ಲಿ ಕೊಲೆ ಕುತಂತ್ರಗಳ ಮೊರೆ ಹೋಗುತ್ತಾರೆ. ಗೆಲಿಲಿಯೋ ಭೂಮಿಯು ಸುತ್ತ ಸೂರ್ಯ ಸುತ್ತುತ್ತಾನೆಂಬ ಭೂಕೇಂದ್ರವಾದಕ್ಕೆ ವಿರುದ್ಧವಾಗಿ ಸೂರ್ಯನ ಸುತ್ತ ಭೂಮಿ ಸುತ್ತುತ್ತದೆ ಎಂದಾಗ ಸೈದ್ಧಾಂತಿಕವಾಗಿ ಅದನ್ನ ಸುಳ್ಳೆಂದು ನಿರೂಪಿಸಿ ಆತನ ಬಾಯಿ ಮುಚ್ಚಿಸುವ ಬದಲು ಪ್ರಭುತ್ವದ ಮೇಲೆ ಒತ್ತಡ ತಂದು ಆತನನ್ನು ಜೈಲಿಗಟ್ಟಿ ಕೊಲ್ಲಲು ನೋಡಿದರು. ಬಳಿಕ ಶರಣಾದ ಗೆಲಿಲಿಯೋ ನಿಮ್ಮದೇ ಸರಿಯಪ್ಪ ನನ್ನದು ತಪ್ಪೆಂದು ಕ್ಷಮೆಯಾಚಿಸಿ ಹೊರಬಂದನಾದರೂ ತನ್ನವರ ಬಳಿ "ಹೀಗೆಂದ ಮಾತ್ರಕ್ಕೆ ಭೂಮಿ ಸೂರ್ಯನ ಸುತ್ತ ತಿರುಗುವುದನ್ನು ನಿಲ್ಲಿಸುತ್ತಾನೆಯೇ? ನಿಜ ಯಾವತ್ತಿದ್ದರೂ ಪ್ರಕಟಗೊಂಡೇ ಬಿಡುತ್ತದೆ" ಎಂದಿದ್ದ. ಸ್ವಯಂಪಾದ್ರಿಯಾಗಿದ್ದ ತಳಿಶಾಸ್ತ್ರದ ಪಿತಾಮಹ ಗ್ರೆಗರ್ ಮೆಂಡಲ್ ಸತ್ಯವನ್ನು ಬಹಿರಂಗವಾಗಿ ಹೇಳಲೂ ಆಗದೇ ಹೇಳದಿರಲೂ ಆಗದೇ ಕದ್ದುಮುಚ್ಚಿ ತನ್ನ ಶೋಧನೆಯ ವಿಚಾರವನ್ನು ಬರೆದಿಟ್ಟು ಸತ್ತಿದ್ದ. ಚಾರ್ಲ್ಸ್ ಡಾರ್ವಿನ್ ಸಹ ತನ್ನ ಸಂಶೋಧನಾ ಪ್ರಬಂಧದಲ್ಲಿ ಎಲ್ಲೂ ಮಂಗನಿಂದ ಮಾನವನಾಗಿದ್ದಾನೆ ಎಂದು ನೇರವಾಗಿ ಉಲ್ಲೇಖಿಸಹೋಗಿಲ್ಲ. ಪರೋಕ್ಷವಾಗಿ ಆ ರೀತಿ ತನ್ನ ವಿಕಾಸವಾದ ಥಿಯರಿಯನ್ನು ಬರೆದಿಟ್ಟು ಅದಕ್ಕೂ ಕೂಡ ತೀವ್ರ ವಿರೋಧವನ್ನೆದುರಿಸಿದ್ದ. ಬಳಿಕ ಶತಮಾನದ ಕಾಲ ಕಳೆದ ಮೇಲೆ ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಡಾರ್ವಿನ್ ಥಿಯರಿಯನ್ನು ಚರ್ಚ್ ಇತ್ತೀಚೆಗೆ ಭಾಗಶಃ ಒಪ್ಪಿಕೊಂಡಿತು. ಸಂಪ್ರದಾಯವನ್ನು ಎದುರು ಹಾಕಿಕೊಂಡವರು ಈ ರೀತಿ ಬೆದರಿಕೆ, ಹತ್ಯೆ, ಗಡಿಪಾರು, ಹಿಂಸೆಗಳಿಗೆಲ್ಲ ಸಾಕಷ್ಟು ಗುರಿಯಾಗಿದ್ದರು. ಅದಕ್ಕೆ ಇತ್ತೀಚೆಗಿನ ಉದಾಹರಣೆಯಾಗಿ ಮಲಾಲರಿಂದ ಹಿಡಿದು ಕಲ್ಬುರ್ಗಿಯರವರೆಗೆ ಸಾಕಷ್ಟು ಉದಾಹರಣೆಗಳನ್ನು ನೋಡಬಹುದು. ನಮ್ಮ ದೇಶದಲ್ಲೂ ಹಿಂಸೆ ಹಾಗು ಚಾತುರ್ವರ್ಣದ ಸನಾತನ ಸಂಪ್ರದಾಯವನ್ನು ಎದುರು ಹಾಕಿಕೊಂಡ ಬುದ್ಧ ಸಾಕಷ್ಟು ಪೀಡನೆಗೊಳಗಾಗಿದ್ದನಲ್ಲದೇ ಬಳಿಕ ಶಂಕರಾಚಾರ್ಯನಂತವರು ಬುದ್ಧನ ಅನುಯಾಯಿಗಳ ವಿರುದ್ಧ ಕ್ರೂರ ಸಮರವನ್ನೇ ಸಾರಿದ್ದು ಇತಿಹಾಸ.

ಮಹಾಭಾರತದಲ್ಲಿ ಪುರೋಹಿತಶಾಹಿಗಳ ಹೊಟ್ಟೆಗೆ (ಬಟ್ಟೆ ಕೂಳಿಗೆ) ಕಲ್ಲು ಹಾಕ ಹೊರಟ ಚಾರ್ವಾಕನನ್ನು ಧರ್ಮರಾಯನಂತಹ ಧರ್ಮರಾಯನೆದುರೇ ವಿಚಾರಿಸದೇ ಬರ್ಬರವಾಗಿ ಕೊಲ್ಲಲಾಯಿತು. ತಪ್ಪೋ ಸರಿಯೋ ಆತನ ಪ್ರಶ್ನೆ ಪ್ರಾಮಾಣಿಕವಾಗಿತ್ತು. ಆದರೆ ಸಿಕ್ಕಂತಹ ಉತ್ತರ? ಘೋರಾತಿಘೋರ. ಭಗವಾನ್ ಅವರಂತವರು ಕೇವಲ ಹಿಂದೂ ದೇವತೆಗಳನ್ನೇ ಟಾರ್ಗೆಟ್ ಮಾಡುತ್ತಾರೆ ಏಕೆ? ಎನ್ನುವುದು ಸನಾತನವಾದಿಗಳು ಕೇಳುವ ಸಾಮಾನ್ಯ ಪ್ರಶ್ನೆ. ಇಲ್ಲಿ ನಡೆಯುತ್ತಿರುವ ವಿಮರ್ಶೆ ಬಾಯಿ ಚಪಲಕ್ಕಲ್ಲ ಹಾಗು ಈ ವಿಮರ್ಶೆ ತಮಗೆ ಹಾಗು ತಮ್ಮವರಿಗೆ ಸಂಬಂಧವಿದ್ದ ವಿಚಾರಕ್ಕಷ್ಟೇ ಮಾಡಬೇಕಾದುದು ನ್ಯಾಯ. ನಾವು ನಮ್ಮ ಮನೆ (ಅಂದರೆ ತನ್ನ ಹಾಗು ತನ್ನವರಿಗೆ ಸಂಬಂಧಪಟ್ಟ) ವಿಚಾರವನ್ನು ಮಾತನ್ನಾಡಬೇಕೇ ವಿನಃ ನೆರೆಮನೆಯ ವಿಚಾರ ಇಲ್ಲಿ ಅನವಶ್ಯಕ. ಹಾಗಂತ ಸಮಯ ಬಂದರೆ ಬೇರೆ ಧರ್ಮದ ವಿಮರ್ಶೆಗಿಳಿಯಲು ಇಂತವರಿಗೆ ಹಿಂಜರಿಕೆಯೂ ಇರದು.

ಇತ್ತೀಚೆಗೆ ಮಂಗಳೂರಿನ ಕ್ರಿಶ್ಚಿಯನ್ ಶಾಲೆಗಳಿಗೆ ನಿಮ್ಮ ಮಕ್ಕಳನ್ನು ಕಳಿಸಬೇಡಿ. ಅವರು ನಮ್ಮ ಸಂಸ್ಕೃತಿಯನ್ನ ಕಲಿಸುವುದಿಲ್ಲ ಹಿಂದೂ ವಿದ್ಯಾಸಂಸ್ಥೆಗಳಿಗೇ ಕಳುಹಿಸಿ ಎಂಬ ಫರ್ಮಾನು ಹಿಂದೂ ನಾಯಕರುಗಳಿಂದ ಪರೋಕ್ಷವಾಗಿ ಹೊರಟಿದೆ. (ಈ ಹಿಂದೂ ನಾಯಕರುಗಳೆಲ್ಲ ವಿದ್ಯೆ ಕಲಿತದ್ದು ಇದೇ ಕ್ರಿಶ್ಚಿಯನ್ನರು ಕಟ್ಟಿದ ವಿದ್ಯಾಸಂಸ್ಥೆಗಳಿಂದ) ಈ ರೀತಿಯಾಗಿ ಮುಗ್ಧ ಹಿಂದೂಗಳನ್ನು ಯಾಮಾರಿಸುವ ಹಾಗು ಅಬ್ರಾಹ್ಮಣ ಮುಗ್ಧ ಮಕ್ಕಳಲ್ಲಿ ಸನಾತನ ವಿಷ ತುಂಬುವ ಸಲುವಾಗಿ ತಮ್ಮ ವಿದ್ಯಾಸಂಸ್ಥೆಗಳಲ್ಲಿ ಈ ಮುಗ್ಧರನ್ನು ಎಳೆದುಕೊಳ್ಳಲಾಗುತ್ತಿದೆ (ವಿದ್ಯೆ ಇದೀಗ ಸೇವೆ ಎನ್ನುವ ಬದಲು ಭರ್ಜರಿ ಬ್ಯುಸಿನೆಸ್ ಆಗಿ ಬದಲಾಗಿದೆಯಲ್ಲ). ಇಂತಹ ದಾರಿ ತಪ್ಪಿಸುವ ಫರ್ಮಾನುಗಳನ್ನು ಇವರುಗಳು ಹೊರಡಿಸಬಹುದು. ಆದರೆ, ಮೌಢ್ಯಗಳಿಗೆ ಬಲಿ ಬೀಳಬೇಡಿ ಅದು ನಿಮ್ಮ ಹಾಗು ನಿಮ್ಮನ್ನೇ ನಂಬಿದವರ ಏಳಿಗೆಗೆ ತೊಡರುಗಾಲು ಎಂದು ಪ್ರಗತಿಪರರು ಕೊಡುವ ಪರೋಕ್ಷ ಎಚ್ಚರಿಕೆ ತಪ್ಪಂತೆ. ಪ್ರಗತಿಪರರಲ್ಲಿ ಇಲ್ಲಿ ಇರುವುದು ಸಾಮಾಜಿಕ ಕಾಳಜಿಯೇ ವಿನಃ ಪ್ರಚಾರದ ಆಸೆ ಹಿಂದೂತ್ವದ ವೈರವೇನಲ್ಲ, ಮೌಢ್ಯ ಹಾಗು ಮೌಢ್ಯವನ್ನು ಪ್ರೋತ್ಸಾಹಿಸುವ ಧರ್ಮಗ್ರಂಥದ ಉಲ್ಲೇಖಗಳನ್ನು ವಿರೋಧಿಸಿದಾಕ್ಷಣ ಅದು ಹಿಂದೂತ್ವದ ಅವಹೇಳನ ಹೇಗಾಗುತ್ತದೇ? ಬುದ್ಧ, ವಿವೇಕಾನಂದ, ಬಸವಣ್ಣನೇ ಮೊದಲಾದ ಅನೇಕ ದಾರ್ಶನಿಕರು ಮಾಡಿದ್ದೂ ಇದನ್ನೇ ಅಲ್ಲವೇ? ಸತಿಪದ್ಧತಿ ತೀವ್ರ ಜನಮಾನಸದಲ್ಲಿ ಹಾಸುಹೊಕ್ಕಿದ್ದಾಗ ಸಮಾಜದ ವಿರೋಧ ಕಟ್ಟಿಕೊಂಡು ಅದರ ವಿರುದ್ಧ ದನಿ ಎತ್ತಿ ಅದಕ್ಕೆ ಕಡಿವಾಣ ಹಾಕಿದ್ದು ಇಂತಹ ಪ್ರಗತಿಪರರೇ ತಾನೆ? ಇಂತಹ ಉದಾಹರಣೆಗಳು ಬೇಕಷ್ಟಿವೆ. ದಾಬೋಲ್ಕರರಿಗೆ, ಪನ್ಸಾರೆಯವರಿಗೆ ಭಗವಾನ್ ಅವರವರಿಗೆ ಜೀವಾಪಾಯವನ್ನು ಮೈಮೇಲೆಳೆದುಕೊಂಡು ಪ್ರಚಾರ ಗಿಟ್ಟಿಸುವ ಗೀಳು ಬಂದಿರುವುದು ಯಾಕೆಂದು ಅದನ್ನು ಆರೋಪಿಸುವವರೇ ಹೇಳಬೇಕು. ಅದೂ ಈ ಇಳಿವಯಸ್ಸಿನಲ್ಲಿ, ಅವರಲ್ಲಿರುವುದು ಜನರನ್ನು ಮೌಢ್ಯವಿಮುಕ್ತರನ್ನಾಗಿಸಬೇಕೆಂಬ ಅವರನ್ನ ಜಾಗೃತಗೊಳಿಸಬೇಕೆಂಬ ಸಾಮಾಜಿಕ ತುಡಿತವೇ ವಿನಃ ಈಗ ಇಲ್ಲದ ಕೃಷ್ಣ- ರಾಮರನ್ನು ಕಟ್ಟಿಕೊಂಡು ಭಗವಾನರಂತವರಿಗೆ ಆಗಬೇಕಾದದ್ದು ಏನೂ ಇಲ್ಲ.

ನಂಬಿಕೆಗೆ ಸಂಬಂಧಪಟ್ಟಂತೆ ಜನರಲ್ಲಿ ಬಗೆಗಳಿವೆ. ನಂಬಿಕೆಗಳನ್ನು ಮರುಮಾತಿಲ್ಲದ ನಂಬುವವರು, ನಂಬದೇ ಇರುವವರು, ಅ ಬೇಳೆ ಬೇಯಿಸಿಕೊಳ್ಳುವವರು (ಇವ ಇರಲೇಬೇಕೆಂದೇನಿಲ್ಲ), ಇಂತಹ ವಿಚಾರಗ ಇದ್ದಿರಲಿ ಎಂದು ಅವನ್ನೆಲ್ಲ ತೀರಾ ಪರಿಗಣಿಸದೇ ತಿರಸ್ಕಾರವನ್ನೂ ಮಾಡದೇ ಬೇ ವರು ಮತ್ತು ಧರ್ಮದ ಸಾರವನ್ನು ಅ ಹೋಗುವುದಕ್ಕಿಂತ ಭಾವನಾತ್ಮಕ ವಿಚಾರಗ ಹೊಡಿ ಕಡಿ ಎಂದು ಆವೇಶಕ್ಕೊಳಗಾಗಿ ತ ಕಳಕೊಳ್ಳುವವರು (ಧರ್ಮಕ್ಕಾಗಿ ಹೋರಾ ಸಾಯುವವರೂ ಇದ್ದಾರೆ ಆದರೆ ಅದನ ಆಚರಿಸುವವರು ಯಾರೂ ಇದ್ದಂತಿಲ್ಲ ಹಿರಿಯರೊಬ್ಬರು ಇಂಥವರ ಕುರಿತಾಗೇ ಅ ಈ ಆವೇಶಕ್ಕೆ ಕಾರಣವಾಗುವಂತಹ ವಿಚಾರ (ಹೆಚ್ಚಾಗಿ ಯುವಪೀಳಿಗೆ) ಬಿತ್ತಿ ಅವ ತಪ್ಪಿಸಿಹೋಗುವಂತಹ ದುರುಳರೇ ಮೊದಲ ಪಟ್ಟಿಯಲ್ಲಿ ಸೇರುತ್ತಾರೆ. ಇಂತವರಿಗೆ ಧರ್ಮದ ಅಸಹನೆ ಹಾಗು ಮೌಢ್ಯ ಬಿತ್ತುವಿಕೆಯಲ್ಲೆ ಯಾಕೆಂದರೆ, ತಮ್ಮ ಬೇಳೆ ಬೇಯಲು ಈ ಅ ಅವರಿಗೆ ಹೆಚ್ಚು ಸೂಕ್ತವೆಂದು ತೋರುತ್ತದೆ. ಕಲ್ಬುರ್ಗಿ, ಭಗವಾನರಂತವರು ಸೆಣಸುತ್ತಿರುವು ವಿರುದ್ಧವೇ.

ಟಿವಿಯಲ್ಲಿ ಬೆಳ್ಳಂಬೆಳಗ್ಗೆ ಭವಿಷ್ಯ ವ ಜನರನ್ನ ಮೌಢ್ಯದತ್ತ ದೂಡುವವರು. ಎಲ್ಲ ಪರಿಹಾರವಿದೆ ಎಂದು ಕಷ್ಟದಲ್ಲಿರುವವರಲ್ಲಿ ಅವರನ್ನು ಮತ್ತಷ್ಟು ಆಳಕ್ಕೆ ತಳ್ಳುವವರನ್ನು ನಾವು ನಂಬಿಕೆಯ ನೆಪದಲ್ಲಿ ಸುಮ್ಮನಿರುತ ಹುಚ್ಚು ಕಟ್ಟಿ ಆರಾಧಿಸುವ ಸ್ವಾಮಿಗಳು ದೇವಮಾನವರು, ಧಾರ್ಮಿಕ ಮುಖಂ ಧರ್ಮದ) ತಾವು ಸಮಾಜದಲ್ಲಿ ಪ್ರಶ್ನಾತೀ ಭ್ರಮೆಯಲ್ಲಿದ್ದಾರೆ (ಉದಾ ಫತ್ವಾ ಚಾಳಿಯವರು ತಮಗೆ ದೇಶದ ಸಂವಿಧಾ ಕಾನೂನು ಲಾಗೂ ಆಗುವುದಿಲ್ಲ ಎಂದು ಚ ಇತ್ಯಾದಿ ರಾಘವೇಶ್ವರ ಪ್ರಕರಣ ಗೊ ಮಾಡುವುದು ಅನಾಚಾರಗಳಾದರೂ ಜನ ಬಿಟ್ಟ ಹೇಳಿಕೆ-ಕರೆಗಳಿಗೇನೂ ಇವರಲ್ಲಿ ಬ

ಹುಚ್ಚ ಜೋಕರ್, ಹೇಡಿ, ಸೈತಾನ ದಾಸಿಗೆ ಬೊಬ್ಬಿಡುತ್ತಿದ್ದಾನೆ ಎಂದೆಲ್ಲ ಹಲವಾ ಸಿಟಿ ರವಿ ಮುತಾಲಿಕನಂತವರಿಂದೆಲ್ಲ ಹೀಯಾಳಿಸಿಕೊಳ್ಳುತ್ತಿದ್ದಾರೆ. ಒಂದು ರೀತಿ ಭಗವಾನರು ಸಿನಿಮಾ ಥಿಯೇಟರ್‌ನ ಹಾಕುವವರಿದ್ದಂತೆ. ಪಿಕ್ಚರ್ ಮಧ್ಯ ನಿಂತಾಗ ನೋಡುವ ಎಲ್ಲರಿಗೂ ಬೇಸರವಾದರೂ ಬೊ ಸಿಳ್ಳೆ ಹೊಡೆದು ಗಲಾಟೆ ಮಾಡಿ ಬೇಗ ಅ ಮಾಡುವವರು ಈ ಸಿಳ್ಳೆ ವ್ಯಕ್ತಿಗಳೇ. ಸುಮ್ಮ ತಮಗೂ ಇದೇ ಆಸೆ ಇದ್ದರೂ ಸುಮ್ಮನೆ ಕ ಅವರೆಲ್ಲ ಸುಭಗರು. ಸಿಳ್ಳೆ ಹೊಡೆದವರಿಗೆಲ್ಲ ಪಟ್ಟ. ಭಗವಾನ್ ಜನಕಲ್ಯಾಣಕ್ಕಾಗಿ ಇದೇ ಹೊಡೆಯುತ್ತಿರಲಿ. ಆದರೆ ದುರುಳರ ಬ ಜತೆಗೆ ಇದ್ದಿರಲಿ.

ಭಗವಾನ್ ಅವರು ನಮಗೆ ಚ ರಾಮರಾಜ್ಯವಲ್ಲ ಭೀಮರಾಜ್ಯ ಎಂದಿದ್ದಾ ಮುರಾರಿ ನಿ ಬಲ್ಲಾಳರು ಅನ್ನುವಂತೆ ಕೆ ಧರ್ಮದ ಅಮಲನ್ನು ಹತ್ತಿಸಿ ಗಲಾಟೆಗಳ ಭಾಗವಹಿಸದೇ ತಮ್ಮ ಆಟಾಟೋಪಗಳಿಗೆ ತ ವಿರುದ್ಧ ಇಂತಹ ಮುಗ್ಧ ಅಮಾಯಕರನ್ನು ತಾವು ಸೇಫಾಗಿ ಕೂತು ನೋಡುವ ವೈ ನಿಜವಾದ ಹೇಡಿಗಳು. ಬದಲಿಗೆ ನೇರವಾ ಹುಳುಕನ್ನು ಬಯಲಾಗಿಸುತ್ತಾ ಜನರನ್ನು ಜಾಗ ಭಗವಾನರಂತವರಲ್ಲ, ಉಡುಪಿಯ ಗೋ ಗೋಹತ್ಯೆಯ ವಿರುದ್ಧ ಹೋರಾಡುವ ಪಣ ತ ಪೇಜಾವರರು ಶೂದ್ರ ವರ್ಗಕ್ಕೆ ಕರೆ ಕೊಡು ಉತ್ತರ ಪ್ರದೇಶದಲ್ಲಿ ದೇಗುಲ ಪ್ರವೇಶ ವಯೋವೃದ್ಧ ದಲಿತನನ್ನು ಭಕ್ತರುಗಳ ಎದುರೇ ಹತ್ಯೆ ಮಾಡಿದಂತಹ ಪಾತಕಿಗಳ ಬಗ್ಗೆ ಅ ವಿಚಾರಗಳಿಗೆ ಮೂಗು ತೂರಿಸೋ ವ್ಯಕ್ತಿಯಾಗಿದ್ದುಕೊಂಡೂ ಕೂಡ ಮಾತನಾಡ ವಿಪರ್ಯಾಸ. ಸಮಾಜದ ಆರೋಗ್ಯದ ದೃಷ್ಟಿ ಹೋರಾಡಬೇಕಿರುವುದು ಯಾರ ವಿರುದ್ಧ..! ಉತ್ತರಿಸುವವರಾರು? ಅಥವ ಇದು ಪ್ರಶ್ನೆಯೇ?

■ ಅವಿನಾಶ್ ಎಮ್.ಎಸ್,

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಬುದ್ಧನ ಕೇಶಪುರಾಣ ಮತ್ತು ದಂತದ ಕಥೆಗಳು

...ಸಿದ ಬುದ್ಧನ ದೇಹವನ್ನು ಸಂಸ್ಕಾರ ಮಾಡಿದ ...ಯ ಬೂದಿಯನ್ನು ಭಾಗಗಳನ್ನಾಗಿ ಮಾಡಿ ...ರಲ್ಲಿ ಹಂಚಲಾಯಿತು. ಸಾಂಪ್ರದಾಯಕವಾಗಿ ...ಕ್ಯ ವಂಶದವರಿಗೆ ಕಳುಹಿಸಿಕೊಟ್ಟಿದ್ದರೆ ಸಾಕಿತ್ತು. ... ರಾಜವಂಶಗಳು ಅವಶೇಷಗಳಿಗಾಗಿ ಒತ್ತಾಯ ... ವಿಷಯವಾಗಿ ನಡೆಯಬಹುದಾದ ಜಗಳವನ್ನು ...ಕ್ಕುಗಳು ಬುದ್ಧನ ದೇಹಾವಶೇಷವನ್ನು ಹತ್ತು ... ಮಾಡಿ ಹಂಚಿದರು.

...ದ ಅರಸ ಅಜಾತಶತ್ರು, ವೈಶಾಲಿಯ ..., ಕಪಿಲವಸ್ತುವಿನ ಸಾಕ್ಯರು, ಅಲ್ಲಕಪ್ಪದ ... ರಾಮಗ್ರಾಮದ ಕೊಲಿಯರು, ವೇತದೀಪದ ...ಪಾವದ ಮಲ್ಲರು ಮತ್ತು ಕುಸಿನರದ ಮಲ್ಲರು ...ವಶೇಷಗಳನ್ನು ಪಡೆದವರು; ಹಾಗೆ ಪಡೆದ ... ಮೇಲೆ ಸ್ತೂಪಗಳನ್ನು ಕಟ್ಟಿ ಗೌರವಿಸಿದರು.

... ಯಾತ್ರಿ ಫಾ-ಹಿಯೆನ್ ಮತ್ತು ಹ್ಯೂಯನ್ ...ರತಕ್ಕೆ ಬಂದಾಗ ಈ ಬುದ್ಧಾವಶೇಷಗಳ ...ಸುಸ್ಥಿತಿಯಲ್ಲಿ ಇರಲಿಲ್ಲ ಎಂದು ದಾಖಲು ...ಸಾಮ್ರಾಟ ಅಶೋಕನು ಈ ಅವಶೇಷಗಳಿಗಾಗಿ ...ೂಡಗಿದಾಗ ಈ ಎಂಟು ಸ್ತೂಪಗಳನ್ನು ...ದೆಂದು ದಾಖಲಾಗಿವೆ.

ನೇಪಾಳದ ಬೋಮ್ಯಾನ್‌ನ ಅನುಯಾಯಿಗಳು ಸಾಧಿಸ ಹೊರಟಿದ್ದು ಬುದ್ಧನ ದಂತಗಳ ದಂತಕಥೆಗಳಲ್ಲಿ ನಂಬಿಕೆ ಇಟ್ಟಿದ್ದವರಿಗೂ ಪಥ್ಯವಾಗಲಿಲ್ಲ.

ಕ್ಸುವಾನ್ ಜಾಂಗ್ ಅನುವಾದ ಮಾಡಿರುವಂತಹ ನಂದಿಮಿತ್ರವದನ ವಿರಚಿತ ಪುರಾತನ ಕೃತಿಯೊಂದರಲ್ಲಿ ಬುದ್ಧನ ಅವಶೇಷಗಳ ಬಗ್ಗೆ ಬರೆದಿರುವುದೇನೆಂದರೆ, ಬುದ್ಧನ ಪರಿನಿರ್ವಾಣದ ನಂತರ ಆ ಅವಶೇಷಗಳನ್ನು ಹದಿನಾರು ಅರಿಹತರು ತಂದು ಸಮಾಧಿ ಮಾಡಿ ಮಹಾಸ್ತೂಪವೊಂದನ್ನು ನಿರ್ಮಿಸಿದರು. ಆ ಸ್ತೂಪವು ಭೂಮಿಯು ನೀರಿನಲ್ಲಿ ಮುಳುಗಿ ಚಿನ್ನದ ಚಕ್ರವು ವಿಶ್ವದಲ್ಲಿ ತಿರುಗುವವರೆಗೂ ಇದ್ದೇ ತೀರುವುದು. ಈ ಅವಶೇಷಗಳು ಪ್ರಳಯಾಗ್ನಿಯಲ್ಲಿಯೂ ನಾಶವಾಗದೇ ಭೂಗರ್ಭದಲ್ಲಿದ್ದು ನಂತರ ಮತ್ತೆ ಕಾಣಿಸಿಕೊಳ್ಳುವುದು. ಬುದ್ಧನ ಹಿಂದಿನ ಅವತಾರಗಳೂ ತಮ್ಮ ತಮ್ಮ ಅವಶೇಷಗಳನ್ನು ಉಳಿಸಿದ್ದು, ಅವರುಗಳೆಂದರೆ ಬುದ್ಧವಂಶದಲ್ಲಿ ತಿಳಿಸಿರುವಂತೆ ಸೋಭಿತ, ಪದುಮ, ಸುಮೇಧ, ಅತ್ಥದಸ್ಸಿ, ಪುಸ್ಸ, ವೆಸ್ಸಭು ಮತ್ತು ಕನಗಮನ ಬುದ್ಧರು.

ಈಗ ಬುದ್ಧನ ಅವಶೇಷಗಳು ಭಾರತದಲ್ಲಿಯೇ ಮೊದಲಾಗಿ ಆಫ್ಘಾನಿಸ್ತಾನ, ಅಮೆರಿಕ, ಬಾಂಗ್ಲಾದೇಶ, ಭೂತಾನ್, ಬರ್ಮಾ, ಕಾಂಬೋಡಿಯಾ, ಚೀನಾ, ಇಂಡೋನೇಷಿಯಾ, ಜಪಾನ್, ಕಾಶ್ಮೀರಾ, ಕೊರಿಯಾ, ಲೋಆಸ್, ಮಲೇಷಿಯಾ, ಮಂಗೋಲಿಯಾ, ನೇಪಾಳ, ಪಾಕಿಸ್ತಾನ, ಪರ್ಷಿಯಾ, ರಷಿಯಾ, ಸಿಂಗಪೂರ್, ಶ್ರೀಲಂಕಾ,

ಬಂದಿರುವುದಾಗಿ ತಿಳಿಸುತ್ತಾರೆ. ಆದರೆ ಅಮೇರಿಕೆಯ ಲೇಖಕರಾದ ಪೌಲ್ ಕ್ಯಾರಸ್ ಇಂತಹ ಮಾತುಗಳನ್ನು ತಳ್ಳಿ ಹಾಕುವುದಲ್ಲದೇ, ಇಂತಹ ಅವಶೇಷಗಳನ್ನು ಪೂಜಿಸುವುದೇ ಒಂದು ತಪ್ಪು ಎಂದೂ ಹೇಳುತ್ತಾರೆ.

ಬಾಂಗ್ಲಾದೇಶದ 'ಬುದ್ಧ ಧಾತು ಜಡಿ'ಯಲ್ಲಿ ನಾಲ್ಕು ಬುದ್ಧ ವಿಗ್ರಹಗಳ ಕೆಳಗೆ ಇರಿಸಿದ್ದಾರೆ. ಈ ಬುದ್ಧನ ಅವಶೇಷವನ್ನು ಬರ್ಮಾ ದೇಶದ ಯು ಪಾಣ್ಯ ಜೋತ ಮಹಾತೇರೋ ಇತ್ತೀಚೆಗೆ 1994ರಲ್ಲಿ ಕೊಟ್ಟಿದ್ದಾರೆ. ಬರ್ಮಾದಲ್ಲಿ ಬುದ್ಧನ ಕೂದಲುಗಳನ್ನು ತಂದ ತಪುಸ್ಸ ಮತ್ತು ಭಲ್ಲಿಕರ ಕೊಡುಗೆಯ ಅವಶೇಷಗಳೇ ಇಲ್ಲಿಯೂ ಇರುವುದು. ಬರಿಯ ಬುದ್ಧನ ಅವಶೇಷಗಳು ಮಾತ್ರವಲ್ಲ, ಬುದ್ಧನ ಹಿಂದಿನ ಜನ್ಮಗಳದ್ದೂ ಅವಶೇಷಗಳಿವೆಯಂತೆ. ಒಕ್ಕಲಪ ಎಂಬ ರಾಜನ ಸಹಾಯದಿಂದ ಮತ್ತು ನತ್ (ಚೈತನ್ಯ) ದ ರಾಜನಿಂದ ಸುಲೆ ಪಗೋಡವನ್ನು ಕಟ್ಟಿಸಿದ್ದಾರೆ. ಆ ಪಗೋಡದಲ್ಲಿ ಬುದ್ಧನ ಕೂದಲಿವೆ ಎಂದು ಹೇಳುತ್ತಾರೆ. ಬರ್ಮಾದಲ್ಲಿ ದೊರಕಿರುವ ಕಾನಿಷ್ಕಾದ ಸಂಪುಟವೊಂದರಲ್ಲಿ ಬುದ್ಧನ ಮೂರು ಮೂಳೆಯ ತುಂಡುಗಳಿವೆಯೆಂದು ಹೇಳುತ್ತಾರೆ. ಬ್ರಿಟಿಷರು ಉತ್ಖನನ ಮಾಡುವ ಸಮಯದಲ್ಲಿ ದೊರಕಿದ ಅದನ್ನು ಬರ್ಮಾದ ಅಧೀನದಲ್ಲಿಯೇ ಬಿಟ್ಟು ಹೋದರಂತೆ. ಉಪ್ಪತಸಂತಿ ಪಗೋಡದಲ್ಲಿ ಚೀನಾದಿಂದ ಬಂದಿರುವ ಬುದ್ಧನ ಹಲ್ಲಿನ ತುಣುಕು ಇದೆಯೆಂದು ಹೇಳುತ್ತಾರೆ.


ಚಕೇಸಧಾತುವಂಸ ಎಂಬ ಕೃತಿಯಲ್ಲಿ ಆರು

ರೀತಿಯಲ್ಲಿ ಇರುತ್ತದೆ ಎಂಬುದು ಮಾತ್ರ ಆಯಾ ಜನರ ತಿಳಿವಳಿಕೆ, ಶ್ರದ್ಧೆ ಒಲವು ಮತ್ತು ನಿಲುವುಗಳ ಮೇಲೆ ಅವಲಂಬಿತವಾಗಿರುತ್ತದೆ. ಹಾಗೆಯೇ ವಿಷಯಗಳಿಗೆ ಜನರು ಮತ್ತು ಪೀಳಿಗೆಗಳು ತಮ್ಮ ಕೊಡುಗೆಗಳನ್ನು ಕೊಡುತ್ತಾ ಜನಪದದ ಮೌಖಿಕ ಪರಂಪರೆಯಲ್ಲಿ ನಾನಾ ಬಗೆಯ ಕವಲುಗಳೂ ಹುಟ್ಟಿಕೊಳ್ಳುತ್ತಿರುತ್ತವೆ. ಆ ಕವಲುಗಳು ಮುಂದುವರಿದ ಪೀಳಿಗೆಗಳಲ್ಲಿ ಬರುವವರಿಗೆ ಹೇಗೆ ಮನವೊಲಿಸುತ್ತದೆ ಎಂಬುದು ಕೂಡ ಅವರ ಆಸಕ್ತಿ, ಶ್ರದ್ಧೆ ವೈಚಾರಿಕತೆ ಮತ್ತು ಮೌಢ್ಯತೆಗಳನ್ನು ಆಧರಿಸುತ್ತದೆ.

ಗಂಗೆಯೊಳಗ ಸ್ನಾನ ಮಾಡಿ ಶಿವನ ಸಿಕರ ಸುತ್ತಿಬಂದು
ಹರದ್ಯೇರು ಫಲವ ಬೇಡ್ಯಾರೇಳಯ್ಯಾ । ಸಿದ್ಧರಾಮಾ।
ಹರದ್ಯೇರು ಫಲವ ಬೇಡ್ಯಾರೇಳಯ್ಯಾ ॥

ಹೀಗೆಂದು ಸೊಲ್ಲಾಪುರದ ಸಿದ್ಧರಾಮೇಶ್ವರನನ್ನು ಜನಪದ ಕೇಳುತ್ತದೆ. ಇಟ್ಟೀಗಿ ಕಲ್ಲಮ್ಯಾಲ ಊರಿ ನಿಂತಾನೆರಡು ಪಾದ । ಎಂದು ಪ್ರಾರಂಭಿಸುತ್ತಾ ಪಂಢರಾಪುರದ ಪಾಂಡುರಂಗನನ್ನೂ ಕರೆಯುತ್ತಾರೆ. ಇನ್ನು ರಾಮ, ಕೃಷ್ಣ ಶಿವ, ಗಂಗೆ, ಗೌರಿ, ಲಕ್ಷ್ಮಿ ಇತರ ದೈವೀ ಪಾತ್ರಗಳನ್ನು, ಇವುಗಳನ್ನು ನಿರಾಕರಿಸಿದ ಕಲ್ಯಾಣದ ಶರಣನ್ನೂ ಒಳಗೊಂಡಂತೆ ಜನಪದ ಸಂಸ್ಕೃತಿ ತಮ್ಮ ಸಮಾಜದಲ್ಲಿ ತನ್ನ ಭಕ್ತಿ, ಪ್ರೀತಿ, ಭೀತಿ ಮತ್ತು ತನ್ನಷ್ಟದ್ದೇ ಅಸ್ತಿತ್ವದ ಮೌಲ್ಯಕೊಟ್ಟು ಬೆಳೆಸಿಕೊಂಡು ಬಂದಿದೆ.

'ಆದಿ ಒಳಗಲ ಜ್ಯೋತಿ ಬೀದಿ ಒಳಗಲ ಜ್ಯೋತಿ'







...ದು ಮತ್ತು ಹನ್ನೆರಡನೆಯ ಶತಮಾನದ ...ವಧಿಯ ಲೋಕಪನ್ನತ್ತಿಯು ಮಗಧ ರಾಜ ...ವು ಬುದ್ಧನ ಅವಶೇಷದ ಮೇಲೆ ಸ್ತೂಪ ... ಹೇಳುತ್ತಾ, ಅದನ್ನು ಭೂತವಾಹನ ... ರಕ್ಷಿಸಲ್ಪಟ್ಟಿದ್ದವು ಎಂದು ಹೇಳುತ್ತಾನೆ. ...ಬುದ್ಧನ ಅವಶೇಷಗಳನ್ನು ಸಂಗ್ರಹಿಸಿದ ...ಅವನ್ನು 84 ಸ್ತೂಪಗಳಿಗೆ ಹಂಚಿದನೆಂದೂ

...ಪರಿನಿರ್ವಾಣ ಸೂತ್ರ ಹೇಳುವಂತೆ ಬುದ್ಧನ ...ಲ್ಲುಗಳಲ್ಲಿ ಒಂದು ಇಂದ್ರನ ಸ್ವರ್ಗದಲ್ಲಿ ...ವಂತೆ. ಹಾಗೆಯೇ ಎರಡನೆಯದು ಗಾಂಧಾರ ... ಮೂರನೆಯದು ಕಳಿಂಗದಲ್ಲಿ ಮತ್ತು ...ನ್ನು ರಾಮಗ್ರಾಮದಲ್ಲಿ ನಾಗರ ಅರಸರಿಂದ ...ವವಂತೆ.

...ಕಾ ಮತ್ತು ಚೀನಾದಲ್ಲಿ ಹಲ್ಲಿನ ಅವಶೇಷಗಳನ್ನು ... ಗೌರವಗಳಿಂದ ವರ್ಷಕ್ಕೊಮ್ಮೆ ಮೆರವಣಿಗೆ ...ಆಗ್ನೇಯ ಏಷಿಯಾದ ಪಾರಂಪರಿಕ ಮಾತಿನಂತೆ ...ನಿರ್ವಾಣವಾದ ಬಳಿಕ ದೇವತೆಗಳು ಬುದ್ಧನ ...18 ಭಾಗಗಳಾಗಿಯೂ ಮತ್ತು 9 ತಲೆಯ ...ನ್ನು ಪ್ರಪಂಚದ ಪೂರ್ತಿ ಕಳುಹಿಸಿದರಂತೆ. ... ಪೂರ ಐದನೆಯ ಶತಮಾನದ ಬುದ್ಧಘೋಷ ...ದು ಅವಶೇಷವನ್ನು ಹೊಂದಿದ್ದು ವಿಹಾರವನ್ನು ...ೆ.

... ಅವಶೇಷಗಳು ಮುಂದೊಂದು ದಿನ ಬುದ್ಧಗಯೆ ...ಸಾದ. ಬೋಧಿ ಮರದೆಡೆ ಸೇರುತ್ತವೆ. ... ಹಾಕಿಕೊಂಡು ಕುಳಿತಿರುವ ಬುದ್ಧನಂತೆ ...ಪಡೆಯುತ್ತವೆ. ಹೀಗೆ ಎರಡು ಪವಾಡಗಳು ... ಎಂದು ನಂಬುತ್ತಾರೆ. ಹೀಗಾಗುವಾಗ ...ಗಲಿ ಅಥವಾ ಇನ್ನೆಲ್ಲೇ ಆಗಲಿ ಬುದ್ಧನ ... ಕಾಣದೇ ಹೋಗುವುದೇ ಮೈತ್ರೇಯ ಬುದ್ಧನ ... ಸೂಚನೆಯಂತೆ. ಅವಶೇಷಗಳು ...ದಮೇಲೆ, ಮೈತ್ರೇಯ ಬುದ್ಧನ ಅವತಾರವನ್ನು

ಥೈಲ್ಯಾಂಡ್, ಟಿಬೆಟ್ ಮತ್ತು ವಿಯೆಟ್ನಾಂಗಳಲ್ಲಿ ಇರುವುದು ಮಾತ್ರವಲ್ಲದೇ ಸ್ವರ್ಗದಲ್ಲಿಯೂ ಇದೆಯಂತೆ.

ಐದನೆಯ ಶತಮಾನದ ಮಧ್ಯಭಾಗದಲ್ಲಿ ಬಂದ ಚೀನಾದ ಯಾತ್ರಿ ದೋರಾಂಗ್ ಆಫ್ಘಾನಿಸ್ತಾನಕ್ಕೆ ಹೋದಾಗ ಅವಶೇಷದ ಸ್ಮಾರಕಕ್ಕೆ ಭೇಟಿ ನೀಡಿದ್ದನಂತೆ. ನಾಗಹರಹರ ಎಂಬಲ್ಲಿ ಬುದ್ಧನ ಬುರುಡೆಯ ಅವಶೇಷವಿದ್ದು, ಅಲ್ಲಿಯೇ ಬುದ್ಧನ ಹಲ್ಲು ಮತ್ತು ಕೂದಲನ್ನು ರತ್ನಖಚಿತ ಆಭರಣ ಮಾಡಿದ್ದರು ಎಂದು ಉಲ್ಲೇಖಿಸುತ್ತಾನೆ. ಬುದ್ಧನ ನೆರಳು ಬಂಡೆಗಲ್ಲಿನ ಮೇಲೆ ಬಿದ್ದಿರುತ್ತದೆ ಎಂದೂ, ಅಲ್ಲಿಯೇ ಕೆಲವು ಹೆಜ್ಜೆಗುರುತುಗಳು ಇವೆ ಎಂದೂ, ಇನ್ನೆಲ್ಲೋ ಒಂದು ಕಡೆ ಬುದ್ಧ ತನ್ನ ಬಟ್ಟೆಯನ್ನು ತೊಳೆದಿದ್ದನೆಂದೂ ಗುರುತಿಸುತ್ತಾನೆ. ಒಂದು ಆಲಯವನ್ನು ಬುದ್ಧನೇ ಸ್ವಯಂ ನಿರ್ಮಿಸಿದನೆಂದೂ ಅದರ ಮೇಲೆ ಅವನೇ ಬರೆದಿರುವವನೆಂದೂ ಹೇಳುತ್ತಾರೆ. ಹಾಗೆಯೇ ಬುದ್ಧನ ಹಲ್ಲನ್ನು ಬಕ್ತ್ರದಲ್ಲಿಯೂ ಮತ್ತು ಬಮ್ಯಾನ್‌ನಲ್ಲಿ ಬುದ್ಧನ ಹಲ್ಲಿನ ಜೊತೆ ಚಕ್ರವರ್ತಿನ್ ಎಂಬ ಅರಸನೊಬ್ಬನ ಹಲ್ಲನ್ನೂ ಇಟ್ಟಿದ್ದಾರಂತೆ. ಬುದ್ಧನ ಬಿಂಬಗಳನ್ನು ತೋರುವ ಪುರಾತನವಾದ ಗಾಂಧಾರ ಕಲಾ ಪರಂಪರೆಯ ಬಿಮರಾನ್ ಸಂಪುಟ (ಪೆಟ್ಟಿಗೆ) ಪೂರ್ವ ಆಫ್ಘಾನಿಸ್ತಾನದ ಜಲಾಬಾದ್ ಬಳಿಯ ಸ್ತೂಪವೊಂದರ ಬಳಿ ದೊರಕಿದ್ದು, ಇದರಲ್ಲಿ ಬುದ್ಧನ ಅವಶೇಷಗಳು ದೊರಕುತ್ತವೆ ಎಂದು ನಂಬಿದ್ದರಂತೆ. ಆದರೆ ಪೆಟ್ಟಿಗೆಯನ್ನು ತೆರೆದರೆ ಅದರಲ್ಲಿ ಯಾವ ಅವಶೇಷವೂ ದೊರಕಲಿಲ್ಲ.

ಬುದ್ಧನ ಶಿಷ್ಯರಾದ ತಪುಸ ಮತ್ತು ಭಲ್ಲಿಕ ಬುದ್ಧನ ಎಂಟು ಕೂದಲುಗಳನ್ನು ಹೊಂದಿದ್ದು ಅವನ್ನು ಅವರ ಊರಾದ ಭಲ್ಕ್‌ಗೆ ತಂದು ಊರದ್ವಾರದಲ್ಲಿಯೇ ಬಂಗಾರದ ಹೊದಿಕೆ ಹೊದಿಸಿದ ಸ್ತೂಪವೊಂದನ್ನು ಮಾಡಿದರಂತೆ.

ಅಮೆರಿಕೆಯ ಪೂರ್ವ ಲಾಸ್ ಏಂಜೆಲ್ಸ್ ಕ್ಯಾಲಿಫೋರ್ನಿಯಾದ 'ಲು' ಬೆಟ್ಟದ ದೇವಾಲಯದಲ್ಲಿ ಗೌತಮ ಬುದ್ಧನಿಗೆ ಸೇರಿರುವಂತಹ ಎರಡು ಹಲ್ಲುಗಳು ಮತ್ತು ಒಂದು ಕೂದಲು ಇದೆ ಎಂದು ಘೋಷಿಸಿಕೊಳ್ಳುತ್ತಾ ಈ ಅವಶೇಷಗಳು ವಿಯೆಟ್ನಾಂನ ವಿಹಾರಗಳಿಂದ

ಕೂದಲುಗಳ ಬಗ್ಗೆ ಬರೆಯುತ್ತಾರೆ. ಅದರ ಪ್ರಕಾರ ಬುದ್ಧ ರಾಜಗೃಹದ ವೇಣುವನದಲ್ಲಿ ತನ್ನ ಶಿಷ್ಯರಿಗೆ ಆರು ಕೂದಲುಗಳನ್ನು ಕೊಟ್ಟನಂತೆ. ಬುದ್ಧನನ್ನೇ ನೋಡದಂತಹ ಆರು ದೇಶಗಳಿಗೆ ಒಂದೊಂದು ಕೂದಲನ್ನು ಕಳುಹಿಸಿಕೊಡಲಾಯಿತಂತೆ.

ಬರ್ಮೀಯರು ಮತ್ತು ಶ್ರೀಲಂಕಾದ ಐತಿಹ್ಯಗಳು ಹೇಳುವಂತೆ ತ್ರಪುಸ ಮತ್ತು ಭಲ್ಲಿಕ ಬುದ್ಧನ ಕೂದಲಿನ ಯಾವುದೋ ಒಂದು ಅವಶೇಷವನ್ನು ಕಳೆದುಕೊಂಡರಂತೆ. ಅದು ನಾಗರ ದೊರೆಯಾದ ಜಯಸೇನನಿಗೆ ದೊರಕಿ ಅದನ್ನು ಪೂಜಿಸಲು ಅದನ್ನು ತನ್ನ ಸಮುದ್ರದ ಕೆಳಗಿರುವ ಅರಮನೆಗೆ ಒಯ್ದನಂತೆ.

ಬುದ್ಧನ ಕೇಶ, ಮೂಳೆ, ಹಲ್ಲುಗಳಷ್ಟೇ ಅಲ್ಲದೇ, ಅಲ್ಲಿ ಬಟ್ಟೆ ತೊಳೆದ, ಇಲ್ಲಿ ಕೂತ, ಅಲ್ಲಿ ನಿಂತ, ಇನ್ನೆಲ್ಲೋ ಮಲಗಿದಂತಹ ವಿಷಯಗಳನ್ನು ಐತಿಹ್ಯಗಳೆಂದಷ್ಟೇ ಪರಿಗಣಿಸುವುದೋ ಅಥವಾ ಐತಿಹಾಸಿಕವಾಗಿ ಸಮ್ಮತಿಸುವುದೋ ಎಂದು ಗೊಂದಲಗಳಾಗುವ ಅಗತ್ಯವೇನಿಲ್ಲ, ಅವುಗಳನ್ನೆಲ್ಲಾ ಕೂಲಂಕಶವಾಗಿ ಮುಂದೆ ಕಾರಣ ಮತ್ತು ಪರಿಣಾಮಗಳನ್ನು ಪರಿಶೀಲಿಸುವ.


ಬುದ್ಧನ ಕೇಶ ಪುರಾಣಗಳನ್ನಾಗಲಿ, ದಂತಕಥೆಗಳನ್ನಾಗಲಿ ಹರಡಿದವರೂ ಇದೇ ಮಣ್ಣಿನ ಜನರು. ಇಲ್ಲಿ ಸೀತೆ ಸ್ನಾನ ಮಾಡಿದಳು, ಇಲ್ಲಿ ಲವಕುಶರನ್ನು ಹಡೆದಳು, ಲಕ್ಷ್ಮಣ ಬಾಣ ಬಿಟ್ಟು ನೀರು ತೆಗೆದ, ಪಾಂಡವರು ಇಲ್ಲಿ ತಂಗಿದ್ದರು, ಅಲ್ಲಿ ಊಟ ಮಾಡಿದ್ದರು, ರಾಮ ಇಲ್ಲಿ ವಿಶ್ರಮಿಸಿದ ಎಂದೆಲ್ಲಾ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕಥೆಕಟ್ಟಿದವರೇ. ತಮ್ಮ ಕ್ಷೇತ್ರಕ್ಕೆ ಮಹತ್ವವನ್ನು ಕಟ್ಟಿಕೊಡಲು, ಮಹಾತ್ಮೆಯನ್ನು ಹೆಚ್ಚಿಸಲು, ಇತರರನ್ನು ತಮ್ಮ ಜಾಗಕ್ಕೆ ಆಕರ್ಷಿಸಲು ಮಾಡಿರುವಂತಹ ಸಾಹಸಗಳೇ ಇವಾಗಿವೆ. ತಮ್ಮ ಸ್ಥಳೀಯ ನಾಯಕರನ್ನು ಹೆಚ್ಚುಗಾರಿಕೆಯಿಂದ ಮೆರೆಸುವಷ್ಟೇ ಶ್ರದ್ಧೆಯಿಂದ ಜನಸಾಮಾನ್ಯರು ಸಾಮಾನ್ಯವಾಗಿ ತಾವು ಬದುಕಿ ಬಾಳುತ್ತಿರುವ ಕ್ಷೇತ್ರಗಳ ಬಗ್ಗೆಯೂ ಐತಿಹ್ಯಗಳನ್ನು ಹುಟ್ಟಿ ಹಾಕುತ್ತಾ ಹೋಗುತ್ತಾರೆ. ಆದರೆ ಅದು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ಅಥವಾ ಮನವರಿಕೆ ಮಾಡಿಕೊಡುವ

ಎಂದು ಹೇಳುತ್ತಾ 'ತಿಪ್ಪೆ ಮೇಲೆ ಕಸಿ ಮಡಗಿದ್ರೆ ಭಿನ್ನ ಭೇದವಿಲ್ಲದಂತೆ ಉರಿವಂತ ಪರಂಜ್ಯೋತಿ, ಸತ್ತವರ ಸಮಾಧಿ ಮ್ಯಾಲೆ ಕಸಿ ಮಡಗಿದ್ರೆ ಗುರುವೂ ಏಕವಾಗಿ ಉರಿವಂತ ಜಗಂಜ್ಯೋತಿ' ಆಗಿ ಕಾಣುವ ಮಂಟೇಸ್ವಾಮಿಯನ್ನು ನಮ್ಮ ಜನಪದರ ಪ್ರೀತಿ ಧರೆಗೆ ದೊಡ್ಡವನನ್ನಾಗಿ ಮಾಡಿ ನಿಲ್ಲಿಸುತ್ತದೆ.

'ಮಾಯ್ಕಾರ ಗಂಡ ಮಾದೇಶ್ವರ, ಬೂದಿ ಮುಚ್ಚಿದ ಕೆಂಡ' ಎಂದು ಮಲೆಯ ಮಾದೇಶ್ವರನನ್ನು ಕರೆದು 'ಭೂಲೋಕಲ್ಲಿ ಉದ್ದಂಡ' ಎಂದು ಅವನ ಕರೆಯುತ್ತಾ ಕೊಂಡಾಡುತ್ತಾ ಪ್ರೀತಿಸುತ್ತಾರೆ.

ಆದರೆ ಕೃಷ್ಣನಂತೆ ತುಂಟಾಟಗಳನ್ನು ಮಾಡುವ, ರಾಮನಂತೆ ಗಂಭೀರವಾಗಿ ಕ್ಷಾತ್ರ ತೇಜಸ್ಸನ್ನು ತೋರುವ, ಸ್ವರ್ಗದಲ್ಲಿ ಬ್ರಹ್ಮ, ವಿಷ್ಣು ಶಿವರು ಆಗಾಗ ಒಂದಾಗಿ ಕುಳಿತುಕೊಂಡು ಚರ್ಚೆ ವಾದಗಳನ್ನು ಮಾಡಿಕೊಂಡು ನಮಗಿಂತ ದೊಡ್ಡೋರನ್ನ ಭೂಮಿಯಲ್ಲಿ ಅವತಾರ ಎಬ್ಬಿಸಬೇಕು ಅಂತ ಒಬ್ಬರನ್ನ ಭೂಮಿಯ ಮೇಲೆ ಕಳಿಸುವಂತೆ ಬುದ್ಧನನ್ನು ಜನಪದರು ಕಳಿಸುವುದನ್ನು ನೋಡುವುದಿಲ್ಲ. ಮಾದೇಶ್ವರ ಮತ್ತು ಮಂಟೇಸ್ವಾಮಿಯಂತಹ ಆಧ್ಯಾತ್ಮಿಕ ನಾಯಕರನ್ನು ಉತ್ತರದೇಶದಿಂದ ಕರೆಸಿಕೊಳ್ಳುವರು. ದೇವಾನುದೇವತೆಗಳು ಮನೆ ಮಾಡ್ಕೊಂಡಿರುವುದು ಎಂದರೆ ಹಿಮಾಲಯನ್ ಅಪಾರ್ಟ್‌ಮೆಂಟಲ್ಲಿ ಎಂದು ನಂಬಿರುವ ಜನರು ಅದೇ ಹಿಮಾಲಯದ ಸಾಲಿನ ಮನೆಗಳಲ್ಲೇ ಐತಿಹಾಸಿಕವಾಗಿಯೇ ಹುಟ್ಟಿರುವ ಬುದ್ಧನನ್ನು ಯಾವುದೇ ಕನ್ನಡ ಜನಪದ ಸಾಹಿತ್ಯಗಳಲ್ಲಿ ಕಂಡುಕೊಟ್ಟಿಲ್ಲ (ನನ್ನ ಅಧ್ಯಯನದ ಮಿತಿಯಲ್ಲಿ). ಸಂಸ್ಕೃತ ಪುರಾಣಗಳಲ್ಲಿ ಬುದ್ಧನ ಕುರುಹುಗಳು ನೇರವಾಗಿಯೇ ಇವೆ. ಇನ್ನು ಕನ್ನಡ ಪುರಾಣಗಳಲ್ಲೂ ಸೂಚ್ಯವಾಗಿ ಎಂದೂ ಬಲ್ಲವರು ತಿಳಿಸುತ್ತಾರೆ. ವೈದಿಕ ಪುರಾಣಿಕರು ಯಾವ ಸಂಸ್ಕೃತ ಪುರಾಣಗಳಲ್ಲಿ ದಾನವರ ದಲಯದಲ್ಲಿ ಬುದ್ಧ ಹುಟ್ಟಿಸುವರೋ ಅದೇ ದಾನವರೆಂದು ಬಿಂಬಿತರಾಗುವ ದಕ್ಷಿಣದ ಕಪ್ಪುಜನರ ಜನಪದಗಳಲ್ಲಿ ಬುದ್ಧನೇಕೆ ಕಂಡುಬಂದಿಲ್ಲ ಎಂಬ ಕುತೂಹಲ ನನಗಿದೆ. ನೋಡೋಣ ಮುಂದೆ. ■

ಕಲಬುರ್ಗಿ ಹತ್ಯೆ: ಇದ್ದಕ್ಕಿದ್ದಂತೆ ಮಹಾರಾಷ್ಟ್ರದ ಪೊಲೀಸರು ಜಾಗೃತಗೊಂಡಿದ್ದು ಯ



ಮಹಾರಾಷ್ಟ್ರದ ವಿಚಾರವಾದಿ ಪಾನ್ಸರೆಯವರ ಹತ್ಯೆಯಲ್ಲಿ ಹೊಸ ಸಂಗತಿಗಳು ಹೊರಬರುತ್ತಿವೆ. ಆ ದಿನ ಗುಂಡು ತಾಕಿದ ತಕ್ಷಣ ಪಾನ್ಸರೆ ಸಾಯಲಿಲ್ಲ. ಮಾರಣಾಂತಿಕ ಗಾಯವಾಗಿದ್ದ ಅವರನ್ನು ಹಾಗೂ ಅವರ ಪತ್ನಿಯನ್ನು ತಕ್ಷಣ ಕೊಲ್ಹಾಪುರದಲ್ಲಿಯ ಪ್ರಸಿದ್ಧ ಹೈಟೆಕ್ ಆಸ್ಪತ್ರೆಗೆ ಸಾಗಿಸಲಾಯಿತು. ಅವರಿಗೆ ಮರುದಿನ ಮಧ್ಯಾಹ್ನದ ಹೊತ್ತಿಗೆ ಪ್ರಜ್ಞೆ ಬಂದಿತ್ತು. ಸ್ವತಃ ಅಲ್ಲಿಯ ಸರ್ಜನ್ನರು ಪಾನ್ಸರೆಯವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ ಹಾಗೂ ತಮ್ಮ ಸೊಸೆಯನ್ನು ಗುರುತು ಹಿಡಿದರು ಎಂಬ ಹೇಳಿಕೆ ಕೊಟ್ಟಿದ್ದರು. ಆದರೆ ಅದೇ ದಿನ ಸಂಜೆ ಆ ಆಸ್ಪತ್ರೆಗೆ ಎಬಿವಿಪಿ ನೇತಾರರು ಕಾರಣವಿಲ್ಲದೇ ಬಂದಿದ್ದರಂತೆ. ಅವರ ಮೂಲಕ ಹತ್ಯೆಯ ರೂವಾರಿಗಳಿಗೆ ಪಾನ್ಸರೆ ಅಪಾಯದಿಂದ ಪಾರಾಗಿರುವುದು ಗೊತ್ತಾಗಿರಬಹುದೇನೋ? ಆದರೆ ಮರುದಿನ ಬೆಳಿಗ್ಗೆಯೇ ಪಾನ್ಸರೆಯವರನ್ನು ತಕ್ಷಣ ಮುಂಬೈಗೆ ಸಾಗಿಸಲು ಕೊಲ್ಹಾಪುರದ ಜಿಲ್ಲಾಧಿಕಾರಿ ಏಕಾಏಕಿ ವ್ಯವಸ್ಥೆ ಮಾಡಿದರಂತೆ. ಅಲ್ಲಿಯ ಸರ್ಜನ್ ಮತ್ತು ಪಾನ್ಸರೆಯ ಸೊಸೆಯ ಪ್ರತಿಭಟನೆಗೂ ಜಿಲ್ಲಾಧಿಕಾರಿ ಕೇರ್ ಮಾಡಲಿಲ್ಲ. ಮೇಲಿನವರ ಆದೇಶ ಪಾಲಿಸುವುದು ನಮ್ಮ ಕರ್ತವ್ಯ ಎಂದಷ್ಟೇ ಹೇಳಿದರಂತೆ. ಈ ಮೇಲಿನ ಆದೇಶ ಮುಂಬೈಯ ಮುಖ್ಯಮಂತ್ರಿಗಳ ಕಚೇರಿಯಿಂದ ಬಂದಿತ್ತೇ ಎಂದು ಅವರು ಬಿಡಿಸಿ ಹೇಳಲಿಲ್ಲ. ಮುಂಬೈಯ ಬ್ರೀಚ್‌ಕ್ಯಾಂಡಿ ಆಸ್ಪತ್ರೆಗೆ ಸೇರಿಸಿದ ದಿನವೇ ಪಾನ್ಸರೆಯವರ ಸುಧಾರಿಸುತ್ತಿದ್ದ ಆರೋಗ್ಯ ಕೆಟ್ಟು ಮಾರನೆಯ ದಿನವೇ ಅವರು ಮರಣ ಹೊಂದಿದರು.


ಇಲ್ಲಿ ಉತ್ತರಕ್ಕಾಗಿ ಕಾದಿರುವ ಜನರ ಪ್ರಶ್ನೆಗಳೆಂದರೆ: ಪಾನ್ಸರೆ ಅಪಾಯದಿಂದ ಹೊರಬಂದು ಅವರ ಆರೋಗ್ಯ ಸುಧಾರಿಸುತ್ತಿದ್ದರೂ ಅವರನ್ನು ಕುಟುಂಬದವರ ಅನುಮತಿಯಿಲ್ಲದೇ ಕೊಲ್ಹಾಪುರದಿಂದ ದೂರದ ಮುಂಬೈಗೆ ಸಾಗಿಸಲು ಆದೇಶ ಕೊಟ್ಟವರಾರು? ಮುಂಬಯಿಯ ಬ್ರೀಚ್‌ಕ್ಯಾಂಡಿಯಷ್ಟೇ ಉತ್ತಮ ಆಸ್ಪತ್ರೆ ಕೊಲ್ಹಾಪುರದಲ್ಲೂ ಇರುವಾಗ ಮುಂಬೈಗೆ ಅವರನ್ನು ಕೊಂಡೊಯ್ಯುವ ಅಪಾಯ ತೆಗೆದುಕೊಳ್ಳುವ ಅಗತ್ಯವೇನಿತ್ತು? ಎಬಿವಿಪಿ ಯವರು ಕಮ್ಯೂನಿಸ್ಟ್ ಪ್ಯಾನ್ಸರೆಯ ಬದ್ಧ ವೈರಿಗಳಾಗಿದ್ದರೂ ಅವರು ಯಾಕೆ ಪಾನ್ಸರೆಯಿದ್ದ ಆಸ್ಪತ್ರೆಗೆ ಬಂದಿದ್ದರು? ಎಬಿವಿಪಿ ಬಂದುಹೋದ ಸ್ವಲ್ಪ ಹೊತ್ತಿಗೇ ಮುಂಬೈಯಿಂದ ಯಾರ ಆದೇಶ ಕೊಲ್ಹಾಪುರ ಜಿಲ್ಲಾಧಿಕಾರಿಗೆ ಬಂದದ್ದು? ಪಾನ್ಸರೆ ಕುಟುಂಬದ ಪ್ರತಿಭಟನೆಗೂ ಮಣಿಯದೇ ಮತ್ತು ಸ್ಥಳೀಯ ಸರ್ಜನ್ನರ ಸಲಹೆಗೂ ಕೇರ್ ಮಾಡದೇ ಪಾನ್ಸರೆಯನ್ನು ತರಾತುರಿಯಲ್ಲಿ ಮುಂಬೈಗೆ ಸಾಗಿಸುವ ಆದೇಶ ಕೊಟ್ಟದ್ದು ಯಾರು? ಗುಂಡಿಕ್ಕುವ ಮೊದಲು ಪಾನ್ಸರೆಯವರು ಹಂತಕರನ್ನು ನೋಡಿ ಗುರುತಿಸಿದ್ದರು ಎಂಬ ಕಾರಣಕ್ಕಾಗಿ ಅವರು ಬಾಯಿಬಿಡಬಾರದೆಂಬ ಉದ್ದೇಶದಿಂದ ಅವರನ್ನು ಮುಂಬೈಗೆ ಸಾಗಿಸಿ ಅಲ್ಲಿಯ ಆಸ್ಪತ್ರೆಯಲ್ಲಿ ಸಾಯಿಸಲಾಯಿತೇ?

ಕಲಬುರ್ಗಿ ಹತ್ಯೆಯಲ್ಲಿ ಕರ್ನಾಟಕದ ಬೆಳಗಾವಿ ಗಡಿಯಲ್ಲಿಯ ಕೆಲವರ ಮೇಲೆ ಕರ್ನಾಟಕದ ಪೊಲೀಸರ ಸಂಶಯ ಇದೆಯೆಂದು ಬಹಿರಂಗವಾದ ಕೂಡಲೇ ಮಹಾರಾಷ್ಟ್ರ ಪೊಲೀಸರು ಏಳು ತಿಂಗಳನಂತರ ಒಮ್ಮೆಲೇ ಜಾಗೃತರಾಗಿ ಕರ್ನಾಟಕದ ಸಮೀರ್ ಗಾಯಕ್ವಾಡನನ್ನು ಹಿಡಿದಿದ್ದು ಯಾಕೆ? ಹಾವೇರಿಯಲ್ಲಿ ನೆಲೆ ನಿಂತಿರುವ ವಿಎಚ್‌ಪಿ ನೇತಾರನಾಗಿರುವ ಮಲೆಯಾಳಿ ಸ್ವಾಮಿಯೊಬ್ಬನ ಕಾರ್ ಚಾಲಕ ಮಂಗಳೂರು ಮೂಲದ ವೀರೇಶ್ ಅಡಪ ಎಂಬವನನ್ನು ಕರ್ನಾಟಕ ಪೊಲೀಸರು ಹಿಡಿದು ವಿಚಾರಣೆಗೆ ಒಳಪಡಿಸಿದಾಗ, ಕರ್ನಾಟಕ ಗಡಿಯ ಅರಣ್ಯದಲ್ಲಿ ಮಹಾರಾಷ್ಟ್ರದ ಕೆಲವು ಬಲಪಂಥೀಯ ಸಂಘಟನೆಗಳು ತಮ್ಮ ಸದಸ್ಯರಿಗೆ ಮಿಲಿಟರಿಯಂತಹ ಟ್ರೇನಿಂಗ್ ಕೊಡುತ್ತಿದ್ದಾರೆ ಎಂದು ಆ ಕಾರ್ ಚಾಲಕ ಕರ್ನಾಟಕ ಪೊಲೀಸರಿಗೆ ಬಹಿರಂಗಪಡಿಸಿದ್ದು ಹಾಗೂ ಸನಾತನ ಸಂಸ್ಥೆಯ ಕಾರ್ಯ ಚಟುವಟಿಕೆಗಳೂ ಅದೇ ಬೆಳಗಾವಿ ಗಡಿಪ್ರದೇಶದಲ್ಲಿರುವುದು ಗೊತ್ತಾಗುತ್ತಲೇ ಇನ್ನು ತಮ್ಮ ಬಂಡವಾಳ ಬಯಲಾಗುತ್ತದೆ ಎಂದು ಮಹಾರಾಷ್ಟ್ರ ಪೊಲೀಸರು ಹೆದರಿ ಸಮೀರ್ ಗಾಯಕ್ವಾಡನನ್ನು ಬಂಧಿಸಿದ್ದೇ? ಹಾಗಾದರೆ ಮಹಾರಾಷ್ಟ್ರ ಪೊಲೀಸರಿಗೆ ಹಾಗೂ ಅಲ್ಲಿಯ ಬಿಜೆಪಿ ಸರಕಾರಕ್ಕೆ ಪಾನ್ಸರೆ ಹತ್ಯೆ ಯಾರು ಮಾಡಿದ್ದು ಎಂಬ ಖಚಿತ ಮಾಹಿತಿ ಆರೇಳು ತಿಂಗಳ ಹಿಂದೆಯೇ ಸಿಕ್ಕಿತ್ತು ಎಂಬ ಆರೋಪ ಸರಿಯೇ? ಕರ್ನಾಟಕದ ನಡುಮಧ್ಯದ ಹಾವೇರಿಗೆ ದೂರದ ಕೇರಳದಿಂದ ಕೇವಲ ಎರಡೇ ವರ್ಷದ ಹಿಂದೆ ಬರಿಗೈಯಲ್ಲಿ ಬಂದು ಈಗ ಹೈಟೆಕ್ ಆಶ್ರಮ ಸ್ಥಾಪಿಸಿರುವ ಮಲೆಯಾಳಿ ಪ್ರಣವಾನಂದಸ್ವಾಮಿಯ ವಿಎಚ್‌ಪಿ ಹಿನ್ನೆಲೆ ಹಾಗೂ ಹಣದ ಮೂಲ ಏನು? ಈತ ಎಲ್ಲಿಗೆ ಹೋಗುವಾಗಲೂ ನಾಲ್ಕು ಬೌನ್ಸರ್‌ಗಳೊಂದಿಗೆ ಹೋಗುವುದು ಯಾಕೆ? ಅವನ ಬಂಟ ವೀರೇಶ್ ಅಡಪ ಯಾರು? ಹೀಗೆ ಅನೇಕ ಪ್ರಶ್ನೆಗಳು ಡಾ. ಕಲಬುರ್ಗಿ ಹಾಗೂ ಪಾನ್ಸರೆಯವರ ಹತ್ಯೆಯ ಬಗ್ಗೆ ಜನಸಾಮಾನ್ಯರ ಮನದಲ್ಲಿ ಕಾಡುತ್ತಿವೆ. ಈಗ ಕಲಬುರ್ಗಿ, ಪಾನ್ಸರೆ ಮತ್ತು ದಾಬೋಲ್ಕರ್ ಈ ಮೂರೂ ಹತ್ಯೆ ಒಂದೇ ಗುಂಪಿನಿಂದ ಆದದ್ದು ಎಂಬ ಕೊಂಡಿ ಪತ್ತೆಯಾಗಿದೆ. ಆದರೂ ಮಹಾರಾಷ್ಟ್ರ ಪೊಲೀಸರು ಅಲ್ಲಿಯ ಬಿಜೆಪಿ ನೇತಾರರ ಕೈಗೊಂಬೆಯಾಗಿರುವುದರಿಂದ ಸತ್ಯ ಹೊರಬರುತ್ತದೆಯೇ ಎಂದು ಕಾದು ನೋಡಬೇಕು.

- ಜೆ. ರವಿಕಿರಣ, ಮೈಸೂರು

ಡಿಜಿಟಲ್ ಇಂಡಿಯಾ ಅಲ್ಲ, ಡರ್ಟಿ ಇಂಡಿಯಾ!

ಡಿಜಿಟಲ್ ಇಂಡಿಯಾ, ಡಿಜಿಟಲ್ ಇಂಡಿಯಾ, ಡಿಜಿಟಲ್ ಇಂಡಿಯಾ! ಯಾರ ಬಾಯಲ್ಲಿ ಕೇಳಿದರೂ ಇದೆ ಶಬ್ದ. ನನ್ನ ಪ್ರಕಾರ ಈ ದೇಶ ನಿಜಕ್ಕೂ ಡಿಜಿಟಲ್ ಇಂಡಿಯಾ ಯಾವಾಗ ಆಗೋದು ಅಂದ್ರೆ ... ಈ ದೇಶದಲ್ಲಿ ಮಧ್ಯರಾತ್ರಿಯೂ ಮಹಿಳೆಯರು ಅತ್ಯಾಚಾರಿಗಳ



ಭಯವಿಲ್ಲದೆ ಓಡಾಡಬೇಕು, ಮರ್ಯಾದ ಹತ್ಯೆಗಳು ನಿಲ್ಲಬೇಕು, ಅಂತರ್ಜಾತಿ ವಿವಾಹ ಅಂದ್ರೆ ಹುಬ್ಬೇರಿಸಿ ನೋಡುವುದು ನಿಲ್ಲಬೇಕು. ಮಂಗಳ ಮುಖಿಯರು 'ಸಾಮಾಜಿಕ ಕಳಂಕ'(Social Stigma) ದಿಂದ ಊರು ಬಿಟ್ಟು ಪಟ್ಟಣ ಸೇರದೆ ನಮ್ಮಂತೆ ಮನೆಯಲ್ಲೆ ಇದ್ದು ನಮ್ಮಂತೆ ಶಾಲೆ ಕಾಲೇಜು ಓದಿ, ನಮ್ಮಂತೆಯೇ ಸಾಮಾಜಿಕ ಸ್ಥಾನಮಾನ (social status) ದಿಂದ ಬದುಕಬೇಕು. ಮತದಾರ ದುಡ್ಡು ಪಡೆಯದೆ ಓಟಾಕಬೇಕು. ಸಾಫ್ಟ್‌ವೇರ್ ಇಂಜಿನಿಯರ್ ಅಂದ್ರೆ ಹೇಗೆ ಡಿಮ್ಯಾಂಡೊ ಅದೇತರ 'ನಾನೊಬ್ಬ ರೈತ' ಅಂದವನಿಗೂ ಫುಲ್ ಕಾಂಪಿಟೇಷನ್ ಬರಬೇಕು ಆತನನ್ನ ಮದುವೆ ಆಗೋಕೆ... ಇನ್ನೂ ತುಂಬಾ ಇವೆ. ಸಾಕಿಷ್ಟು ....

ಹಾ ...ಕೊನೆದು ಒಂದಿದೆ... ಮೊನ್ನೆ ರಾಜ್ಯ ಫುಲ್ ಬಂದ್ ಆಗಿತ್ತು, ಆಗಾಗ ದೇಶ-ರಾಜ್ಯ ಬಂದಾಗ್ತಾ ಇರ್ತವೆ ಬಿಡಿ. ಆವತ್ತು ಯಾರೂ ಕೆಲಸಕ್ಕೆ ಹೋಗಲ್ಲ, ಆದ್ರೆ ಈ ಸಫಾಯಿ ಕರ್ಮಚಾರಿಗಳು ಮತ್ತು ಮಲ ಹೊರುವ ಬಂಗಿಗಳು ರಜೆ ಮಾಡ್ತಾರೋ ಇಲ್ಲೊ ನಂಗೊತ್ತಿಲ್ಲ, ನಿಮ್ಗೇನಾದ್ರು ಗೊತ್ತಾ? ..ಒಂದುವೇಳೆ ಅವರು ಕೂಡ ಮುಷ್ಕರ-ಸ್ಟ್ರೈಕು ಅಂತ ಒಂದೆ ಒಂದು ದಿನ ಕೆಲಸಕ್ಕೆ ಹೋಗದೆ ಬಂದ್ ಮಾಡಿದ್ರೆ ಆದ್ರೆ ಇದು ಡಿಜಿಟಲ್ ಇಂಡಿಯಾ ಅಲ್ಲ ಡರ್ಟಿ ಇಂಡಿಯಾ ಆಗುತ್ತೆ. ಡಿಜಿಟಲ್ ಇಂಡಿಯಾ ಮಾಡೋಕೆ ತುಂಬಾ ವರ್ಷ ಬೇಕು ಆದ್ರೆ ಡರ್ಟಿ ಇಂಡಿಯಾ ಆಗಲು ಒಂದೇ ದಿನ ಸಾಕು.

- ಪ್ರಶಾಂತ್ ದಾನಪ್ಪ, ಮಸ್ಕಿ, ರಾಯಚೂರು

ಗಂಡುದೇವರ ಮುಖಗಳೂ ಹೆಣ್ಣಿನಂತಿವೆಯಲ್ಲಾ...

ನಮ್ಮಲ್ಲಿ ವೇದಿಕೆಯಲ್ಲಿ 'ಒಂದೂವರೆ ಕೈಯಲ್ಲಿ' ದೀಪ ಬೆಳಗುವ ಪದ್ಧತಿ ಸುರುವಾಗಿದ್ದು ಯಾವಾಗಿನಿಂದ ಎಂಬ ಪ್ರಶ್ನೆ ಕೆಲವು ಪ್ರಗತಿಪರ ಚಿಂತಕರು ಎತ್ತಿರುವುದು ಸರಿ. ವೇದಿಕೆಗಳಲ್ಲಿ ದೀಪ ಬೆಳಗದೇ, ಅಂದಿನ ಕಾರ್ಯಕ್ರಮದ ಔಚಿತ್ಯಕ್ಕೆ ಸರಿಯಾಗಿ ಬೇರೆ ಹಲವು ವಿಧಾನಗಳಲ್ಲಿ ಶುಭಾರಂಭಕ್ಕೆ ಚಾಲನೆ ನೀಡುವ ಬಗ್ಗೆ ಸೃಷ್ಟಿಶೀಲ ಮನಸ್ಸುಗಳು ಈಗ ಚಿಂತಿಸಬೇಕು ಎಂದು ಪ್ರಜ್ಞಾವಂತರೊಬ್ಬರು ಕೊಟ್ಟಿರುವ ಸಲಹೆ ಉಚಿತವಾಗಿದೆ. ದೀಪ ಬೆಳಗಿಸಿ ಶುಭಾರಂಭ ಮಾಡುವುದು ಸಮಸ್ತ ಭಾರತ ದೇಶದ ಸಂಸ್ಕೃತಿಯೇ ಅಥವಾ ಅದು ಕೇವಲ ಹಿಂದೂ ಧರ್ಮದ ಸಂಪ್ರದಾಯ ಮಾತ್ರವಾಗಿದೆಯೇ ಎಂಬ ಬಗ್ಗೆ ಜಿಜ್ಞಾಸೆ ಆಗಬೇಕಿದೆ. ನಾವು ಅನುಸರಿಸುತ್ತಿರುವ ಎಷ್ಟೋ ಸಂಪ್ರದಾಯಗಳ ಮೂಲ ಎಲ್ಲಿದೆ ಎಂದು ನಮ್ಮ ಹಿರಿಯರಿಗೂ ಗೊತ್ತಿರುವುದಿಲ್ಲವಾದುದರಿಂದ ಅವುಗಳ ತರ್ಕಪೂರ್ಣ ಸಮರ್ಥನೆ ಯಾರಿಂದಲೂ ಸಾಧ್ಯವಾಗುವುದೇ ಇಲ್ಲ. ಹಿಂದೊಮ್ಮೆ ಯಾರೋ ಒಬ್ಬ ದೊಡ್ಡ (ದಡ್ಡ) ವ್ಯಕ್ತಿ ಮಾಡಿದನು ಎಂದು ನಂತರದವರು ಅದನ್ನು ಕುರುಡಾಗಿ ಅನುಸರಿಸುತ್ತಾ ಹೋದರು. ನಂತರ ಅದುವೇ ಸಂಪ್ರದಾಯವಾಗಿಬಿಟ್ಟ ಪ್ರಸಂಗಗಳೇ ಹೆಚ್ಚು. ಇದಕ್ಕೆ ಕಾರಣ ಸಂಪ್ರದಾಯಗಳ ಮೂಲವನ್ನು ಕೆದಕುವ ಕೌತುಕ ಮತ್ತು ತರ್ಕಪೂರ್ಣವಾಗಿ ಪ್ರಶ್ನಿಸಿ ವಿಶ್ಲೇಷಿಸುವ ಮನೋಭಾವ ನಮ್ಮ ಸಮಾಜದಲ್ಲಿ ಇಲ್ಲವಾಗುತ್ತಿರುವುದು.

ಉದಾಹರಣೆಗೆ ಭಾರತ ಮಾತೆ ಹಾಗೂ ಕರ್ನಾಟಕ ಮಾತೆ ಇವರನ್ನು ಹಿಂದೂ ಧರ್ಮದ ದೇವಿಯಂತೇ ತೋರಿಸಲಾಗುತ್ತಿದೆ. ಜಾತ್ಯತೀತ ಭಾರತದಲ್ಲಿ ಇದು ಸರಿಯೇ? ಮೇಲಾಗಿ ಕೆಲವು ಕಡೆ ಕಿರೀಟಧಾರಿ ಭಾರತ ಮಾತೆಯೂ ಎಡಗೈಯಲ್ಲಿ ಭಾರತ ದೇಶದ ಪತಾಕೆ ಹಿಡಿದಿರುವ ಬದಲು ದುರ್ಗಾ ದೇವಿಯಂತೆ ತ್ರಿಶೂಲ ಹಿಡಿದಿರುವ ರೀತಿ ಚಿತ್ರಿಸಲಾಗುತ್ತದೆ. ಅಂದರೆ ಭಾರತ ಮಾತೆ ಶಾಂತಿಪ್ರಿಯಳಲ್ಲ ಅವಳು ಯಾವಾಗಲೂ ಆಯುಧ ಹಿಡಿದಿರುವ ಯುದ್ಧಪ್ರಿಯೆ ಎಂದಂತಾಯಿತು ತಾನೇ?

ಹಿಂದೂ ಹೆಣ್ಣು ದೇವರುಗಳೆಲ್ಲಾ ಕಚ್ಚೆ ಹಾಕಿ ಮರಾಠಿ ಪದ್ಧತಿಯಲ್ಲಿ (ನೌ ವಾರಿ ಅರ್ಥಾತ್ ಒಂಬತ್ತು ಗಜ) ಸೀರೆ ಉಡುವುದನ್ನು ಮತ್ತು ಮೂಗಿಗಿಂತ ಉದ್ದದ ಮೂಗುತಿ ಧರಿಸುವುದನ್ನು ಯಾರು ಮೊದಲು ಕಲ್ಪನೆ ಮಾಡಿದ್ದು? ಹೆಂಗಸರು ಕಚ್ಚೆ ಹಾಕಿ ಒಂಬತ್ತು ಗಜ ಸೀರೆ ಉಡುವುದು ಹಾಗೂ ದೊಡ್ಡ ಮೂಗುತಿ ಧರಿಸುವ ಪದ್ಧತಿ ಈಗ ಕೇವಲ ಮಹಾರಾಷ್ಟ್ರ ಮತ್ತು ಗೋವಾದ ಹಿಂದೂಗಳಲ್ಲಿ ಮಾತ್ರ ಇರುವುದು. ಆದರೆ ಅಲ್ಲಿಯೂ ಪುರಾಣಕಾಲದಲ್ಲಿ ಈ ರೀತಿ ಒಂಬತ್ತು ಗಜ ಕಚ್ಚೆ-ಸೀರೆ ಇರಲಿಲ್ಲ. ಭಾರತದ ಯಾವುದೇ ಪ್ರದೇಶದಲ್ಲೂ ಹೆಂಗಸರು ಪುರಾಣಕಾಲದಲ್ಲೂ ಈ ರೀತಿ ಕಚ್ಚೆ ಸೀರೆ ಉಡುತ್ತಿರಲಿಲ್ಲ. ಸೊಂಟದಿಂದ ಮೊಳಕಾಲಿನವರೆಗೆ ಉದ್ದನೆಯ ಅಡ್ಡ ಬಟ್ಟೆ ಕಟ್ಟಿಕೊಂಡು ಮಹಿಳೆಯರು ದೇಹ ರಕ್ಷಿಸಿಕೊಳ್ಳುತ್ತಿದ್ದರು. ಜತೆಗೆ ಬಟ್ಟೆ ಕತ್ತರಿಸಿ ರವಕೆ (ಬ್ಲೌಸ್) ಹೊಲಿಯುವ ಕಲೆ ಸಹ ಪುರಾತನ ಭಾರತದಲ್ಲಿ ಇರಲಿಲ್ಲ ಎಂದು ಹಳೆ ದೇವಸ್ಥಾನದ ಮೂರ್ತಿಗಳನ್ನು ಮತ್ತು ಭಿತ್ತಿ ಚಿತ್ರಗಳನ್ನು ನೋಡಿದರೆ ತಿಳಿಯುತ್ತದೆ. ರವಿಕೆಯ ಬದಲು ಆಗೆಲ್ಲಾ ಉದ್ದನೆಯ ಬಟ್ಟೆ ಅಡ್ಡ ಸುತ್ತಿಕೊಂಡು ದೇಹದ ಮೇಲ್ಭಾಗವನ್ನು ಹೆಂಗಸರು ಮುಚ್ಚಿಕೊಳ್ಳುತ್ತಿದ್ದರು. ರವಿಕೆ ಹೊಲಿಯುವ ಕಲೆ ಯವನರ ಮೂಲಕ ಭಾರತಕ್ಕೆ ಬಂದಿದ್ದಂತೆ. ಭಾರತದೆಲ್ಲೆಡೆ ಪುರಾತನ ದೇವಸ್ಥಾನಗಳಲ್ಲಿಯ ಹೆಣ್ಣಿನ ಮೂರ್ತಿಗಳನ್ನು ಅಥವಾ ಅಜಂತಾ-ಬಾದಾಮಿ ಗುಹೆಯಲ್ಲಿಯ ಭಿತ್ತಿಚಿತ್ರಗಳನ್ನು ನೋಡಿದರೆ ಈ ರೀತಿ ಸೀರೆ ಉಡುವ ಪದ್ಧತಿ ಮಹಾರಾಷ್ಟ್ರ ಸಹಿತ ಎಲ್ಲಿಯೂ ಪುರಾತನಕಾಲದಲ್ಲಿ ಇರಲೇ ಇಲ್ಲ



ಎಂದು ಸ್ಪಷ್ಟವಾಗುತ್ತದೆ. ಹಾಗಾದರೆ ದೇವಿಗ... ಪೇಂಟಿಂಗ್ ಮೂಲತಃ ಸುರುವಾಗಿದ್ದು ಎ... ಕೆದಕಿದಾಗ ಗೊತ್ತಾಗಿದ್ದು ಇದರ ಜನಕ ಕೇರ... ಚಿತ್ರಕಾರ ರಾಜಾ ರವಿವರ್ಮ (18... ಎಂಬುದಾಗಿ.

ಕೇರಳೀಯ ಅರಸುಪುತ್ರನಾದ ರವಿ... ಕುಟುಂಬದ ಯುವತಿಯನ್ನೇ ಮದುವೆಯ... ಮೇಲೆ ಕೇರಳದ ತನ್ನ ಅರಮನೆ ತೊರೆದ... ಹೋಗಿ ಅಲ್ಲಿ ಜೆ.ಜೆ.ಸ್ಕೂಲ್ ಆಫ್ ಆರ್ಟ್... ಕಲಿತು ದೊಡ್ಡ ಚಿತ್ರಕಾರನಾಗಿ ಮುಂಬೈಯ... ನಿಂತನು. ಆಗ ಅವನಿಗೆ ಮುಂಬೈಯಲ್ಲಿ ನೆಲ... ಮೂಲದ ಒಂದು ಸಾರಸ್ವತ ಹೆಣ್ಣಿನೊಂದಿಗ... ಅವಳನ್ನೇ ತನ್ನ ಎಲ್ಲಾ ಚಿತ್ರಗಳಲ್ಲಿ ಮ... ಬಳಸುತ್ತಿದ್ದನು. ಆದರೆ ಅವಳು ಬೆ... ತೀರಿಹೋದಳು. ಅವಳ ವಿರಹದಿಂದ ಮನೊ... ರವಿವರ್ಮ ತನ್ನ ಎಲ್ಲಾ ಪೇಂಟಿಂಗಿನಲ್ಲಿ ಅ... ಚಹರೆಯ ಪಡಿಯಚ್ಚಿನದೇ ಮುಖ ಹಾ... ಉಡುತ್ತಿದ್ದ ಸಾರಸ್ವತ/ಮರಾಠಿ ಶೈಲಿಯ ... ಮೂಗುತಿಯನ್ನೇ ಚಿತ್ರಿಸಲಾರಂಭಿಸಿದನೆಂದು ... ಹಾಗಾದರೆ ರವಿವರ್ಮನನ್ನೇ ಅನುಕರಿಸಿ ಚಿ... ಹಾಕಿರುವ ಭಾರತಮಾತೆ ಮತ್ತು ಕನಾ... ಮರಾಠಿಗಳೇ ಅಥವಾ ಸಾರಸ್ವತಳೇ ಅಥ... ಮುಖದ ದುಂಡು ಕಣ್ಣಿನ ಮಲೆಯಾಳಿ ... ರವಿವರ್ಮ ಮೈಸೂರಿನ ಅರಸರ ಆಶ್ರಯ... ಇದ್ದಾಗ ರಚಿಸಿದ ಅದ್ಭುತ ಕಲಾಕೃತಿಗಳ ಮ... ಮೈಸೂರಿನ ಜಗಮೋಹನ್ ಪ್ಯಾಲೆ... ಗ್ಯಾಲರಿಯಲ್ಲಿ ಈಗಲೂ ಪ್ರದರ್ಶನಕ್ಕಿವೆ.

ಇನ್ನು ಎಲ್ಲಾ ಗಂಡು ದೇವರ ಮುಖವೇ... ಎಂಬ ಪ್ರಶ್ನೆಗೂ ಉತ್ತರ ರಾಜಾ ರವಿವರ್ಮ... ರವಿವರ್ಮನ ಪ್ರೇಯಸಿ/ರೂಪದರ್ಶಿ ತೀರಿಕೆ... ಅವನು ಮಾನಸಿಕ ರೋಗಕ್ಕೆ ತುತ್ತಾದನು... ಜೀವನೋಪಾಯಕ್ಕಾಗಿ ಅವನು ಹಿಂದೂ ಪುರಾ... ಚಿತ್ರ ಬಿಡಿಸಿ ಮುಂಬೈಯ ಆರ್ಟ್ ಗ್ಯಾಲರಿ... ಕೆಲಸವನ್ನು ಬಿಡಲಿಲ್ಲ. ಆದರೆ ಅವನು ತನ್ನ ... ಮರೆಯಲಾಗದೇ ತಾನು ರಚಿಸಿದ ಗಂಡು ... ಎಲ್ಲಾ ಚಿತ್ರಗಳಲ್ಲೂ ವ್ಯಕ್ತಿಗಳ ಮುಖವನ್ನು ... ಚಹರೆಯಂತೆಯೇ ಬಿಡಿಸಲಾರಂಭಿಸಿದ್ದಂತೆ. ಹಿ... ಮನೋವ್ಯಾಧಿಯಿಂದ ಹುಟ್ಟು ಹಾಕಿರುವ ... ಹೆಣ್ಣು- ಗಂಡು ದೇವರ ಮುಖಚಹರೆ ಚಿತ್ರಿಸ... ಈವರೆಗೂ ಮುಂದುವರೆದಿರುವುದು. ಹೀಗಿದ... ಗಂಡು ದೇವರ ಹೆಣ್ಣು ಚಹರೆಯ ಹಿಂದೆ ... ಚಿತ್ರಕಾರನೊಬ್ಬನ ಅಮರ ಪ್ರೇಮದ ಕಥೆ.

ರವಿವರ್ಮನ ಮರಣಾನಂತರವೂ ... ಶಿವಕಾಶಿ ಚಿತ್ರಕಾರರು ರವಿವರ್ಮನನ್ನೇ ಅ... ಗಂಡು-ಹೆಣ್ಣು ದೇವರುಗಳ ಮುಖ ಒ... ಹೆಣ್ಣಿನಂತೆಯೇ ಬಿಡಿಸಲಾರಂಭಿಸಿರಬೇಕ... ಭಾರತದೆಲ್ಲೆಡೆ ದೇವರ ಮತ್ತು ಪುರಾಣ... ಬಣ್ಣಬಣ್ಣದ ಫೋಟೋಗಳನ್ನು ಹಾಗೂ ಕ್ಯಾ... ಹೆಚ್ಚಾಗಿ ಪೂರೈಸುವವರು ತಮಿಳುನಾಡಿನ... ಪ್ರಿಂಟಿಂಗ್ ಪ್ರೆಸ್ಸುಗಳೇ. ಅದಕ್ಕಾಗಿ ಭಾ... ರಾಜ್ಯಗಳಲ್ಲಿ ದೇವರ ಚಿತ್ರಗಳಲ್ಲಿ ಮುಖ... ಬಟ್ಟೆ ಉಡುವ ಶೈಲಿ ಒಂದೇ ತೆರನಾಗಿ ...

ನಮ್ಮ ಸರಕಾರಿ ಶಾಲಾ ಶಿಕ್ಷಕಿಯರು ಆಧು... ತೊಡದೇ ಕೇವಲ ಸೀರೆ ಉಟ್ಟು ತರಗತಿ...

ವಿ.ಸೂ. : ನಿಮ್ಮ ಅನಿಸಿಕೆಗಳನ್ನು
lankesh70@rediffmail.c...
ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸು...
ಪ್ರತಿಕ್ರಿಯೆಗಳನ್ನು 9980331427 ...
ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕ...

...ವು ಕಡ್ಡಾಯ ಮಾಡಬೇಕೆಂಬ ಬೇಡಿಕೆ ಹಿಂದೂ
...ವಾದಿಗಳಿಂದ ಹುಟ್ಟಿದೆ. ಹಾಗಾದರೆ ಹಿಂದೂ
...ಗಳಂತೆ ಒಂಬತ್ತು ಗಜ ಕಚ್ಚೆ ಸೀರೆಯನ್ನೇ
... ಕಡ್ಡಾಯ ಮಾಡಬೇಕೆಂಬ ಬೇಡಿಕೆ ಸಂಸ್ಕೃತಿ
...ಬಂದರೆ ಶಿಕ್ಷಕಿಯರ ಪರಿಸ್ಥಿತಿ ಊಹಿಸಿ! ಹೀಗೆ
...ವುದನ್ನು ನಮ್ಮ ಶಿಕ್ಷಕಿಯರಿಗೆ ಕಲಿಸಲು ಮರಾಠಿ
... ಶಾಲೆಯಲ್ಲೂ ನೇಮಿಸಬೇಕಾಗ ಬಹುದು.

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

... ಬೇರೆ ಶ್ರೀಕ್ಷೇತ್ರ ಬೇರೆ ...ಬ ಸರಳ ತತ್ವ ಗೊತ್ತಿಲ್ಲವೇ

...ಗೆ ಕರಾವಳಿಯ ಎಲ್ಲ ಕಾವಿ-ಕುಲಬಾಂಧವರು ...ಲ್ಲಿ ಜಮಾಯಿಸಿ ಜನಜಾಗೃತಿ ಎಂಬ ಭಾರಿ ...ಸಿ ಧರ್ಮಸ್ಥಳ ಕ್ಷೇತ್ರದ ಆಡಳಿತದಾರರು ...ನೆಲೆಯಲ್ಲಿ ಮಾಡಿರಬಹುದಾದ ತಪ್ಪುಗಳನ್ನು ...ವಾ ಟ್ರಸ್ಟಿನವರು ಪುರಾವೆ ಸಹಿತ ಎತ್ತಿ ...ವುದನ್ನು ಖಂಡಿಸಿ ಅದು ಶ್ರೀಕ್ಷೇತ್ರಕ್ಕೆ ಮತ್ತು ... ದೇವರಿಗೆ ಮಾಡಿರುವ ನೇರ ಅವಮಾನ ...ದು ಬೊಬ್ಬೆಯಿಟ್ಟರು. ಜತೆಗೆ ಕ್ಷೇತ್ರಪಾಲ ...ಮುರ್ಲಿ ಹಾಗೂ ಅಲ್ಲಿಯ ಜೈನರ ಧರ್ಮ ...ಲ್ಲಾ ಅವಮಾನ ಆಗಿದೆ ಎಂದು ಹುಯಿಲೆಬ್ಬಿಸಿ ...ಲ ದೇವಳದ ಆಡಳಿತದವರ ಭೂಹಗರಣ ... ಲೀಲಾವತಿ ಬಗ್ಗೆ ಆರೋಪ ಮಾಡಿರುವ ...ವಾ ಟ್ರಸ್ಟಿನವರು ನಿಜವಾಗಿ ಅಲ್ಲಿಯ ದೇವರ ...ವ-ದೇವತೆಗಳ ಬಗ್ಗೆ ಒಂದೇ ಒಂದು ಅಪ-ಶಬ್ಧ ...ೂ ಅವರೆಲ್ಲಾ ದೇವರಿಗೆ ಹಾಗೂ ಶ್ರೀಕ್ಷೇತ್ರಕ್ಕೇ ... ಮಾಡಿದ್ದಾರೆ ಎಂಬ ಪುಕಾರು ಸ್ಥಾಪಿತ ... ಹಬ್ಬಿಸಿದ್ದು ಯಾಕೆ? ದೇವರಿಗೇಕೆ ಬೇಕು ...ಅಥವಾ ಬಡ್ಡಿ ಹಣ? ಈ ರೀತಿ ವ್ಯಕ್ತಿಗಳ ...ಡಿದ ಆಪಾದನೆಯನ್ನು ದೇವರು ಹಾಗೂ ...ತ್ತ ತಿರುಗಿಸಿ ಮುಗ್ಧ ಭಾವುಕ ಜನರ ಹಾದಿ ...ವು ರಕ್ಷಣೆ ಪಡೆಯುವ ಹುನ್ನಾರು ...ವುದು ಸ್ಪಷ್ಟ.

... ವರ್ಷಗಳ ಹಿಂದೆ ನಡೆದ ಉಜಿರೆಯ ಸೌಜನ್ಯ ...ಮತ್ತು ಕೊಲೆ ಕೇಸಿನಲ್ಲಿ ಸಹ ಒಬ್ಬ ಸಾಧಾರಣ ...ಲೆ ಜನರು ಕೊಲೆ ಆರೋಪ ಹೊರಿಸಿದ್ದರೂ ...ದ ಹೆಸರು ಹಾಳು ಮಾಡುವ ಷಡ್ಯಂತ್ರ ... ಎಂಬ ಪೊಳ್ಳು ಕೂಗೆದ್ದಿತ್ತು. ದೇವಸ್ಥಾನದ ...ರ ದೂರದ ಸಂಬಂಧಿಯೊಬ್ಬನ ಮೇಲೆ ... ಆರೋಪ ಹೊರಿಸಿದರೆ ಮಂಜುನಾಥ ದೇವರ ...ಕ್ಷೇತ್ರದ ಹೆಸರು ಹಾಳಾಗಲು ಹೇಗೆ ಸಾಧ್ಯ? ...ದು ಇರುತ್ತಾನೆ ನಾಳೆ ಸಾಯುತ್ತಾನೆ. ಆದರೆ ...ಶ್ವತವಾಗಿರುತ್ತದೆ. ಹಾಗಾಗಿ ಒಬ್ಬ ವ್ಯಕ್ತಿ ಮಾಡಿದ ...ಲ್ಲೂ ದೂರದ ಸಂಬಂಧಿಯೊಬ್ಬ ಮಾಡಿದ ...ಕ್ಷೇತ್ರಕ್ಕೆ ಎಂದೂ ಅಂಟಿಕೊಳ್ಳುವುದಿಲ್ಲ. ...ಸೇ ಹೇಳಿಲ್ಲವೇ 'ಜಂಗಮ ಬೇರೆ ಸ್ಥಾವರ ...ಮ. ಅದರಂತೆ 'ವ್ಯಕ್ತಿ ಬೇರೆ ಶ್ರೀಕ್ಷೇತ್ರ ಬೇರೆ' ...ತ ಸರಳ ತತ್ವವನ್ನು ಉದ್ದೇಶಪೂರ್ವಕವಾಗಿ ...ಪಟ್ಟಭದ್ರರು ಈಗ ತಮ್ಮನ್ನು ರಕ್ಷಿಸಿಕೊಳ್ಳಲು ...ವರನ್ನು ಗುರಾಣಿಯಂತೆ ಬಳಸುತ್ತಿದ್ದಾರೆ.


...ಶ್ವರ ಭಾರತಿ ಸ್ವಾಮಿಗಳ ಮೇಲೆ ಅತ್ಯಾಚಾರದ ...ಂದಾಗಲೂ ಮಠದ ಭಕ್ತರು ರಾಮಚಂದ್ರಾಪುರ ...ಊ ಶ್ರೀಕ್ಷೇತ್ರದ ಹೆಸರು ಹಾಳು ಮಾಡುವ ... ಎಂದು ಬೊಬ್ಬೆ ಹೊಡೆದಿದ್ದರು. ಮಾನವ ... ಮಠದ ಸ್ವಾಮಿಯೊಬ್ಬನ ಮೇಲೆ ಏನಾದರೂ ...ಮಾಡಿದರೆ ಅದರಿಂದ ಶ್ರೀಕ್ಷೇತ್ರ ಅಪವಿತ್ರವಾ...ವ ತರ್ಕವಿಹೀನ ವಾದ ಮಾಡುತ್ತಿರುವವರ ...ದ್ದೇಶವೇನೆಂದರೆ ಶ್ರೀಕ್ಷೇತ್ರದ ಭಾವುಕ ಭಕ್ತರನ್ನು ...ಅವರನ್ನು ಗುರಾಣಿಯಂತೆ ಬಳಸಿ ಸ್ವಾಮೀಜಿಯ ...ಅಪರಾಧವನ್ನು ಮುಚ್ಚಿಹಾಕುವುದು. ಹಾಗಾಗಿ ...ಕಾರರು ತಾವು ವೈಯಕ್ತಿಕವಾಗಿ ಮಾಡಿರುವ ... ಪರಿಣಾಮದಿಂದ ತಮ್ಮನ್ನು ರಕ್ಷಿಸಿಕೊಳ್ಳಲು ...ವನ್ನು ಹಾಗೂ ಮುಗ್ಧ ಭಕ್ತರ ಭಾವನೆಗಳನ್ನು ...ತೆ ಬಳಸುತ್ತಿರುವ ಪ್ರಸಂಗಗಳನ್ನು ಪ್ರಜ್ಞಾವಂತರು ...ರಿಗೆ ಮನದಟ್ಟು ಮಾಡಿ ಕೊಡಬೇಕಿದೆ.

...ಸ್ಥಳದ ಧರ್ಮದರ್ಶಿಗೆ ಸಭೆಯಲ್ಲಿ ಖಾವಂದ್ ...ಬೋಧಿಸಲಾಗುತ್ತದೆ. ಖಾವಂದ್ ಎಂಬ ಶಬ್ಧ ... ಮೂಲದಲ್ಲ, ಅದು ಪರ್ಶಿಯನ್ ಶಬ್ದ ...ವರು ಮುಸ್ಲಿಂ ರಾಜರ ಬಗ್ಗೆ ಮಾತ್ರ ಹಿಂದಿನ ...ಉಪಯೋಗಿಸುತ್ತಿದ್ದರು. ಹಿಂದೂ ಅರಸರನ್ನು ... ಅರಸರ ಬಗ್ಗೆಯೂ ಈ ಖಾವಂದ್ ಶಬ್ದ ...ಲ್ಲ. ಖಾವಂದ್ ಎಂದರೆ ಒಡೆಯ ಮಾಲೀಕ ...ದು ಅರ್ಥ. ಹಾಗಿರುವಾಗ ಈ ಮ್ಲೇಚ್ಛರ ... ಶಬ್ದವನ್ನು ಒಂದು ಹಿಂದೂ ದೇವಸ್ಥಾನದ ...ರ್ಮಿಗೆ ಬಳಸುವುದು ವರ್ಜ್ಯವಲ್ಲವೇ? ...ಲ್ಲ ಖಾವಂದ್ ಎಂದರೆ ಹಿಂದಿನ ಸ್ತ್ರೋತ್ರ ಅಥವಾ ... ಎಂದು ಅರ್ಥ. ಕನ್ನಡಿಗರಿಗೆ ಈ ಅರ್ಥ ... ಎಷ್ಟು ಹಾಸ್ಯಾಸ್ಪದವಾಗುವುದಿಲ್ಲವೇ?

- ರಾಮಕೃಷ್ಣ ಎ.ಕೆ. ಮಂಗಳೂರು

ಓದಿನ ಜತೆಗೆ ಸಿನಿಮಾದಲ್ಲೂ ನಟಿಸುತ್ತೇನೆ: ಅನೂಪ್ ಸಾ.ರಾ.ಗೋವಿಂದ್

ನಿರ್ಮಾಪಕ ಸಾ.ರಾ. ಗೋವಿಂದು ಅವರ ಪುತ್ರ ಅನೂಪ್ 'ಡವ್' ಚಿತ್ರದ ಮೂಲಕ ಸಿನಿಮಾರಂಗಕ್ಕೆ ಕಾಲಿಟ್ಟಿದ್ದಾರೆ. ಇವರ ನಟನೆಯ ಚೊಚ್ಚಲು ಸಿನಿಮಾ ಈ ವಾರ ರಾಜ್ಯಾದ್ಯಂತ ಬಿಡುಗಡೆ ಆಗುತ್ತಿದೆ.



ನಿರ್ಮಾಪಕರ ಮಕ್ಕಳು ಚಿತ್ರೋದ್ಯಮಕ್ಕೆ ಬರುವುದು ಹೊಸದೇನೂ ಅಲ್ಲ. ಆದರೆ, ನಿರ್ಮಾಪಕ ಸಾ.ರಾ. ಗೋವಿಂದು ಅವರ ಪುತ್ರ ಅನೂಪ್ ಬೇರೆಯವರ ಬ್ಯಾನರ್ ಮೂಲಕ ಸಿನಿಮಾರಂಗಕ್ಕೆ ಪರಿಚಯ ಆಗುತ್ತಿದ್ದಾರೆ. ಇವರ ನಟನೆಯ 'ಡವ್' ಸಿನಿಮಾ ಈ ವಾರ ರಾಜ್ಯಾದ್ಯಂತ ಬಿಡುಗಡೆ ಆಗುತ್ತಿದೆ.

** ನಿಮ್ಮ ತಂದೆ ಸಾ.ರಾ.ಗೋವಿಂದ್ ಕೂಡ ನಿರ್ಮಾಪಕರಾಗಿದ್ದವರು. ಆದರೆ ನೀವು ಬಿ.ಕೆ.ಶ್ರೀನಿವಾಸ್ ನಿರ್ಮಾಣದ ಚಿತ್ರದ ಮೂಲಕ ಸಿನಿಮಾ ರಂಗಕ್ಕೆ ಬರುತ್ತಿದ್ದೀರಿ. ಏನಿದರ ವಿಶೇಷ?*

ನಿರ್ದೇಶಕ ಸಂತು ನನ್ನ ತಂದೆಯವರ ಬಳಿ ಬಂದು ಕತೆ ಹೇಳಿದರು. ಅನೂಪ್‌ನೇ ನಾಯಕರಾದರೆ ಇನ್ನೂ ಚೆನ್ನಾಗಿರುತ್ತದೆ ಅಂದರು. ಇಷ್ಟು ಬೇಗ ನಾನು ಹೀರೋ ಆಗುವುದು ಅಪ್ಪನಿಗೆ ಇಷ್ಟವಿರಲಿಲ್ಲ. ನನಗೂ ಓದಬೇಕು ಅನಿಸಿತು. ಆದರೆ, ನಿರ್ದೇಶಕರ ಒತ್ತಾಯಕ್ಕೆ ನಾನು ನಾಯಕನಾದೆ. ಅಲ್ಲದೇ ನನ್ನ ಕನಸೂ ಸಿನಿಮಾ ರಂಗಕ್ಕೆ ಬರುವುದೇ ಆಗಿರುವುದರಿಂದ ಎಲ್ಲವೂ ಕೂಡಿಬಂತು.

** ಎರಡು ವರ್ಷದ ಹಿಂದೆ ಶುರುವಾದ ಈ ಸಿನಿಮಾ, ಇಷ್ಟು ಲೇಟ್ ಆಗಿದ್ದು ಯಾಕೆ?*

ಆ ಬಗ್ಗೆ ನನಗೇನೂ ಗೊತ್ತಿಲ್ಲ. ಅಲ್ಲದೇ ಶೂಟಿಂಗ್ ಸಮಯದಲ್ಲಿ ನಾನು ಕಾಲೇಜ್‌ಗೆ ಕೂಡ ಹೋಗುತ್ತಿದ್ದೆ. ನಿರ್ದೇಶಕರು ಯಾವಾಗ ಶೂಟಿಂಗ್‌ಗೆ ಕರೆಯುತ್ತಿದ್ದರೋ ಹೋಗುತ್ತಿದ್ದೆ. ಇಷ್ಟು ಬಿಟ್ಟು ನನಗೇನೂ ಗೊತ್ತಿಲ್ಲ. ಈ ಸಿನಿಮಾ ರಿಲೀಸ್ ಆಗಲ್ಲ ಎನ್ನುವ ಮಾತೂ ಈ ಸಮಯದಲ್ಲಿ ಕೇಳಿಬಂತು. ಆದರೆ ಸಿನಿಮಾ ರಿಲೀಸ್ ಆಗುತ್ತದೆ ಎಂಬ ನಂಬಿಕೆ ನನಗಿತ್ತು, ಅದೇ ನಿಜವಾಯಿತು.

** ನಿಮ್ಮ ಮನೆಯಲ್ಲಿ ಸಿನಿಮಾ ವಾತಾವರಣವಿದ್ದರೂ, ಚಿತ್ರರಂಗಕ್ಕೆ ಬರಬೇಕು ಅಂತ ಯಾವತ್ತೂ ಅನಿಸಿರಲಿಲ್ಲವಾ ನಿಮಗೆ?*

ಸಿನಿಮಾ ರಂಗಕ್ಕೆ ಬರಬೇಕು ಅಂತ ಅನಿಸಿತ್ತು, ಆದರೆ, ಸದ್ಯ ಬೇಡವೆಂದುಕೊಂಡು ಸುಮ್ಮನಿದ್ದೆ. ಕ್ರಿಕೆಟ್ ಆಡಿಕೊಂಡು ಇದ್ದವನನ್ನು ನಿರ್ದೇಶಕ ಸಂತು ಕ್ಯಾಮೆರಾ ಮುಂದೆ ತಂದು ನಿಲ್ಲಿಸಿದರು. ಸಣ್ಣವನಿದ್ದಾಗ ಶೂಟಿಂಗ್ ನೋಡಲು ಹೋಗುತ್ತಿದ್ದೆ. ಅದು ಯಾವ ಕನಸನ್ನೂ ಕಾಣದ ವಯಸ್ಸಾಗಿದ್ದರಿಂದ ಏನೂ ಅನಿಸಿರಲಿಲ್ಲ.

** ಸಿನಿಮಾರಂಗಕ್ಕೆ ಬರಲು ಏನೆಲ್ಲ ತರಬೇತಿ ಪಡೆದಿದ್ದೀರಿ?*

ನಟನೆ ಅಂದರೆ ಸುಮ್ಮನೆ ಬರುವಂಥದ್ದು ಅಲ್ಲ ಅನ್ನುವುದು ನನಗೆ ಗೊತ್ತಿದೆ. ಪ್ರೇಕ್ಷಕರನ್ನು ಮೆಚ್ಚಿಸಲು ಏನೆಲ್ಲ ಕಸರತ್ತು ಮಾಡಬೇಕು ಎಂಬ ಅರಿವೂ ನನಗಿದೆ. ಅದಕ್ಕಾಗಿಯೇ ಮೊದಲು ಆತಂಕಗೊಂಡಿದ್ದೆ. ನಿರ್ದೇಶಕ ಸಂತು ಅವರು, ನನ್ನನ್ನು ತರಬೇತುಗೊಳಿಸುವ ಜವಾಬ್ದಾರಿ ತೆಗೆದುಕೊಂಡು ನಾಲ್ಕು ತಿಂಗಳು ಕಾಲ ಟ್ರೈನಿಂಗ್ ಕೊಟ್ಟರು. ಮಾಸ್ ಮಾದ ಅವರ ಜತೆ ಸ್ಟಂಟ್ ಕಲಿತೆ. ಕಲೈ ಮಾಸ್ಟರ್ ಡ್ಯಾನ್ಸ್ ಹೇಳಿಕೊಟ್ಟಿದ್ದಾರೆ. ಕಟ್ಟುಮಸ್ತಾದ ದೇಹ ಬೆಳವಣಿಗೆಗೆ ಜಿಮ್‌ಗೆ ಹೋಗಿದ್ದೇನೆ.

** 'ಡವ್' ಚಿತ್ರದಲ್ಲಿ ಯಾವ ರೀತಿಯ ಪಾತ್ರ ಪೋಷಿಸಿದ್ದೀರಿ?*

ಈಗ ನಾನು ಕಾಲೇಜು ಹುಡುಗ. ಸಿನಿಮಾದಲ್ಲೂ ಅಂಥದ್ದೆ ಪಾತ್ರ ಮಾಡಿದ್ದೇನೆ. ಹಾಗಾಗಿಯೇ ಪಾತ್ರ ನಿಭಾಯಿಸಲು ಧೈರ್ಯ ಬಂತು. ಸಿನಿಮಾದಲ್ಲಿ ನನ್ನದು ಮಧ್ಯಮ ವರ್ಗದ ಕುಟುಂಬದ ಹುಡುಗನ ಪಾತ್ರ. ಹುಡುಗರೊಂದಿಗೆ ಆಡಿಕೊಂಡು, ಅಪ್ಪ-ಅಮ್ಮನಿಗೆ ಗೊತ್ತಾಗದ ರೀತಿಯಲ್ಲಿ ಸಿಗರೇಟ್ ಹೊಡೆದುಕೊಂಡು ಬಿಂದಾಸ್ ಆಗಿ ಇರುವ ಪಾತ್ರ. ನನ್ನ ಬಾಳಲ್ಲಿ ಹುಡುಗಿಯೊಬ್ಬಳ ಪ್ರವೇಶ ಆಗುತ್ತದೆ. ಆಗ ನನ್ನ ಬದುಕು ಏನೆಲ್ಲ ಆಗುತ್ತದೆ ಎಂಬುದು ಕತೆ ಇಲ್ಲಿದೆ.

** 'ಡವ್' ನಂತರ ಮತ್ತಾವ ಚಿತ್ರವನ್ನು ಒಪ್ಪಿಕೊಳ್ಳಲಿಲ್ಲ ಯಾಕೆ?*

ಸಿನಿಮಾಗಿಂತ ನನಗೆ ಓದು ಮುಖ್ಯ. ಅಲ್ಲದೇ ನನಗೆ ಎಂ.ಬಿ.ಎ ಮಾಡುವ ಆಸೆ ಇದೆ. ಹೀಗಾಗಿ ಸಿಕ್ಕ ಸಿಕ್ಕ ಪ್ರಾಜೆಕ್ಟ್ ಮಾಡಲ್ಲ. ಸಿನಿಮಾ ಮಾಡಲೇಬೇಕು ಎಂಬ ಒತ್ತಾಯ ಬಂದರೆ ನೋಡೋಣ. ಆದರೆ, ನನ್ನ ಗುರಿ ಇರುವುದು ಓದಿನ ಕಡೆ.


** ನಿಮ್ಮ ತಂದೆಯ ಮಾರ್ಗದರ್ಶನ ಯಾವ ರೀತಿಯದ್ದು?*

ಅಪ್ಪ ಯಾವಾಗಲೂ ಹೇಳುತ್ತಾರೆ, ನಿರ್ಮಾಪಕರು ಉಳಿದರೆ ಚಿತ್ರೋದ್ಯಮ ಉಳಿಯುತ್ತೆ ಅಂತ. ನಾನು ನಿರ್ಮಾಪಕರ ಹೀರೋ ಆಗೋಕೆ ಇಷ್ಟ ಪಡುತ್ತೇನೆ. ದುಡ್ಡಿಗೆ ಆಸೆ ಪಡಲ್ಲ, ಅಪ್ಪನ ಯಾವ ಮಾತನ್ನೂ ತಿರಸ್ಕರಿಸಲ್ಲ, ಅವರ ಮಾರ್ಗದರ್ಶನದಲ್ಲಿಯೇ ಮುಂದುವರೆಯುವೆ. ನನಗಾಗಿ ಅವರು ಹಲವು ಕನಸುಗಳನ್ನು ಕಟ್ಟಿಕೊಂಡಿದ್ದಾರೆ. ಅದನ್ನು ನನಸು ಮಾಡುತ್ತೇನೆ.

** ನಿರ್ದೇಶಕರು ನಿಮ್ಮ ಬಳಿ ಬಂದು ನೀವೇ ಹೀರೋ ಅಂದಾಗ, ನಿಮ್ಮ ಪ್ರತಿಕ್ರಿಯೆ ಹೇಗಿತ್ತು?*

ನನಗೆ ನಂಬೋಕೆ ಆಗಲಿಲ್ಲ. ಹೀರೋ ಆಗುವ ವಯಸ್ಸು ನನ್ನದಲ್ಲ. ವಿಷಯ ಕೇಳಿದಾಕ್ಷಣ ಆತಂಕ ಶುರುವಾಯಿತು. ಅವರು ನನಗೆ ಧೈರ್ಯ ತುಂಬಿದರು. ನಿರ್ದೇಶಕರ ಮತ್ತು ನಿರ್ಮಾಪಕರ ಸಹಕಾರ ಇಲ್ಲದೇ ಇದ್ದರೆ, ನಾನು ಪಾತ್ರವನ್ನು ಮಾಡೋಕೆ ಆಗ್ತಾನೇ ಇರಲಿಲ್ಲ. ■

ಗೋಬೆಲ್ಸ್ ತಂತ್ರಗಳು - ಭಾಗ 2



ಕಳೆದ ವಾರ ಮೋದಿ ಸರ್ಕಾರ ಯಾವೆಲ್ಲ ವಿಧಾನಗಳ ಮೂಲಕ ಟಿವಿ ವಾಹಿನಿಗಳನ್ನು ತನ್ನ ಕಪಿಮುಷ್ಠಿಯೊಳಗೆ ಇರಿಸಿಕೊಳ್ಳುವ ಕಾರ್ಯವನ್ನು ಸ್ವಲ್ಪವೂ ಸದ್ದಿಲ್ಲದೆ ಮಾಡುತ್ತಿದೆ ಎಂಬುದನ್ನು ನಾವು ನೋಡಿದೆವು. ವಾಸ್ತವವಾಗಿ ಸರ್ಕಾರ ಕೇವಲ ಇಲೆಕ್ಟ್ರಾನಿಕ್ ಮಾಧ್ಯಮದ ಮೇಲಷ್ಟೆ ಅಲ್ಲ ಅದರ ಜೊತೆಗೆ ಸಾಮಾಜಿಕ ಮಾಧ್ಯಮ, ಮುದ್ರಣ ಮಾಧ್ಯಮ ಮುಂತಾದ ಮಿಕ್ಕ ಎಲ್ಲಾ ಕ್ಷೇತ್ರಗಳ ಮೇಲೂ ಸಂಪೂರ್ಣ ಹಿಡಿತ ಸಾಧಿಸುವ ಪ್ರಯತ್ನಗಳನ್ನು ಭರದಿಂದ ಸಾಗಿಸಿದೆ. ಭಾರತ ಸರ್ಕಾರದಲ್ಲಿ ಮಾಧ್ಯಮ ಮಾಹಿತಿ ಇಲಾಖೆ (ಪಿಐಬಿ) ಎನ್ನುವ ಒಂದು ಪ್ರತ್ಯೇಕ ಇಲಾಖೆ ಇದೆ. ಅದು ಮಾಧ್ಯಮ ಮತ್ತು ಸರಕಾರದ ನಡುವಿನ ಒಂದು ಸಂಪರ್ಕ ಸೇತುವೆಯಂತೆ ಕಾರ್ಯಾಚರಿಸುತ್ತದೆ. 2014ರ ಮೇ ತನಕ ಸರ್ಕಾರದ ಅಧಿಕೃತ ಕಾರ್ಯಕ್ರಮಗಳು, ಪತ್ರಿಕಾಗೋಷ್ಠಿಗಳು ಮುಂತಾದವುಗಳ ಕುರಿತ ಪ್ರಕಟಣೆಗಳನ್ನು ಪತ್ರಕರ್ತರಿಗೆ ಕಳುಹಿಸುವುದು, ನಂತರ ಆ ಕುರಿತ ವರದಿಗಳನ್ನು ಸರ್ಕಾರಕ್ಕೆ ಕಳುಹಿಸುವುದೆ ಅದರ ಮುಖ್ಯ ಕೆಲಸ ಆಗಿತ್ತು. ಆದರೆ ಮೋದಿ ಸರ್ಕಾರ ಅಧಿಕಾರಕ್ಕೆ ಬಂದಂದಿನಿಂದ ಪಿಐಬಿಯ ಕಾರ್ಯ ವಿಧಾನಗಳಲ್ಲಿ ಕೆಲವು ಮಹತ್ತರ ಬದಲಾವಣೆಗಳಾಗಿವೆ. ಪಿಐಬಿಯ ಅಂದಿನ ಆಂತರಿಕ ಪತ್ರಗಳಲ್ಲಿ ಎಂದೂ ಇರದಂತಹ "ವಿರೋಧಿಸುವ ಹೇಳಿಕೆ" ಎಂಬಿತ್ಯಾದಿ ಪದಪುಂಜಗಳ ಬಳಕೆ ಪ್ರಾರಂಭವಾಗಿದೆ.

ಇಂದು ಪಿಐಬಿಯ ಮಾಹಿತಿ ಸೇವಾ ವಿಭಾಗದಲ್ಲಿ ಹಲವಾರು ತಂಡಗಳನ್ನು ರಚಿಸಲಾಗಿದ್ದು ಒಂದೊಂದು ತಂಡಕ್ಕೆ ಒಂದೊಂದು ಕರ್ತವ್ಯವನ್ನು ವಹಿಸಲಾಗಿದೆ. ಸಾಮಾಜಿಕ ಮಾಧ್ಯಮಗಳಿಗಾಗಿ ಒಂದು ಪ್ರತ್ಯೇಕ ತಂಡವನ್ನು ನೇಮಿಸಲಾಗಿದೆ. ಅದರ ಕೆಲಸ ಸರಕಾರ ಇರಿಸುವ ಪ್ರತಿಯೊಂದು ಹೆಜ್ಜೆಗೆ ಸಾಮಾಜಿಕ ಮಾಧ್ಯಮಗಳಲ್ಲಿ ಬರುವ ಪ್ರತಿಯೊಂದು ಪ್ರತಿಕ್ರಿಯೆಯನ್ನು ಬಹಳ ಗಮನವಿಟ್ಟು ಓದುವುದು. ಮತ್ತೊಂದು ತಂಡ ಮುದ್ರಣ ಮಾಧ್ಯಮಗಳಲ್ಲಿ ಬರುವ ವರದಿಗಳ ಮೇಲೆ ಕಣ್ಗಾವಲಿರಿಸುವ ಕಾರ್ಯದಲ್ಲಿ ನಿರತವಾಗಿದೆ. ಮೂರನೆಯ ಎಂಎಂಸಿ ಎಂಬ ತಂಡವನ್ನು ಟಿವಿ ವಾಹಿನಿಗಳ ಮೇಲೆ ಕಣ್ಣಿರಿಸಲು ಬಳಸಲಾಗುತ್ತಿದ್ದು ಇದರ ಬಗ್ಗೆ ನಾವು ಈಗಾಗಲೆ ತಿಳಿದುಕೊಂಡಿದ್ದೇವೆ.

ಪಿಐಬಿ ಇದೀಗ ತಯಾರಿಸುತ್ತಿರುವ "ಕೈಗೊಂಡ ಕ್ರಮ" ಎಂಬ ತಲೆಬರಹದ ವರದಿಗಳನ್ನು ನೋಡಿದರೆ ಸಾಕು, ಅದರ ಬದಲಾದ ಕಾರ್ಯಶೈಲಿಯ ಅರಿವಾಗುತ್ತದೆ. 2000ನೆ ಇಸವಿಯಲ್ಲಿ ವಾಜಪೇಯಿ ನೇತೃತ್ವದ ಸರ್ಕಾರ ಮಾಹಿತಿ ಸೇವೆಯ ಅಧಿಕಾರಿಗಳಿಗಾಗಿ ಕಾರ್ಯಾಗಾರಗಳನ್ನು ಏರ್ಪಡಿಸಿ, ಅವರಿಗೆಲ್ಲ ಸುಟಿಯಾದ ಶೈಲಿಯಲ್ಲಿ ಪತ್ರಿಕಾ ಪ್ರಕಟಣೆಗಳನ್ನು ಬರೆಯುವ ಸೂಕ್ಷ್ಮತೆಗಳ ಬಗ್ಗೆ ತಿಳಿವಳಿಕೆ ಒದಗಿಸಿತ್ತು, ಆಗ ಸರ್ಕಾರದ ಅಧಿಕೃತ ಮಾಧ್ಯಮ ಸಲಹೆಗಾರ ಆಗಿದ್ದ ಸುಧೀಂದ್ರ ಕುಲಕರ್ಣಿ ಈ ನಿಟ್ಟಿನಲ್ಲಿ ಅನುಸರಿಸಬೇಕಿರುವ ಹಲವು ನಿರ್ದೇಶನಗಳನ್ನು ನೀಡಿದ್ದರು. ಹೀಗೆ ಪಿಐಬಿಯಲ್ಲಿ ಈಗಾಗಲೆ ತರಬೇತಾಗಿರುವ ಸಿಬ್ಬಂದಿಗಳಿರುವುದು ಮೋದಿ ಸರ್ಕಾರದ ಪಾಲಿಗೆ ಭಾರಿ ಪ್ರಯೋಜನಕಾರಿಯಾಗಿ ಪರಿಣಮಿಸಿದೆ. "ಕೈಗೊಂಡ ಕ್ರಮ"ದಲ್ಲಿ ವರದಿಗಳ ಸ್ವರೂಪ ಹೇಗಿರಬೇಕು ಎಂಬುದನ್ನು ಬಹಳ ಸ್ಪಷ್ಟವಾಗಿ ವಿವರಿಸಲಾಗಿದ್ದು ಅದು ಪವರ್‌ಪಾಯಿಂಟ್ ತಂತ್ರಜ್ಞಾನ ಬಳಸಿ ಪ್ರದರ್ಶಿಸಲಾಗುವ ನಿರೂಪಣೆಗಳ ಮಾದರಿಯಲ್ಲಿದೆ:

ಉದ್ದೇಶ

- ಸರಕಾರದ ಅಧಿಕೃತ ನಿಲುವನ್ನು ಅದರ ಸರಿಯಾದ ದೃಷ್ಟಿಕೋನದಲ್ಲಿರಿಸಿ ಅರ್ಥವಾಗುವ ರೀತಿಯಲ್ಲಿ ತಿಳಿಯಪಡಿಸುವುದು.
- ಮಾಧ್ಯಮಗಳಿಗೆ ಇರುವ ಅನುಮಾನಗಳನ್ನು ನಿವಾರಿಸುವುದು.
- ತಪ್ಪು ಮಾಹಿತಿಗಳ ಬಗ್ಗೆ ಗಮನ ಸೆಳೆಯುವುದು.

ಹೇಗೆ ?

- ವಿರೋಧಿಸುವ ಹೇಳಿಕೆ ಅಥವಾ ಪ್ರತ್ಯುತ್ತರ ಅಥವಾ ಸ್ಪಷ್ಟೀಕರಣ ಅಥವಾ ನಿರಾಕರಣೆ ಮೂಲಕ.

ಎಷ್ಟು ಸಮಯದೊಳಗೆ -

- ವರದಿಯ ಸ್ವರೂಪವನ್ನು ಹೊಂದಿಕೊಂಡು ತಕ್ಷಣ ಅಥವಾ 24 ಗಂಟೆಗಳ ಒಳಗಾಗಿ ಅಥವಾ ವಾರದೊಳಗಾಗಿ.

ಪಿಐಬಿಯ ಎಲ್ಲಾ ಪ್ರತಿಕ್ರಿಯೆಗಳನ್ನು ಸಚಿವಸಂಪುಟದ ಕಾರ್ಯದರ್ಶಿ ವಿಭಾಗದ ಜಂಟಿ ಕಾರ್ಯದರ್ಶಿಗಳು ಸಂಬಂಧಪಟ್ಟ ಸಚಿವಾಲಯಗಳಿಗೆ ನೀಡುವ ನಿರ್ದೇಶನ ಹಾಗೂ ಸಲಹೆಸೂಚನೆಗಳಿಗೆ ಅನುಸಾರವಾಗಿ ಸಿದ್ಧಪಡಿಸಲಾಗುತ್ತಿದೆ. "ಕೈಗೊಂಡ ಕ್ರಮ"ಗಳು ಮತ್ತು ಅವುಗಳ ಅನುಸರಣೆ ಬಗ್ಗೆ ವಾರದಲ್ಲಿ ಎರಡು ಬಾರಿ ಪರಿಶೀಲನಾ ಸಭೆಗಳನ್ನು ನಡೆಸಲಾಗುತ್ತಿದೆ.

ಹಿಂದೆ ಮಾಹಿತಿ ಮತ್ತು ಪ್ರಸಾರಾಂಗ ಖಾತೆಯ ಸಚಿವನಾಗಿದ್ದ ಪ್ರಕಾಶ್ ಜಾವಡೇಕರ್ (ಈಗಾತ ಪರಿಸರ ಇಲಾಖೆಯ ಸಚಿವ) ಸರ್ಕಾರದ ದೃಷ್ಟಿಯಲ್ಲಿ ತಪ್ಪೆಂದು ಅನಿಸುವ ವರದಿಗಳಿಗೆ ಆ ಕೂಡಲೆ ಪ್ರತಿಕ್ರಿಯೆ ನೀಡುವುದಕ್ಕೋಸ್ಕರ "ಶೀಘ್ರ ಪ್ರತಿಕ್ರಿಯೆ ತಂಡ"ವೊಂದನ್ನು ರಚಿಸಲು ಬಯಸಿದ್ದ, ಆ ನಿಟ್ಟಿನಲ್ಲಿ ಹಲವಾರು ಸಭೆಗಳು ನಡೆದ ಬಳಿಕ ಅಂತಹದೊಂದು ತಂಡವನ್ನು ಕಾರ್ಯರೂಪಕ್ಕೆ ತರಲಾಯಿತು. ಉದಾಹರಣೆಗೆ ಕೇಂದ್ರ ಸರ್ಕಾರದಲ್ಲಿ ಗುಜರಾತಿನ ಅಧಿಕಾರಿಗಳನ್ನು ಭರ್ತಿ ಮಾಡುತ್ತಿರುವ ಕುರಿತ ವರದಿಗಳು ಪ್ರಕಟವಾದ ತಕ್ಷಣ ಆ ವರದಿಗಳು ಸರಿಯಲ್ಲ ಎಂಬ ಪ್ರತಿಕ್ರಿಯೆಯ ಜೊತೆಗೆ ಎಷ್ಟು ಅಧಿಕಾರಿಗಳು ಗುಜರಾತಿನಿಂದ ಬಂದವರೆಂಬ ಲೆಕ್ಕಾಚಾರವನ್ನು ಮಾಧ್ಯಮಗಳಿಗೆ ಕಳುಹಿಸಲಾಯಿತು.

ಮಾಧ್ಯಮ ಮಾಹಿತಿ ಇಲಾಖೆ ಇಂದು ಮೋದಿ ಸರ್ಕಾರದ ಗುಪ್ತ ಅಜೆಂಡಾವನ್ನು ತನ್ನ ಕ್ಷೇತ್ರದಲ್ಲಿ ತನ್ನದೇ ಆದ ವಿಶಿಷ್ಟ ವಿಧಾನಗಳ ಮೂಲಕ ಜಾರಿಗೊಳಿಸಲು ಭಾರಿ ಹುರುಪಿನಿಂದ ಸಹಕರಿಸುತ್ತಿದೆ. ಇನ್ನೊಂದೆಡೆ ನಮೋಭಕ್ತರ ವಿಶೇಷ ತಂಡವೊಂದು ಸಾಮಾಜಿಕ ಮಾಧ್ಯಮಗಳಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. ಅಲ್ಲಿ ಹಿಂಬಾಲಕರು ಯಾವುದೇ ವಿಧದ ಸೆನ್ಸಾರ್ ಇರದ ತೀರ ಕೊಳಕು ಹಾಗೂ ಅಸಭ್ಯ ಭಾಷೆಯನ್ನು ಪ್ರಯೋಗಿಸಿ ನಾಯಕನ ನಡೆನುಡಿಯ ಸಮರ್ಥನೆ ಮಾಡುತ್ತಾರೆ. ಮುದ್ರಣ ಮಾಧ್ಯಮಗಳ ಹೊಗಳುಭಟರೂ ಎಣೆಯಿಲ್ಲದ ಉತ್ಪ್ರೇಕ್ಷೆಗಳು, ಭೋಪರಾಕುಗಳ ಮೂಲಕ ಮೋದಿ ಸರ್ಕಾರದ ಗುಪ್ತ ಕಾರ್ಯಸೂಚಿಯ ಜಾರಿಗೆ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಿದ್ದಾರೆ. ಉದಾಹರಣೆಗೆ "ಭರ್ಜರಿ ಬ್ಯಾಟಿಂಗ್", "ಜಿ-4 ಸಭೆಯಲ್ಲಿ ನಮೋ ಛಾಟಿ", "ಭಾರತದ ಡಿಜಿಟಲ್ ಕ್ರಾಂತಿಗೆ ಲಾಗಿನ್ ಆದ ಸಿಲಿಕಾನ್ ವ್ಯಾಲಿ", "ಮೋದಿ ಅವರ ರಾಕ್ ಸ್ಟಾರ್ ಟ್ರೈನಿಂಗ್......" ಇತ್ಯಾದಿ ಇತ್ಯಾದಿ. ಇವೆಲ್ಲವೂ ಮುಂದೊಂದು ದಿನ ದೇಶದ ಮೇಲೆರಗಬಹುದಾದ ಸರ್ವಾಧಿಕಾರಿ ವ್ಯವಸ್ಥೆಯೊಂದರ ಪೂರ್ವಭಾವಿ ಸಿಗ್ನಲ್‌ಗಳಂತಿಲ್ಲವೇ?

(ಆಧಾರ: 3.10.2015ರ 'ದ ಹಿಂದೂ' ನಲ್ಲಿ ಅನುರಾಧಾ ರಾಮನ್ ಲೇಖನ)

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 21-10-2015 RNI No. KAR



ಸಿಕ್ಸ್‌ಪ್ಯಾಕ್ ಪ್ರಾಬ್ಲಮ್

ಶಿವರಾಜ್‌ಕುಮಾರ್ ಆಸ್ಪತ್ರೆ ಸೇರಿದ ವಿಷಯ ಎಲ್ಲರಿಗೂ ಗೊತ್ತೇ ಇದೆ. ಅವರು ಆಸ್ಪತ್ರೆಗೆ ಸೇರಿದ್ದು ಯಾಕೆ ಎಂಬುದೇ ಅಚ್ಚರಿಯ ಸಂಗತಿ. ಐವತ್ತನೇ ವಯಸ್ಸು ದಾಟಿದ ನಂತರವೂ ಶಿವರಾಜ್ ಗಟ್ಟುಮುಟ್ಟಾಗಿದ್ದರು. ಇನ್ನಷ್ಟು ಯಂಗ್ ಆದರು. ಈ ಮಧ್ಯೆ ಅವರು 'ಭಜರಂಗಿ' ಎಂಬ ಸಿನಿಮಾದಲ್ಲಿ ನಟಿಸಲು ಸಿಕ್ಸ್‌ಪ್ಯಾಕ್ ಮಾಡಿದರು. ಅದಕ್ಕಾಗಿ ದಿನಕ್ಕೆ ನಾಲ್ಕು ತಾಸು ಜಿಮ್‌ನಲ್ಲೇ ಕಳೆದರು. ಇದೇ ಇವರನ್ನು ಆಸ್ಪತ್ರೆಗೆ ಸೇರಿದಂತೆ ಮಾಡಿದ್ದು.

ಸಿಕ್ಸ್‌ಪ್ಯಾಕ್ ಮಾಡುವುದು ಸಾಮಾನ್ಯ ಮಾತಲ್ಲ. ಅದಕ್ಕಾಗಿ ಸಾಕಷ್ಟು ಕಸರತ್ತು ಮಾಡಬೇಕು. ಬೆವರಿಳಿಸಬೇಕು. ದೇಹ ಹುರಿಗೊಳ್ಳಲು ಅದಕ್ಕೆ ತಕ್ಕ ಆಹಾರ ಸೇವಿಸಬೇಕು. ದೇಹವೂ ಅದಕ್ಕೆ ಸ್ಪಂದಿಸಬೇಕು. ಶಿವರಾಜ್‌ಕುಮಾರ್ ವಿಷಯದಲ್ಲಿ ಹಾಗಾಗಿಲ್ಲ. ಐವತ್ತು ದಾಟಿರುವ ಅವರ ದೇಹಕ್ಕೆ ಕಸರತ್ತು ಜಾಸ್ತಿ ಅನಿಸಿದೆ. ಹೀಗಾಗಿಯೇ ಬಲಭುಜದ ನೋವು ಕಾಣಿಸಿಕೊಂಡಿದೆ. ಆ ನೋವನ್ನೇ ಹೃದಯಾಘಾತ ಅಂದುಕೊಂಡು ಆಸ್ಪತ್ರೆಗೆ ಸೇರಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಸಿಕ್ಸ್‌ಪ್ಯಾಕ್ ಕ್ರೇಜ್ ಜಾಸ್ತಿ ಆಗುತ್ತಿದೆ. ದುನಿಯಾ ವಿಜಯ್, ಚಂದನ್, ಮದರಂಗಿ ಕೃಷ್ಣ ಸೇರಿದಂತೆ ಹಲವು ಹುಡುಗರು, ಇದರ ಹಿಂದೆ ಬಿದ್ದಿದ್ದಾರೆ. ಅಭಿಮಾನಿಗಳಿಗೆ ಥ್ರಿಲ್ ನೀಡಲು ನಾನಾರೀತಿಯ ಸರ್ಕಸ್ ಮಾಡುತ್ತಿದ್ದಾರೆ. ಇವರಿಗಿನ್ನೂ ವಯಸ್ಸಿದೆ. ಹಾಗಂತ ಆರೋಗ್ಯದ ಕಡೆಯೂ ಗಮನ ಕೊಡದೇ ಇದ್ದರೆ, ಮತ್ತೊಂದು ತೊಂದರೆ ಅನುಭವಿಸುವುದು ಗ್ಯಾರಂಟಿ ಅನ್ನುವ ಸತ್ಯ ಗೊತ್ತಿರಲಿ.

ಯಶ್ ಜತೆ ಮತ್ತೆ ರಾಧಿಕಾ

ರಾಧಿಕಾ ಪಂಡಿತ್‌ಗೂ ಯಶ್‌ಗೂ ಬಿಡದೇ ಇರುವ ನಂಟು ಎನ್ನುವಂತಾಗಿದೆ. 'ಮಿಸ್ಟರ್ ಅಂಡ್ ಮಿಸೆಸ್ ರಾಮಾಚಾರಿ'ಯ ಗೆಲುವಿನಲ್ಲೇ ತೇಲುತ್ತಿರುವ ಈ ಜೋಡಿಯು ಮತ್ತೊಂದು ಸಿನಿಮಾದಲ್ಲಿ ಕಾಣಿಸಿಕೊಳ್ಳಲು ರೆಡಿ ಆಗುತ್ತಿದೆ. ಈ ಸಿನಿಮಾವನ್ನು ಮಹೇಶ್ ನಿರ್ದೇಶನ ಮಾಡಲಿದ್ದಾರೆ.

ಸದ್ಯ ಯಶ್ 'ಮಾಸ್ಟರ್‌ಪೀಸ್' ಸಿನಿಮಾದಲ್ಲಿ ಬಿಜಿ ಆಗಿದ್ದಾರೆ. ರಾಧಿಕಾ 'ದೊಡ್ಮನೆ ಹುಡುಗ್ರು' ಶೂಟಿಂಗ್‌ನಲ್ಲಿ ಕಳೆದುಹೋಗಿದ್ದಾರೆ. ಈ ಎರಡೂ ಸಿನಿಮಾಗಳ ಶೂಟಿಂಗ್ ಅಂತಿಮ ಹಂತದಲ್ಲಿವೆ. ಹೀಗಾಗಿ ನವೆಂಬರ್‌ನಲ್ಲಿ ಈ ಜೋಡಿಯ ಹೊಸ ಚಿತ್ರಕ್ಕೆ ಮುಹೂರ್ತ ಎನ್ನಲಾಗುತ್ತಿದೆ.

ಈ ಮಧ್ಯೆ ರಾಧಿಕಾ ಮತ್ತೊಂದು ಚಿತ್ರಕ್ಕೆ ಸಹಿ ಮಾಡಿದ್ದಾರೆ ಎಂಬ ಸುದ್ದಿಯೂ ಇದೆ. ಉಪೇಂದ್ರ ನಟನೆಯ 'ಕಲ್ಪನಾ 2' ಚಿತ್ರಕ್ಕೆ ರಾಧಿಕಾ ನಾಯಕಿ ಅನ್ನುವ ಮಾತೂ ಕೇಳಿಬಂದಿದೆ. ಆದರೆ, ಈವರೆಗೂ ಅಧಿಕೃತವಾಗಿ ಯಾರೂ ಹೇಳಿಲ್ಲ. ಸಾಮಾಜಿಕ ಜಾಲತಾಣಗಳ ಮೂಲಕ ಅಭಿಮಾನಿಗಳಿಗೆ ಸುದ್ದಿ ನೀಡುವ ರಾಧಿಕಾ ಕೂಡ, ಹೊಸ ಸಿನಿಮಾಗಳ ಬಗ್ಗೆ ಹೇಳಿಕೊಂಡಿಲ್ಲ. ಹೀಗಾಗಿ ಎರಡೂ ಚಿತ್ರಗಳ ಬಗ್ಗೆ ಕುತೂಹಲ ಮೂಡಿದೆ. ಸದ್ಯದಲ್ಲೇ ಎರಡೂ ಸುದ್ದಿಗಳನ್ನು ಸ್ವತಃ ರಾಧಿಕಾ ಅಧಿಕೃತಪಡಿಸುತ್ತಾರೆ ಎಂಬ ಮಾಹಿತಿಯೂ ಇದೆ.



ಸೂರಿಯ ಚೀಪ್ ಗಿಮಿಕ್ಸ್

ದುನಿಯಾ ಸೂರಿ ನಿರ್ದೇಶನದ 'ಕೆಂಡಸಂಪಿಗೆ' ಚಿತ್ರದನ್ನು ಗೆಲ್ಲಿಸಲು ಇಡೀ ಸಿನಿಮಾರಂಗವೇ ಎದ್ದು ಕೂತಿದೆ. ಅದರಲ್ಲೂ ಬಹುತೇಕ ನಾಯಕರು ಸಿನಿಮಾ ಪ್ರಚಾರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈ ಮಧ್ಯೆ ಸೂರಿ ಚೀಪ್ ಗಿಮಿಕ್ಸ್ ಮೂಲಕ ಅಡ್ಡದಾರಿಯಲ್ಲಿ ಪ್ರಚಾರ ಮಾಡುತ್ತಿದ್ದಾರೆ. ಹೀಗಾಗಿ ಸ್ವತಃ ಕೆಲವು ನಾಯಕರಿಗೆ ಈ ನಡೆ ಬೇಸರ ತರಿಸಿದೆ.

'ಕೆಂಡಸಂಪಿಗೆ' ಶೂಟಿಂಗ್ ವೇಳೆ ಹಣ ಕಡಿಮೆಯಾದಾಗ, ನಾಲ್ಕು ಲಕ್ಷಕ್ಕೆ ಕಾರನ್ನು ಮಾರಿದ್ದೇನೆ ಎಂದು ಹೇಳುವ ಮೂಲಕ ಸೂರಿ ಸಿನಿಮಾದ ಪ್ರಚಾರ ಮಾಡುತ್ತಿದ್ದಾರೆ. ಆದರೆ, ಸೂರಿ ಪ್ರೆಸ್‌ಮೀಟ್ ಮಾಡುವ ಹೊಟೇಲ್ ಬಿಲ್ಲೇ ಎಂಟು ಲಕ್ಷ ಆಗುತ್ತದೆ. ಅಲ್ಲದೇ



ದುನಿಯಾ ವಿಜಯ್ ಜತೆಗಿನ ಸಂಭಾಷಣೆಯ ತುಣುಕು ಕೂಡ ಚರ್ಚೆಗೆ ಗ್ರಾಸವಾಗಿದೆ. 'ಕೆಂಡಸಂಪಿಗೆ' ಸಿನಿಮಾ ಶತದಿನ ಕಂಡರೂ, ಅದನ್ನು ನಾನು ನೋಡುವುದಿಲ್ಲ ಎಂಬ ಡೈಲಾಗ್ ಬರೆದು, ಅದನ್ನು ವಿಜಯ್ ಕಡೆಯಿಂದ ಹೇಳಿಸಿದ್ದಾರೆ ಸೂರಿ.

ಭರವಸೆಯ ಕೆಲವೇ ಕೆಲವು ನಿರ್ದೇಶಕರಲ್ಲಿ ಸೂರಿ ಕೂಡ ಒಬ್ಬರು. ಯೋಗರಾಜ್ ಭಟ್‌ಗಿಂತಲೂ ಸೂರಿ ಜಾಣ. ಆದರೆ, ಇಂತಹ ಕೆಲಸಗಳ ಮೂಲಕ ಸೂರಿ ಸಣ್ಣತನ ತೋರಿಸುತ್ತಿದ್ದಾರೆ. ಇದನ್ನು ತಿದ್ದಿಕೊಳ್ಳುವುದು ಒಳ್ಳೆಯದು ಅನ್ನುತ್ತಾರೆ ಸೂರಿಯನ್ನು ಇಷ್ಟಪಡುವ ಜನರು.

ಬ್ರೇಕ್ ನೀಡುವ ಟೈಟಲ್

ನೇಹಾ ಪಾಟೀಲ್ ನಟನೆಯ 'ಟೈಟಲ್ ಬೇಕಾ' ಸಿನಿಮಾ ಈ ವಾರ ಬಿಡುಗಡೆ ಆಗುತ್ತಿದೆ. ಹದಿನೈದಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿರುವ ನೇಹಾಗೆ ಈವರೆಗೂ ಒಂದೇ ಒಂದು ಬ್ರೇಕ್ ಸಿಕ್ಕಿಲ್ಲ. ಹೀಗಾಗಿ 'ಟೈಟಲ್ ಬೇಕಾ' ಚಿತ್ರದ ಬಗ್ಗೆ ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಈ ಮಾತನ್ನು ಸ್ವತಃ ನೇಹಾ ಪಾಟೀಲ್ ಹೇಳಿಕೊಂಡಿದ್ದಾರೆ.

"ಇದೇ ಮೊದಲ ಬಾರಿಗೆ ನಾನು ವಿಭಿನ್ನ ಪಾತ್ರ ಮಾಡಿದ್ದೇನೆ. ನಿರ್ದೇಶಕ ಆನಂದ್ ನನಗಾಗಿಯೇ ವಿಶೇಷ ಪಾತ್ರ ಸೃಷ್ಟಿಸಿದ್ದಾರೆ ಎಂದೂ ಭಾವಿಸಿದ್ದೇನೆ. ನಿರ್ದೇಶಕರು ಏನು ಅಂದುಕೊಂಡಿದ್ದರೋ, ಅದರಂತೆಯೇ ಸಿನಿಮಾ ಬಂದಿದೆ. ಹೊಸಬರ ಚಿತ್ರಕ್ಕೆ ಸಿನಿಮಾರಂಗವೂ ಚೆನ್ನಾಗಿ ಸ್ಪಂದಿಸುತ್ತಿದೆ" ಎನ್ನುವುದು ನೇಹಾ ಮಾತು.

ಸಿನಿಮಾದ ವಿಶೇಷತೆ ಅಂದರೆ, ನೈಜತೆಗೆ ಹೆಚ್ಚು ಮಹತ್ವ ನೀಡಿದ್ದಾರೆ ನಿರ್ದೇಶಕರು. ಹಲವು ಘಟನೆಗಳನ್ನು ಆಧರಿಸಿಯೇ ಚಿತ್ರಕತೆ ಬರೆದಿದ್ದಾರೆ.



ನೇಹಾ ಪಾಟೀಲ್

ಮದ್ವೆ ತಯಾರಿಯಲ್ಲಿ ಪ್ರಿಯಾಮಣಿ



ರಿಯಾಲಿಟಿ ಶೋನಲ್ಲಿ ಬಿಜಿ ಆಗಿದ್ದ ಪ್ರಿಯಾಮಣಿ, ಈಗ ಅಲ್ಲಿಂದಲೂ ಹಿಂದೆ ಬಂದಿದ್ದಾರೆ. ಅಲ್ಲದೇ ಅವರು ಯಾವುದೇ ಹೊಸ ಸಿನಿಮಾಗಳನ್ನು ಒಪ್ಪಿಕೊಳ್ಳುತ್ತಿಲ್ಲ. ಕಾರಣ, ಸದ್ಯ ಅವರು ಮದ್ವೆಯ ಸಿದ್ಧತೆಯಲ್ಲಿದ್ದಾರೆ. ಸಹಿ ಮಾಡಿದ ಪ್ರಾಜೆಕ್ಟ್‌ಗಳನ್ನು ಮುಗಿಸುತ್ತಲೇ, ಮದ್ವೆ ತಯಾರಿಯನ್ನೂ ಮಾಡಿಕೊಳ್ಳುತ್ತಿದ್ದಾರೆ.

ಯೋಗರಾಜ್ ಭಟ್ ನಿರ್ದೇಶನದ 'ದನಕಾಯೋಣ' ಚಿತ್ರದ ಶೂಟಿಂಗ್‌ನಲ್ಲಿ ಬಿಜಿ ಆಗಿರುವ ಪ್ರಿಯಾಮಣಿ, ಆನಂತರ ತಮಿಳಿನ ಚಿತ್ರಕ್ಕೆ ಕೆಲಸ ಮಾಡಬೇಕಿದೆ. ಇವೆರಡೂ ಪ್ರಾಜೆಕ್ಟ್ ಮುಗಿದನಂತರ, ... ಮಟ್ಟಿಗೆ ಸಿನಿರಂಗದಿಂದ ದೂರ ಇರಲಿದ್ದಾರೆ ಎನ್ನುವುದು ... ಮಾತು.

ಕನ್ನಡದಲ್ಲಿ ಇವರ ಎರಡು ಚಿತ್ರಗಳು ಬಿಡುಗಡೆಗೆ ಸಿದ್ಧ... ಚಿತ್ರಗಳು ವಿಶೇಷ ಕಥಾಹಂದರದಲ್ಲಿ ಮೂಡಿಬಂದಿವೆ. ದುನಿ... ಜತೆ 'ದನಕಾಯೋಣ' ಚಿತ್ರದಲ್ಲಿ ಕಾಣಿಸಿಕೊಂಡಿದ್ದರೆ, ಕೋವ... ಚಿತ್ರಕತೆ, ನಿರ್ದೇಶನ ಪುಟ್ಟಣ್ಣ ಎಂಬ ಚಿತ್ರದಲ್ಲೂ ನಟಿಸಿದ್ದಾ...


ಇದು ಶಂಕರ್ ಸಿನಿಮಾ ಅಲ್ಲ



ಶಂಕರ್ ನಿರ್ದೇಶನದಲ್ಲಿ 'ನಾಗರಕಟ್ಟೆ' ಎಂಬ ಸಿನಿಮಾ ಮೂಡಿ ಬರುತ್ತಿದೆ. ಈ ಚಿತ್ರವು ಶಂಕರ್‌ನಾಗ್‌ರ ಬದುಕನ್ನು ನೆನಪಿಸು... ಹೇಳಲಾಗಿತ್ತು. ಆದರೆ, ಸಿನಿಮಾಗ... ಶಂಕರ್‌ನಾಗೂ ಯಾವುದೇ ಸಂಬ... ಅಂತಾರೆ ನಿರ್ದೇಶಕರು.

ಆದರೆ, ನಟ ಶಂಕರ್‌ನಾಗ್... ನಿರ್ದೇಶಕರಿಗೆ ಪ್ರಾಣ. ಹೀಗಾಗಿ ... ಇಂಥದ್ದೊಂದು ಶೀರ್ಷಿಕೆ ಇಟ್ಟಿ... ಅಲ್ಲದೇ ಸಿನಿಮಾದ ಕಥಾನಾಯ... ಅಭಿಮಾನಿಯೂ ಆಗಿರುವುದರಿಂದ ಇದೇ ಶೀರ್ಷಿಕೆ ಸೂಕ್ತ ಅನಿಸಿದೆಯಂತೆ.

ಸಾಧನೆ ಮಾಡಲೆಂದು ಸಿನಿಮಾರಂಗಕ್ಕೆ ಬರುವ ಯುವಕನೊಬ್ಬನ ಕತೆ ಇಲ್ಲಿದೆ. ಚಿತ್ರಕತೆಯ ಬಹುತೇಕ ಕಡೆ ನಿರ್ದೇಶಕರ ಸ್ವಂತ ಅನುಭವಗಳನ್ನೇ ಹಂಚಿಕೊಂಡಿದ್ದಾರೆ. ಈ ಚಿತ್ರದಲ್ಲಿ ಮತ್ತು ನಿಹಾರಿಕಾ ನಾಯಕಿಯರು. ಪಟ್ರೆ ಅಜಿತ್ ಹಾಗೂ ಅನೀಶ್ ನಾಯಕರು.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676...
Fax : 26604536, E-mail :lankesh70@rediffmail.com